ಬೆಲೆ: ಎರಡು ಆಣೆ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ
ತರಿಸಿಕೊಂಡಲ್ಲಿ ೫ ಆಣೆ
ಹೆಚ್ಚಿಗೆ ಬೀಳುವವು.

ಕರ್ಮವೀರ

KARMAVEER
WEEKLY
HUBLI
MAY 6
1946

ಸಂಪಾದಕರು :
ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : H. R. Purohit, M. A.

ಸಂಪುಟ ೧೮] ಹುಬ್ಬಳ್ಳಿ ಸೋಮವಾರ ತಾರೀಖು ೬—೫—೧೯೪೬ [ಸಂಚಿಕೆ ೫

ಹಿಂದುಸ್ತಾನದ ಆಹಾರ ಪರಿಸ್ಥಿತಿಯ ಭೀಕರ ರೂಪ

"ಹಲ ಜಿಲ್ಲೆಗಳು ಪ್ರಪಾತದ ಅಂಚಿನಲ್ಲಿವೆ"

ಮರಣ ಸಂಖ್ಯೆಯನ್ನು ಊಹಿಸುವದೂ ಅಸಾಧ್ಯ!

ಹರ್ಬರ್ಟ ಹೂವರರ ಅಭಿಪ್ರಾಯ

ಆಸ್ಟ್ರೇಲಿಯಾ, ಜಾವಾಗಳಿಂದ ಆಹಾರ ತರಿಸಿಕೊಳ್ಳಬೇಕು

ಹಿಂದುಸ್ತಾನದ ಆಹಾರ ಪರಿಸ್ಥಿತಿಯ ಗಂಭೀರತೆ, ಅಲ್ಲ ಭಯಾನಕತೆ, ಈ ವರೆಗೆ ಜಗತ್ತಿನ ಜನತೆಗೆ ಸಾಕಷ್ಟು ಮನೋನೀತವಾಗಿದ್ದಿಲ್ಲ. ಇಂಗ್ಲಂಡದಲ್ಲಿಯೂ ಅಮೇರಿಕೆಯಲ್ಲಿಯೂ ಹಿಂದೀ ಆಹಾರ ಶಿಷ್ಟಮಂಡಳದ ಪ್ರಾರ್ಥನೆ, ಭಿಕ್ಷಾಟನೆಗಳು ಅಲ್ಲಿ ಸಾಕಷ್ಟು ಪರಿಣಾಮವನ್ನುಂಟು ಮಾಡಲಿಲ್ಲ. ಸಂಯುಕ್ತ ಆಹಾರ ಸಮಿತಿ ಹಲದಿನಗಳ ವರೆಗೆ ಅನಿಶ್ಚಿತ ಮನೋವೃತ್ತಿಯನ್ನು ತೋರಿಸಿ ಕೊನೆಗೊಮ್ಮೆ ಹಿಂದುಸ್ತಾನಕ್ಕೆ ಧಾನ್ಯಗಳನ್ನು ಮಂಜೂರು ಮಾಡಿದಾಗ ಅದು ಹಿಂದುಸ್ತಾನದ ಕನಿಷ್ಠ ಬೇಡಿಕೆಯ ನೂರಕ್ಕೆ ಅರವತ್ತು ಅಂಶಕ್ಕಿಂತಲೂ ಕಡಿಮೆಯಾಗಿತ್ತು. ಹಿಂದುಸ್ತಾನ ಅವಶ್ಯಕತೆಗಿಂತ ಹೆಚ್ಚು ಧಾನ್ಯಗಳನ್ನು ಬೇಡುತಿದೆಯೆಂಬ ಸಂಶಯವೇ ಸಂಯುಕ್ತ ಆಹಾರ ಮಂಡಲದ ಸದಸ್ಯರ ಮನಸ್ಸಿನಲ್ಲಿ ಮೂಡಿದಂತೆ ತೋರಿತು. ಯುದ್ಧಜರ್ಜರಿತವಾದ ಯುರೋಪಿನ ಪರಿಸ್ಥಿತಿ ಮತ್ತು ಅದನ್ನು ಸುಧಾರಿಸುವದೇ ಎಲ್ಲರ ಮನಸ್ಸನ್ನೂ ಸೆಳೆದಿತ್ತು. ಹೊರಟು ಮೂರೇ ವರ್ಷದ ಕೆಳಗೆ ಲಕ್ಷಾಂತರ ಪ್ರಾಣಗಳನ್ನು ಬರಗಾಲ ಮಾರಿಗೆ ಬಲಿಗೊಟ್ಟ ಹಿಂದುಸ್ತಾನದ ಮುಂದೆ ಪುನಃ ಬಾಯಿ ತೆರೆದು ನಿಂತಿರುವ ಕ್ಷಾಮಕ್ಕೆ ಸಾಕಷ್ಟು ಲಕ್ಷ್ಯ ದೊರೆತಿದ್ದಿಲ್ಲ. ಎಲ್ಲಿಯವರೆಗೆಂದರೆ, ಹಿಂದುಸ್ತಾನ ಸರಕಾರದ ಕರೆಯನ್ನು ಮನ್ನಿಸಿ ಇಲ್ಲಿಯ ಪರಿಸ್ಥಿತಿಯನ್ನು ಕಣ್ಣುಟ್ಟ ನೋಡಲು ಬಂದ ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರ ಬರಗಾಲ ಪರಿಶೀಲನ ಸಮಿತಿಯ ಅಧ್ಯಕ್ಷರಾದ ಮಿ. ಹರ್ಬರ್ಟ ಹೂವರರು ಈ ದೇಶದಲ್ಲಿ ಕಾಲಿಟ್ಟ ಸ್ವಲ್ಪ ಕಾಲದಲ್ಲಿಯೆ ಇಲ್ಲಿ "ಬರಗಾಲ ಪರಿಸ್ಥಿತಿಯಿಲ್ಲ" ಎಂದು ಹೇಳಿ ಹಿಂದೀಯರ ಆಶೆಗೆ ತಣ್ಣೀರೆರೆದರು !

ಅಭಿಪ್ರಾಯ ತಿದ್ದಿಕೊಂಡರು

ಆದರೆ ಹೂವರ ಸಾಹೇಬರಿಗೆ ತಮ್ಮ ಅಭಿಪ್ರಾಯವನ್ನು ತಿದ್ದಿಕೊಳ್ಳಬೇಕಾದ ಪ್ರಸಂಗ ಬೇಗನೇ ಬಂತು. ಹಿಂದುಸ್ತಾನದ ಕೆಲ ಪ್ರದೇಶಗಳಲ್ಲಿ, ಅದೂ ದಕ್ಷಿಣ ಭಾರತದಲ್ಲಿ ಅವರು ಮಾಡಿದ ಚುಟುಕು ಸಂಚಾರದ ಅನುಭವ ಅವರಿಗೆ ಸಾಕಷ್ಟು ಸತ್ಯಸ್ಥಿತಿಯನ್ನು ಮನದಟ್ಟುಮಾಡಿತು. ಬ್ಯಾಂಗಕೋಕಕ್ಕೆ ಹಾರುವ ಮುಂಚೆ ಬೆಂಗಳೂರಲ್ಲಿ ಕರೆದ ಪತ್ರಿಕಾ ಪರಿಷತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತ ಅವರು "ನಮ್ಮ ಅಮೇರಿಕೆಯಲ್ಲಿ ಬರಗಾಲವೆಂದರೆ ಪ್ರತ್ಯಕ್ಷ ಉಪವಾಸವೆಂಬ ಅರ್ಥವಿದೆ. ಹಿಂದುಸ್ತಾನದಲ್ಲಿ ಅಂಥ ಸ್ಥಿತಿ ಇನ್ನೂ ಇಲ್ಲವೆಂದಷ್ಟೆ ನನ್ನ ಅಭಿಪ್ರಾಯವಿತ್ತು" ಎಂದು ವಿವರಿಸಬೇಕಾಯಿತು. ಮತ್ತು ಜರ್ಮನಿಯಲ್ಲಿ ತಲಾ ಬರಿ ೫ ಔಂಸು ಧಾನ್ಯ ಮಾತ್ರ ದೊರೆಯುತ್ತಿರುವದರಿಂದ ೧೨ ಔಂಸು ದೊರೆಯುತ್ತಿರುವ ಹಿಂದೀಯರು ತಮ್ಮ ಭಾಗ್ಯವನ್ನು ಕೊಂಡಾಡಬೇಕೆಂದು ಅಭಿಪ್ರಾಯಪಟ್ಟಿದ್ದ ಹೂವರರು "ಮಾನವ ಯಾತನೆಯಲ್ಲಿ ಪರಿಭೇದ ಮಾಡಲು ಬರುವದಿಲ್ಲ" ಎಂದು ಅನ್ನಬೇಕಾಯಿತು.

ಬೆಂಗಳೂರಲ್ಲಿ ಹೂವರರು ಹೊರಡಿಸಿದ ಹೇಳಿಕೆಯ ಕೆಲ ಅಂಶಗಳು ಇಲ್ಲಿ ಎತ್ತಿ ಕೊಡಲು ಅರ್ಹವಾಗಿವೆ:

"೨೩ ಕೋಟಿ ಜನಸಂಖ್ಯೆಯುಳ್ಳ ಹಿಂದೀ ಪ್ರಾಂತಗಳು ಆಹಾರದ ತೊಡಕುಗಳಲ್ಲಿ ಸಿಲುಕಿಕೊಂಡಿವೆ. ಆಹಾರ ಸಮಸ್ಯೆಯ ಪ್ರಚಂಡತೆಯನ್ನು ಸಂಖ್ಯಾರೂಪದಲ್ಲಿ ವ್ಯಕ್ತಗೊಳಿಸುವದು ಸಾಧ್ಯವುಂಟು. ಅದರ ಆಕಾರವನ್ನು ನಿದರ್ಶಿಸಲು ಅದೊಂದೇ ಮಾರ್ಗ ಆದರೆ ಇದರಲ್ಲಿ ಅಡಕವಾದ ಗಂಡಾಂತರದ, ಮಾನವಯಾತನೆಯ ವಿಶಾಲತೆಯನ್ನು ಬಡ ಅಂಕೆಸಂಖ್ಯೆಗಳು ತೋರಿಸಿಕೊಡಲಾರವು."

ಸ್ವಾವಲಂಬಿ ಜಿಲ್ಹೆಗಳು, ತಮ್ಮ ಸ್ವಂತ ಅವಶ್ಯಕತೆಯನ್ನು ಪೂರೈಸಿಕೊಳ್ಳಬಲ್ಲ ರೈತರು ಈ ಎಲ್ಲವನ್ನು ಲೆಕ್ಕದಿಂದ ಹೊರಗಿಟ್ಟರೂ ಆಹಾರಾಭಾವದಿಂದ "ಪ್ರಾಣಾಪಾಯಕ್ಕೆ ಗುರಿಯಾಗಬಹುದಾದವರ ಸಂಖ್ಯೆ ಕೋಟಿಗಟ್ಲೆಯಷ್ಟಿದೆ." ಈಚೆಗಿನ ಸೀದಾ ಕಡಿತಕ್ಕಿಂತ ಮುಂಚೆ ತಲಾ ಆಹಾರ ಸೀದಾದಲ್ಲಿ ಹಿಂದೀಯನಿಗೆ ದೊರೆಯುತಿದ್ದ ೧೬೦೦ ಕೆಲೊರಿ ಆಹಾರ ಸತ್ವ ಈಗ ೧೪೦೦ ಕಿಂತಲೂ ಕೆಳಕ್ಕಿಳಿದಿದೆ. ಜಾಣತನದಿಂದ ಸೀದಾಕ್ರಮವನ್ನು ಬಳಸಿದ್ದರಿಂದಲೇ ಪೂರ್ಣ ಉಪವಾಸವನ್ನು ಈ ವರೆಗೆ ತಡೆಯುವದು ಸಾಧ್ಯವಾಗಿದೆ. "ಆದರೆ ಇಂದು ನಾವು ಮೋಟಾರ್ ಮೂಲಕ ಸಂಚರಿಸಿದ ಮೈಸೂರಿನ ಪ್ರದೇಶಗಳಲ್ಲಿ ಈ ಸೀದಾ ವ್ಯವಸ್ಥೆ ಕೂಡ ಕುಸಿದುಬೀಳತೊಡಗಿದೆ. ಧಾನ್ಯ ಸೀದಾದ ಎರಡು ಮೂರಾಂಶದಷ್ಟರಲ್ಲಿ ಶೇಂಗಾ ಮತ್ತು ದನಗಳ ಮೇವಿನಷ್ಟು ಕೂಡ ಸಾರವಿಲ್ಲ."

ಈ ಬಗೆಯಾಗಿ ದನಗಳ ಆಹಾರಕ್ಕಿಂತ ನಿಸ್ಸಾರವಾದ ಆಹಾರವನ್ನು ಹಿಂದೀಯರು ಪಡೆಯುತ್ತಿರುವಾಗ ನಮ್ಮ ನೆರೆನಾಡಾದ ಆಸ್ಟ್ರೇಲಿಯಾದಲ್ಲಿ ಪ್ರಜೆಗಳ ಆಹಾರ ಸತ್ವ ತಲಾ ೩೦೦೦ ಕೆಲೊರಿಗಳಷ್ಟಿದೆಯೆಂದೂ ರಾಷ್ಟ್ರೀಯ ಆರೋಗ್ಯವನ್ನು ಕಾಪಾಡಿಕೊಂಡು ಹೋಗಲು ಬೇಕಾಗುವ ಕನಿಷ್ಠ ತಲಾ ಕೆಲೊರಿ ಪ್ರಮಾಣ ೨೨೦೦ ಎಂದೂ ಹೂವರರು ತಾ. ೨೮ಕ್ಕೆ ದಿಲ್ಲಿ ಆಕಾಶವಾಣಿಯಿಂದ ಆಸ್ಟ್ರೇಲಿಯನ್ನರಿಗೆ ಮಾಡಿದ ಬಿನ್ನಹ ಭಾಷಣದಲ್ಲಿ ಹೇಳಿದ್ದಾರೆ. ಆದುದರಿಂದ ಆಸ್ಟ್ರೇಲಿಯನ್ನರು ಹಿಂದೀಯರಿಗೆ ಗೋದಿ ಕೊಟ್ಟು ಸಹಾಯ ನೀಡಬೇಕೆಂದು ಅವರು ಸೂಚಿಸಿರುವರು.

ಪ್ರಪಾತದ ಅಂಚಿನಲ್ಲಿ

ಹೂವರರ ಬೆಂಗಳೂರು ಹೇಳಿಕೆ ನಿಜವಾದ ಗಂಡಾಂತರದ ಸ್ವರೂಪವನ್ನು ಸ್ಪಷ್ಟಗೊಳಿಸುತ್ತ ಹೇಳುವದಿದು:

"ಇಷ್ಟಕ್ಕೇ ಕತೆ ಮುಗಿದಿದ್ದರೆ ಈ ಪರಿಸ್ಥಿತಿಯನ್ನು ಜಗತ್ತಿನ ಸಹಾನುಭೂತಿಗೆ ಪಾತ್ರವಾದ ಮಹಾ ದುಃಖಸಾಗರವೆಂದು ಬಗೆಯಬಹುದಾದರೂ ಅಭೂತಪೂರ್ವವಾದ ಭಾವೀದುರಂತವೆಂದು ತಿಳಿಯಲು ಅಸ್ಪದವಿರಲಿಲ್ಲ. ಆದರೆ ಅನೇಕ ದೊಡ್ಡ ಜಿಲ್ಹೆಗಳು ಹೊರಗಿನ ಸಹಾಯವಿಲ್ಲದೆ ಹೋದರೆ ಸದ್ಯದ ಕಡಿಮೆ ಮಾಡಿದ ಸೀದಾ ಪ್ರಮಾಣದಲ್ಲಿ ಕೂಡ ೩೦ ರಿಂದ ೯೦ ದಿನಗಳಿಗಿಂತ ಹೆಚ್ಚು ಕಾಲ ಸಾಗಿಸಿಕೊಂಡು ಹೋಗಲಾರವೆಂಬುದೀಗ ಗಂಡಾಂತರದ ಗಂಡಾಂತರ ಅನೇಕ ಜಿಲ್ಹೆಗಳ ಪ್ರಪಾತದ ಅಂಚಿನಲ್ಲಿವೆ. ಕೊರತೆ ಪ್ರದೇಶಗಳಿಗೆ ಆಯಾತವಾಗದಿದ್ದರೆ ಮರಣ ಸಂಖ್ಯೆ ಎಷ್ಟಾಗಬಹುದೆಂಬುದು ಕಲ್ಪನಾತೀತವಾದುದು. ಅದನ್ನು ಎಣಿಸಿಕೊಂಡರೆ ನಡುಕ ಬರುತ್ತದೆ. ಈ ಪ್ರದೇಶಗಳಿಗೆ ಬರುವ ಪ್ರತಿಯೊಂದು ಟನ್ ಆಹಾರದಿಂದ ಮರಣ ಸಂಖ್ಯೆ ಕಡಿಮೆಯಾಗಬಲ್ಲದು."

ಈಗಿನ ೧೪೦೦ ಕೆಲೊರಿ ಪ್ರಮಾಣದಲ್ಲಿ (ರಾಷ್ಟ್ರೀಯ ಆರೋಗ್ಯ ಕಾಪಾಡಲು ಕಡ್ಡಿಮೆಯೆಂದರೆ ೨೨೦೦ ಕೆಲೊರಿ ಬೇಕು!) ಆಹಾರ ಪೂರೈಕೆಯನ್ನು ಹರಿಗಡಿಯದಂತಿಡಲು ಕೂಡ ಇದೇ ಮೇ ತಿಂಗಳಲ್ಲಿ ೩,೪೬,೦೦೩ ಟನ್ ಗೋದಿ ಅಕ್ಕಿ ಮತ್ತು ಇತರಧಾನ್ಯ ಬೇಕೆಂದು ಹಿಂದುಸ್ತಾನ ಸರಕಾರದ ಅಧಿಕಾರಿಗಳು ಲೆಕ್ಕಹಾಕಿದ್ದಾರೆ. ಜೂನನಲ್ಲಿ ೩,೫೦,೦೦೦ ಟನ್ ಜುಲೈಯಲ್ಲಿ ೪,೪೧,೦೦೦ ಟನ್ ಬೇಕು, ಎಂದು ಹೂವರರು ಹೇಳುತ್ತಾರೆ. ಆದರೆ ಈಗಾಗಲೆ ಹೊರಗಿನಿಂದ ಹಿಂದುಸ್ತಾನಕ್ಕೆ ಹೊರಟಿರುವದು ಬರಿ ೩,೦೦,೦೦೦ ಟನ್ ಮಾತ್ರ. ಇದರಲ್ಲಿಯೂ ಕೆಲವಂಶ ಜುಲೈ ವರೆಗೆ ಇಲ್ಲಿ ತಲಪಲಾರದು. ಜುಲೈ, ಅಗಸ್ಟಗಳಲ್ಲಿ ಮತ್ತೆ ತಿಂಗಳಿಗೆ ೫,೨೨,೦೦೦ ಟನ್ ಧಾನ್ಯ ಬೇಕಾಗುವವು. ಅರ್ಥಾತ್ ಮೇ ತಿಂಗಳಿಗೆಂದು ಗುರುತು ಹಾಕಲಾದ ಧಾನ್ಯವೇ ಪೂರ್ಣ ಕಳಿಸಲ್ಪಟ್ಟಿಲ್ಲ— ಅದರಲ್ಲಿ ಒಂದಂಶ ಜುಲೈ ತಿಂಗಳ ಮೊದಲು ತಲಪುವಂತಿಲ್ಲ. ಪರಿಸ್ಥಿತಿ — "ಪ್ರಪಾತದ ಅಂಚಿಗೆ ಮುಟ್ಟಿದೆ" ಎಂಬುದಕ್ಕೆ ಬೇರೇನು ಪ್ರಮಾಣ ಬೇಕು ?

ಅವರ ಸಲಹೆಗಳು

ಕೆಲವೇ ದಿನಗಳ ಪರಿಶೀಲನೆಯಿಂದ ಹೂವರರು ಮನಗಂಡ ವಿಷಯಗಳು ಅವರ ಚಾಣಾಕ್ಷತೆಯ ನಿದರ್ಶನ. ಆದರೆ ಅವರು ಸೂಚಿಸುವ ಉಪಾಯಗಳು ಮಾತ್ರ ಅಷ್ಟು ಆಶಾದಾಯಕವಾಗಿಲ್ಲ. "ಪರಿಸ್ಥಿತಿ ಅಪರಿಹಾರ್ಯವಾಗಿಲ್ಲ"ವೆಂದು ಅವರು ಹೇಳುತ್ತಾರೆ ನಿಜ. ಯಾವ ರಾಜಕೀಯ ಅಥವಾ ಆರ್ಥಿಕ ಸ್ವಾರ್ಥಕ್ಕೊಳಗಾಗದೆ ಅಮೇರಿಕೆ "ಕೇವಲ ಮಾನವಸೇವೆ"ಯ ಧ್ಯೇಯವನ್ನು ಲಕ್ಷಿಸಿ ಸಹಾಯ ಮಾಡುವದೆಂದೂ ಅದಕ್ಕಾಗಿಯೇ ಅಮೇರಿಕೆಯ ಸರಕಾರ ಜನತೆಗೆ ಬಿನ್ನವಿಸಿಕೊಂಡಿದೆಯೆಂದೂ ಅವರು ಆಶ್ವಾಸನ ಕೊಡುವದೂ ನಿಜ. ಆದರೆ ಜಗತ್ತಿನಲ್ಲಿ ಒಟ್ಟು ೧೧೦ ಲಕ್ಷ ಟನ್ ಆಹಾರ ಧಾನ್ಯದ ಕೊರತೆಯುಂಟಾಗಿದೆ ಮತ್ತು ಅದರಲ್ಲಿ ಪೇಟೆಯಲ್ಲಿ ದೊರಕಬಹುದಾದುದು ಕೇವಲ ೬೦ ಲಕ್ಷ ಟನ್. ಈ ೫೦ ಲಕ್ಷ ಟನ್ ನಿಚ್ಚಳ ಕೊರತೆಯಲ್ಲಿ, ಜಗತ್ತಿನಲ್ಲಿ ನೂರಕ್ಕೆ ೪೦ ರಷ್ಟು ಆಹಾರ ಉತ್ಪನ್ನ ಮಾಡುವ ಅಮೇರಿಕೆ ಕೆಲವೊಂದು ಅಂಶವನ್ನು ಮಾತ್ರ "ಮಾನವ ದಯೆಯಿಂದ ಪ್ರೇರಿತನಾಗಿ" ಕೊಡಬಲ್ಲದು. ಆದರೆ ಏಶಿಯಾದಲ್ಲೆಷ್ಟೋ ಯುರೋಪಿನಲ್ಲೂ ಅಷ್ಟೇ ವಿಪನ್ನಾವಸ್ಥೆಯುಂಟು. ಇದೊಂದು ಕಡೆ. ಇನ್ನೊಂದು ತೊಡಕೆಂದರೆ ದೂರದ್ದು. ಉತ್ತರ ಅಮೇರಿಕೆಯಿಂದ ಕಳಿಸಿದ ಧಾನ್ಯ ಹಿಂದುಸ್ತಾನಕ್ಕೆ ತಲಪಬೇಕಾದರೆ ಕಡಿಮೆಯೆಂದರೆ ಆರುವಾರಗಳಾದರೂ ಬೇಕೇ ಬೇಕು. ಹಿಂದುಸ್ತಾನದ ಆಹಾರ ಬಿಕ್ಕಟ್ಟು ಬರುವದು ತಿಂಗಳುಗಳ ಮಾತಾಗಿರದೆ ವಾರಗಳ ಮಾತಾಗಿಬಿಟ್ಟದೆ. ಅಂದಬಳಿಕ ಹಿಂದುಸ್ತಾನ ಸದ್ಯಕ್ಕಂತೂ ಉತ್ತರಾರ್ಧ ಗೋಲದಿಂದ ಯಾವ ಸಹಾಯವನ್ನೂ ನಿರೀಕ್ಷಿಸಿ ಪ್ರಯೋಜನವಿಲ್ಲೆಂಬ ಭಾವವನ್ನು ಹೂವರರು ವ್ಯಕ್ತಗೊಳಿಸಿದ್ದಾರೆ. ಆದುದರಿಂದ ಆಸ್ಟ್ರೇಲಿಯಾ, ಥಾಯಲಂಡ್, ಜಾವಾ, ಇಜಿಪ್ತಗಳಿಂದಲೇ ಹೇಗಾದರೂ ನಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕೆಂದು ಅವರ ಹೇಳಿಕೆ. ಆಸ್ಟ್ರೇಲಿಯಾದಿಂದ ೨ ವಾರಗಳಲ್ಲಿ ಧಾನ್ಯ ಬಂದು ಸೇರಬಲ್ಲದು. ಅದಕ್ಕಾಗಿಯೇ ಹೂವರರು ಅವರಿಗೆ ಬಿನ್ನೈಸಿಕೊಂಡಿದ್ದು. ಥಾಯಲ್ಯಾಂಡಿನಿಂದ ಅಕ್ಕಿಯನ್ನು ಹೇಗಾದರೂ ದೊರಕಿಸಿಕೊಳ್ಳಬೇಕು. ಕಳೆದ ಅಕ್ಟೋಬರದಿಂದ ಹಿಡಿದು ಥಾಯಲ್ಯಾಂಡಿನ ಅಕ್ಕಿಯನ್ನು ಕುರಿತು ಅನಂತ ವಾದವಿವಾದ ನಡೆದಿದೆ. ಈಗ ಹೆಚ್ಚು ಬೆಲೆಯನ್ನಾದರೂ ಕೊಡಲೊಪ್ಪಬೇಕು. ಬ್ರಹ್ಮದೇಶ ಇರಾಕುಗಳನ್ನೂ ತಡವಿ ನೋಡಬೇಕು. ಇಜಿಪ್ತದಿಂದ ಮತ್ತು ಹಿಂದುಸ್ತಾನದಲ್ಲಿಯೇ ಉಳಿತಾಯ ಪ್ರದೇಶಗಳಿಂದ ಮುಂದಿನ ಬೆಳೆ ಬಂದನಂತರ ತಿರುಗಿ ಕೊಡುವ ಶರ್ತಿನ ಮೇಲೆ ಕೈಗಡ ತರಬೇಕೆಂದು ಹೂವರರು ಸೂಚಿಸಿದ್ದಾರೆ. ಜಗತ್ತಿನ ಹಿಟ್ಟಿನ ಗಿರಣಿಗಳು ಕೆಲಕಾಲ ತಮ್ಮ ಕೆಲಸ ತಡೆಹಿಡಿಯಬೇಕು ಎಂದು ಅವರು ಪ್ರಾರ್ಥಿಸಿದ್ದಾರೆ. ಏಕೆಂದರೆ ತ್ರಾಸಕ್ಕೊಳಗಾಗಿರುವ ದಕ್ಷಿಣ ಹಿಂದುಸ್ತಾನದ ಜನರು ಅಕ್ಕಿಯ ಅಭ್ಯಾಸವುಳ್ಳವರು. ಅವರಿಗೆ ಅನಿವಾರ್ಯವಾಗಿ ಗೋದಿ ಪೂರೈಸಿದರೂ ಅದನ್ನೂ ಬೇಯಿಸಿ ಅನ್ನದಂತೆಯೇ ಅವರು ಉಪಯೋಗಿಸಬೇಕು. ರೊಟ್ಟಿಮಾಡುವ ಅಭ್ಯಾಸವಾಗಲಿ ಸಲಕರಣೆಗಳಾಗಲಿ ಅವರಲ್ಲಿಲ್ಲ ಅದ್ದರಿಂದ ಹಿಟ್ಟಿನ ಬದಲು ಇಡಿ ಗೋದಿಯನ್ನೇ ಕಳಿಸುವದು ಒಳಿತು.

(೧೬ ನೇ ಪುಟ ನೋಡಿರಿ)

ಕರ್ನಾಟಕದ ಅಂದು ಮತ್ತು ಇಂದು

[ಶ್ರೀ ಶಂ. ಬಾ. ಜೋಶಿ]

[ಹಿಂದಿನ ಸಂಚಿಕೆಯಿಂದ ಮುಗಿದದ್ದು]

ಕನ್ನರ ಆರ್ಯೀಕರಣ

ಯದು ತುರ್ವಸುಗಳ ಆರ್ಯೀಕರಣಕ್ಕೆ ಋಗ್ವೇದ ಕಾಲದಿಂದಲೇ ಆರಂಭವಾಯಿತೆಂದು ತೋರುತ್ತದೆ. ಹಲವು ಶತಮಾನಗಳ ಆದರ ಫಲವಾಗಿಯೆ ಶ್ರೀಕೃಷ್ಣನಂತಹನು ಕಂಸ ಜರಾಸಂಧಾದಿಗಳ ಮಧ್ಯದಲ್ಲಿ ಉದಯಿಸಿದನೆಂದು ಹೇಳಬಹುದು. ಋಗ್ವೇದದಲ್ಲಿ ಬರುವ ಅಗಸ್ತ್ಯನಿಗೂ ದಕ್ಷಿಣ ದೇಶಕ್ಕೂ ನಿಕಟ ಸಂಬಂಧದ ಹಲವು ಕತೆಗಳಿವೆ. ಈ ಕತೆಗಳೆಲ್ಲ ಆ ಅಗಸ್ತ್ಯನಿಗೇ ಸಂಬಂಧಪಟ್ಟವೊ ಅಥವಾ ಆತನ ಪೀಳಿಗೆಯ ಮುಂದಿನ ಬೇರೆ ಅಗಸ್ತ್ಯರಿಗೆ ಸಂಬಂಧಿಸಿದವೋ ತಿಳಿಯದು. ಆದರೂ ನಮ್ಮ ನಾಡಿನ ಚರಿತ್ರೆಯಲ್ಲಿರುವ ಒಂದು ದೊಡ್ಡ ಕೂಟಪ್ರಶ್ನೆಯ ಮೇಲೆ ಅಗಸ್ತ್ಯನ ಒಂದು ಕತೆಯು ತುಂಬ ಹೊಸ ಬೆಳಕನ್ನೀಯುತ್ತಲಿದೆ.

ದಕ್ಷಿಣದಲ್ಲಿ ವಾತಾಪಿ ಮತ್ತು ಇಲ್ವಲರೆಂಬ ಇಬ್ಬರು ರಕ್ಕಸರಿದ್ದರಂತೆ. ಅದರಲ್ಲಿ ವಾತಾಪಿಯು ಕುರಿಯಾಗಿ ಕಾಣಿಸಿಕೊಳ್ಳುತ್ತಿದ್ದನಂತೆ. ಇಲ್ವಲನು ಅವನ ಮಾಂಸವನ್ನು ಊಟಕ್ಕೆ ಬಡಿಸಿ ಬಂದ ಬ್ರಾಹ್ಮಣರ ಆತಿಥ್ಯ ಮಾಡುತ್ತಿದ್ದನು. ಅವರ ಊಟವಾದ ಬಳಿಕ 'ವಾತಾಪಿ, ಬಾ' ಎಂದು ಕೂಗುತ್ತಿದ್ದನು. ಕೂಗಿದೊಡನೆ ಅವನು ಅತಿಥಿಗಳ ಹೊಟ್ಟೆ ಒಡೆದು ಹೊರಬರುತ್ತಿದ್ದನು. ಬಳಿಕ ಇಬ್ಬರೂ ಆ ಮಡಿದವನ ಮಾಂಸದಿಂದ ಸಂತೋಷಿಸುತ್ತಿದ್ದರು. ಎಂಬ ಒಂದು ಕತೆಯುಂಟು. ಅಗಸ್ತ್ಯನು ಒಮ್ಮೆ ಇವರಲ್ಲಿಗೆ ಬಂದಾಗ ಎಂದಿನಂತೆ ಆತನಿಗೆ ಬಡಿಸಿದ ವಾತಾಪಿ ಕುರಿಯ ಮಾಂಸವನ್ನು, ಆತನು ಆ ಒಳಸಂಚನ್ನು ಮುಂಗಂಡು, ಅರಗಿಸಿಕೊಂಡುಬಿಟ್ಟನಂತೆ. ಅಂದಿನಿಂದ ವಾತಾಪಿ ಕಣ್ಮರೆಯಾದವನು ಆಗಿಯೆ ಬಿಟ್ಟನೆಂದು ಆ ಕತೆಯು ಹೇಳುತ್ತದೆ. ಬಳಿಕ ಆತನು ಇಲ್ವಲನಿಂದ ಹೇರಳ ಹಣ ಮಾನ ಸಂಪಾದಿಸಿದನಂತೆ.

ಆರ್ಯರು ನರಮಾಂಸ ಭಕ್ಷಕರಾಗಿದ್ದುದಕ್ಕೆ ಎಲ್ಲಿಯೂ ಆಧಾರಗಳಿಲ್ಲ. ಹಾಗಾದರೆ ಅಗಸ್ತ್ಯನ ಈ ಕತೆಯಲ್ಲಿ ಏನಾದರೂ ರಹಸ್ಯಾರ್ಥವು ಹುದುಗಿಕೊಂಡಿರಬೇಕು. ಅದು ಯಾವುದು? ಅಗಸ್ತ್ಯನು ತಮಿಳ ಬ್ರಾಹ್ಮಣರ ಉದ್ಧಾರಕನೆಂದು ಆ ನಾಡಿಗರಲ್ಲಿ ಒಂದು ದಂತಕಥೆಯಿದೆ. ಅಗಸ್ತ್ಯನು ತಮಿಳರ ಸ್ನೇಹಿತನಾಗಿ ಅವರ ಹಿತಚಿಂತಕನೆಂದು ಇದ್ದುದು ಆ ಕತೆಯಿಂದ ಗೊತ್ತಾಗುತ್ತದೆ ಇದುವೆ ಇಲ್ವಲ ಮತ್ತು ಅಗಸ್ತ್ಯರ ಸಂಬಂಧವನ್ನು ಸೂಚಿಸುವುದೆಂದು ನನ್ನ ತಿಳುವಳಿಕೆ.

ಹಾಗಾದರೆ ವಾತಾಪಿಯು ಯಾರು? ವಾತಾಪಿಯ ಹೆಸರಿನ ಊರು ಕರ್ನಾಟಕದಲ್ಲಿ 'ಬದಾಮಿ' ಎಂಬ ಹೆಸರಿನಿಂದ ಈಗಲೂ ವಿಜಾಪುರ ಜಿಲ್ಲೆಯಲ್ಲಿ ಪ್ರಸಿದ್ಧವಿದೆ. ಇದುವೆ ಮೊದಲನೆಯ ಚಾಲುಕ್ಯರ ರಾಜಧಾನಿಯಾಗಿ ಮೆರೆಯಿತೆಂಬುದು ಈ ಸಂದರ್ಭದಲ್ಲಿ ನೆನಪಿಡತಕ್ಕ ಮಾತಾಗಿದೆ. ಶ್ರೀ ನಂದೋಲಾಲ ದೇ ಅವರ ಅಭಿಪ್ರಾಯದಂತೆ ವಾತಾಪಿಪುರವು ಎಲ್ಲೂರ (ವೆರೂಳ) ಹತ್ತಿರ ಇದ್ದಿತು. ಚಾಲುಕ್ಯರು ಅಜಂಟಾ-ವೆರೂಳ ಭಾಗದಿಂದಲೇ ಮುಂದೆ ಎರಡನೆಯ ವಾತಾಪಿಪುರಕ್ಕೆ ಬಂದರು. ಆ ಮೊದಲು ಅವರ ರಾಜಧಾನಿಯಾವುದಿದ್ದಿತೆಂಬುದನ್ನು ಸಂಶೋಧಕರು ಇನ್ನೂ ಹುಡುಕುತ್ತಲಿದ್ದಾರೆ. ಅದು ಶ್ರೀ ದೇವರು ಹೇಳುವ ಮೊದಲನೆಯ ವಾತಾಪಿಯಾಗಿದ್ದರೂ ಇರಬಹುದು.

ಅದಾವುದೇ ಇರಲಿ. ಅಂತೂ ಮಧ್ಯದ ದಕ್ಷಿಣಕ್ಕೆ ನೀಲಗಿರಿಯ ಉತ್ತರಕ್ಕೆ ಇರುವ ನಡುವಣ ನಾಡಿನಲ್ಲಿ ವಾತಾಪಿಯ ಸಂಬಂಧವು ಇದ್ದಿತೆಂದು ಈ ಗ್ರಾಮ ನಾಮಗಳಿಂದ ಕಂಡುಬರುತ್ತದೆ. ಆದುದರಿಂದ ಅಗಸ್ತ್ಯನು ಆತ್ಮಸಾತ್ತಾಗಿ ಮಾಡಿಕೊಂಡ ವಾತಾಪಿಯ ಪ್ರದೇಶವು ಇದು; ಗೋತನದಿಂದ ನಡೆದುಕೊಂಡ ಇಲ್ವನ ದೇಶವು ಇದರ ದಕ್ಷಿಣದ ತಮಿಳು ಸೀಮೆ ಎಂದು ನಾವು ಮೇಲಣ ಕತೆಗೆ ಅರ್ಥವನ್ನು ಮಾಡಬಹುದಾಗಿದೆ.

ನಮ್ಮ ಭಾಷೆಯಲ್ಲಿ ಕಾಣುವ ಆರ್ಯೀಕರಣದ ಕುರುಹುಗಳು

ಕನ್ನಡ ನುಡಿ ಮತ್ತು ತಮಿಳ ನುಡಿಗಳನು ತೂಗಿ ನೋಡಿದರೆ ಕರ್ನಾಟದ ಆರ್ಯಾಕರಣದ ಕಲ್ಪನೆಯು ಇನ್ನಿಷ್ಟು ನಿಚ್ಚಳಾಗಿ ತಿಳಿಯುವುದು. ಇಂದಿಗೂ ತಮಿಳಿನಲ್ಲಿ ಮಹಾಪ್ರಾಣಗಳಿಲ್ಲ. ವರ್ಗೀಯಾಕ್ಷರಗಳು ಎರಡೇ. ಕ, ಙ; ಚ. ಞ; ಟ, ಣ; ತ, ನ; ಪ, ಮ; ಅವರ್ಗೀಯಗಳಲ್ಲಿ ಶ, ಷ, ಸ, ಹ ಗಳಿಲ್ಲ. ಆದರಿಂದ ಯಾವುದೇ ಸಂಸ್ಕೃತ ಶಬ್ದವು ತಮಿಳಿನಲ್ಲಿ ಸೇರಬೇಕಾದರೆ ತಮಿಳ ಸಂಸ್ಕಾರವನ್ನು ಹೊಂದಲೇಬೇಕು. ಅಲ್ಲಿ ಸಂಸ್ಕೃತವು ತಮಿಳನ ಪಾತಳಿಗೆ ಬರಬೇಕಾಗುತ್ತದೆ. ಆದರೆ ಕಂನುಡಿಯಲ್ಲಿ ಹಾಗಲ್ಲ. ಬೇಕಾದ ಸಂಸ್ಕೃತ ಶಬ್ದವೂ ಇದ್ದಕಿದ್ದಂತೆ ಕಂನುಡಿಯಲ್ಲಿ ಬರುವುದು. ಬದಲಾಗಬೇಕಾದ ಕಾರಣವೇ ಉಳಿದಿಲ್ಲ. ಅಂದರೆ ಇಲ್ಲಿ ಕಂನುಡಿಯೇ ಸಂಸ್ಕೃತದ ಅನುಕರಣ ಮಾಡಿದೆ. ತನ್ನಲ್ಲಿ ಇಲ್ಲದ ಸ್ವರ, ಮಹಾಪ್ರಾಣಾದಿ ಅಕ್ಷರಗಳನ್ನೆಲ್ಲ ಸಂಸ್ಕೃತದಿಂದ ಸ್ವೀಕರಿಸಿದೆ. ಅಂದರೆ ಇಂದು ಕಂನುಡಿಯು ಸಂಸ್ಕೃತದ ರೂಪ ತಾಳಿದೆ; ತಾಳುತ್ತಲಿದೆಯೆನ್ನಬಹುದು. ನಮ್ಮ ಮಾತುಗಳಲ್ಲಿ ಕೂಡ ನೂರಕ್ಕೆ ೬೦-೭೦ ಕ್ಕಿಂತ ಹೆಚ್ಚು ಮಾತುಗಳನ್ನು ನಾವು ಸಂಸ್ಕೃತದಿಂದಲೇ ಬಳಸುತ್ತೇವೆ. ಒಂದು ಕಾಲಕ್ಕೆ ಅವನ್ನು ಕಂನುಡಿಗೆ ತಿರುಗಿಸಿಕೊಂಡು ಎಂದರೆ ಕಂನುಡಿಯ ಮುದ್ರೆಯೊತ್ತಿಯಾದರೂ ಆಡುತ್ತಿದ್ದೆವು. ಈಗ ಅದರ ಅವಶ್ಯಕತೆಯೂ ಉಳಿದಿಲ್ಲ. ಇದೆಲ್ಲವೂ ಕನ್ನಡಿಗರ ಆರ್ಯಾನುಕರಣ ಪ್ರವೃತ್ತಿಯ ದ್ಯೋತಕವಾಗಿದೆ.

ಇದರ ಗಂಡಾಂತರ

ಎರಡು ಭಿನ್ನ ಭಾಷೆಗಳ ಜನರು ಒಬ್ಬರೊಳಗೊಬ್ಬರ ಬೆರೆತು ಬಳಕೆ ನಡೆದಾಗ ಅವರಿಬ್ಬರಿಗೂ ತಮ್ಮ ನೆರೆಯವರ ಭಾಷೆಯನ್ನು ಕಲಿಯುವ ಅವಶ್ಯಕತೆಯುಂಟಾಗುತ್ತದೆ. ಆಗ ಆ ಎರಡು ಭಾಷೆಗಳಲ್ಲಿ ರಾಜಮಾನ್ಯತೆ, ಇಲ್ಲವೆ ಸಮಾಜದಲ್ಲಿ ಸ್ಥಾನಮಾನಗಳು ಹೆಚ್ಚಾಗಿರುವ ಭಾಷೆಯು ಮತ್ತೊಂದನ್ನು ಹಿಂದಿಕ್ಕುತ್ತದೆ. ಈ ಬಗೆಯ ಸಮಾಜದಲ್ಲಿ ಉಭಯಭಾಷಾ ಪರಿಚಿತರೂ ವಿಶಾರದರೂ ಆಗಿರುವವರ ಸಂಖ್ಯೆಯು ಹೆಚ್ಚಾದ ಹಾಗೆಲ್ಲ ಆ ನುಡಿನ ನುಡಿಗೆ ಗಂಡಾಂತರವೆಂದೇ ತಿಳಿಯತಕ್ಕದ್ದು. ಮೂಲ ಭಾಷೆಯು ಅವುದೇ ಇದ್ದರೂ ಹೊಟ್ಟೆಹೊರಕೊಳ್ಳಲು ಅನುಕೂಲವಾಗುವುದೆಂದೊ, ಅಥವಾ ರಾಜಮಾನ್ಯತೆಗಳನ್ನು ಪಡೆಯಲು ಅದೊಂದು ಸುಲಭ ಸಾಧನವೆಂದೊ ತಮ್ಮ ನುಡಿಯನ್ನು ಬಿಟ್ಟು ಜನಗಳು ಹೆರವರ ಭಾಷೆಯನ್ನು ಸ್ವೀಕರಿಸಲು ತಡವಾಗುವುದಿಲ್ಲ. ಹೀಗಾಗಿ ಜನಮನ್ನಣೆಗೊಂಡ ಭಾಷೆಯು ಮೇಲೆ ಬರುವುದು. ಇನ್ನೊಂದು ನೆಲಹಿಡಿಯುವುದು. ಆದುದರಿಂದ ದ್ವಿಭಾಷಿಗಳ ಸಂಖ್ಯೆಯು ಹೆಚ್ಚಾಗಿರುವದು. ಆ ನಾಡಿನ ನುಡಿಯ ದೃಷ್ಟಿಯಿಂದ ಯಾವಾಗಲೂ ಹಿತಕರವಲ್ಲ. ಆ ನಾಡ ನುಡಿಯು ಲೋಕಮರ್ಯಾದೆ ಇಲ್ಲದುದಕ್ಕೆ ಯಾವಾಗ ಕಣ್ಮರೆಯಾಗುವುದೊ ಹೇಳಲಿಕ್ಕಾಗುವುದಿಲ್ಲ. ಅದು ಮೊದಲು ಮೂಲೆಗುಂಪಾಗಿ ಮುಂದೆ ಹೇಳಹೆಸರಿಲ್ಲದಂತಾಗುವುದು ಅದರ ಕ್ರಮ.

ಭಿನ್ನ ಭಾಷೆಯ ವಧೂವರರ ಮದುವೆಯಿಂದ ಆ ಜನಾಂಗಗಳು ಒಂದಾಗುವಂತೆ ಹಲವು ಬಾರಿ ಆ ಭಾಷೆಗಳೆರಡೂ ಬೆಸೆದು ಹೊಸೆದು ಹೊಸತೊಂದು ರೂಪಗೊಳ್ಳುತ್ತವೆ. ಕೆಲವು ಬಾರಿ ಒಂದು ಭಾಷೆಯು ಇನ್ನೊಂದರಲ್ಲಿ ವಿಲೀನವಾಗಿಯೂ ಹೋಗುವುದು. ಆದರೂ ಅದರ ಕೆಲವೊಂದು ಅವಶೇಷಗಳು ಉಳಿಯದೆ ಹೋಗುವುದಿಲ್ಲ ಅವುಗಳ ಅಭ್ಯಾಸದಿಂದ ಆ ಭಾಷೆಯು ಯಾವುದು ಅದರ ಮೊದಲಿನ ಸ್ಥಾನಮಾನಗಳೇನಿದ್ದುವು. ಎಂಬಿವೇ ಮೊದಲಾದ ಸಂಗತಿಗಳನ್ನು ಕಂಡುಹಿಡಿಯಬಹುದಾಗಿದೆ.

ತುಲನಾತ್ಮಕ ಭಾಷಾಶಾಸ್ತ್ರಜ್ಞರು ಕಂಡುಹಿಡಿದ ಈ ತತ್ವಕ್ಕೆ ಆಧುನಿಕ ಭಾಷೆಗಳಲ್ಲಿ ಬೇಕಾದಷ್ಟು ದೃಷ್ಟಾಂತಗಳು ದೊರೆಯುತ್ತವೆ.

ಸಿಂಧಿ, ಹಿಂದಿ, ಬಂಗಾಲಿ ಮೊದಲಾದ ಭಾಷೆಗಳಲ್ಲಿ "ದ್ರಾವಿಡ" ಅಂಶವು ಕಾಣಿಸಿಕೊಳ್ಳುತ್ತದೆಂದು ಆಧುನಿಕ ಸಂಶೋಧಕರು ಕಂಡುಹಿಡಿದಿದ್ದಾರೆ. ಆದರೆ ಇದಕ್ಕೆಲ್ಲ 'ದ್ರಾವಿಡ' ಎಂದು ಹೇಳುವುದು ಬಹಳ ಅಸಮರ್ಪಕವಾಗಿದೆ. ಏಕೆಂದರೆ 'ದ್ರಾವಿಡ' ಎಂದರೆ ತಮಿಳು ತಮಿಳಿನ ಭೌಗೋಲಿಕ ಸ್ಥಾನವನ್ನು ನಿರೀಕ್ಷಿಸಿದರೆ ಅದು ಭಾರತದ ದಕ್ಷಿಣ ತುದಿ. ಆದುದರಿಂದ ಔತ್ತರೇಯರಿಗೆ ಸಂಬಂಧ ಸಂಪರ್ಕ ಬಂದುದು ಕಣ್ಣರದು. ಚೋಳ ಕೇರಳರದಲ್ಲ. ಮತ್ತು ಅಗಸ್ತ್ಯನ ಕತೆಯಿಂದ ಆರ್ಯರು ಅರಗಿಸಿಕೊಂಡುದು ಕಣ್ಣರನ್ನು—ವಾತಾಪಿ ದೇಶವನ್ನು, ಎಂಬ ಮಾತನ್ನು ನೆನಪಿಡತಕ್ಕಂತಹದಾಗಿದೆ. ಅದ ಕಾರಣ ಉತ್ತರದಲ್ಲಿ ಕಾಣಿಸಿಕೊಳ್ಳುವ 'ದ್ರಾವಿಡ' ಪ್ರಭಾವಕ್ಕೆ ಕಾರಣರು ತಮಿಳರಲ್ಲ, ಕಣ್ಣರು. ಎಂದರೆ ಕರ್ಣಾಟರೇ ಎಂಬಲ್ಲಿ ನನಗೂ ಸಂದೇಹವಿಲ್ಲ. 'ದ್ರಾವಿಡ' ಶಬ್ದವು ಬಹಳ ಸಂದಿಗ್ಧಾರ್ಥದ ಅನುಚಿತ ಶಬ್ದವೆಂದು ವಿನ್ಸೆಂಟ ಸ್ಮಿಥ ಎಂಬ ಸುಪ್ರಸಿದ್ಧ ಇತಿಹಾಸಕಾರನು ಹೇಳುತ್ತಾನೆ. ೧೫ (Singularly inappropriate) ಅದ ಕಾರಣ ಸಂಶೋಧಕರು ಇಂತಹ ಅಪಾರ್ಥದ ಅನರ್ಥಕಾರಿ ಶಬ್ದವನ್ನು ಬಿಟ್ಟುಬಿಡುವದೇ ಲೇಸು.

ಕರ್ಣಾಟವು ಸಂಕ್ಷೇಪಗೊಂಡುದು

ಆರ್ಯಾವರ್ತದಲ್ಲಿಯೆ ಆರ್ಯರು ನೆಲೆಸತಕ್ಕದ್ದು, ಎಂದು ಹಿಂದಕ್ಕೆ ಸ್ಮೃತಿಕಾರರ ಕಟ್ಟಪ್ಪಣೆಯಾಗಿದ್ದಿತು. ವಿಂಧ್ಯದ ದಕ್ಷಿಣಕ್ಕೆ 'ದಕ್ಷಿಣಾಪಥ' ವೆಂಬ ಹೆಸರು. ದಕ್ಷಿಣಾಪಥವು ಅನಾರ್ಯರ ನಾಡು. ಅಯಜ್ಞೀಯ ಭೂಮಿ. ಅದು ಆರ್ಯರ ನಿವಾಸಕ್ಕೆ ತಕ್ಕುದಲ್ಲವೆಂದು ಹಿಂದಕ್ಕೆ ದೃಢವಾದ ಭಾವನೆಯಿದ್ದಿತೆಂದು ಮನುಸ್ಮೃತಿ ಮೊದಲಾದವುಗಳಿಂದ ತಿಳಿದುಬರುತ್ತದೆ ೧೬.

ಆದರೆ ಅಗಸ್ತ್ಯನು ವಿದರ್ಭದೇಶದ ಅರಸನ ಮಗಳಾದ ಲೋಪಾಮುದ್ರೆಯನ್ನು ಮದುವೆಯಾದನು. ವಿದರ್ಭವು ದಕ್ಷಿಣಾಪಥದ ದೇಶ. ಮನಸ್ಸಿಲ್ಲದ ಮನಸಿನವರಾಗಿ ಆರ್ಯರು ದಕ್ಷಿಣಕ್ಕೆ ನೆಲಸಲು ಬಂದರು. ಬರಬೇಕಾಯಿತು. ಅದರೊಡನೆ ಆರ್ಯಾಕರಣಕ್ಕೂ ಆರಂಭವಾಯಿತು. 'ಮಹಾರಾಷ್ಟ್ರ'ವೆಂಬುದು ದಕ್ಷಿಣಾಪಥದಲ್ಲಿ ನಡೆದ ಆರ್ಯಾಕರಣದ ಫಲ. ಅದು 'ಅರೇರ'ನಾಡೆಂಬ ಕಂನುಡಿಯ ಮಾತೇ ಇದಕ್ಕೆ ಸಾಕ್ಷಿ.

ಪ್ರಥಮ ಮಹಾರಾಷ್ಟ್ರವು ವರ್ಹಾಟವೆಂದು ಮರ್ಹಾಟಿಯ ಎಲ್ಲ ವಿದ್ವಾಂಸರೂ ಒಪ್ಪುವರು. ೧೭

ದಕ್ಷಿಣಾಪಥದಲ್ಲಿ ಆರ್ಯರೇ ಇಲ್ಲದ ಕಾಲವು ಒಂದಿತ್ತು. ಅಂದಬಳಿಕ ಅರೇರ ನಾಡಾದರೂ ಎಲ್ಲಿಂದ? ಇದು ಒಡಮೂಡಲಾರಂಭಿಸಿದುದು ಕಾಲಕ್ರಮದಲ್ಲಿ ದಕ್ಷಿಣದ ಕಣ್ಣರ ಆರ್ಯೀಕರಣದ ಪ್ರಮಾಣವು ಹೆಚ್ಚಿದಂತೆ ಇದರ ವಿಸ್ತಾರವೂ ಹೆಚ್ಚಾಯಿತು. ಅರೆಯರ ನಾಡು ಹೆಚ್ಚಿದಂತೆ ಕಂನಾಡು ಸಣ್ಣದಾಗಲಾರಂಭಿಸಿತು.

ರಾಷ್ಟ್ರಕೂಟರ ಕಾಲಕ್ಕೆ ನೃಪತುಂಗನು ಹೇಳಿದಂತೆ 'ಕರ್ನಾಟವು ಕಾವೇರಿಯಿಂದ ಗೋದೆಯ ವರೆಗೆ ೧೮ ಇದ್ದೀತು. ನರ್ಮದೆಯಿಂದಗೋದೆಯ ವರೆಗೆ ಆ ಅವಧಿಯಲ್ಲಿ ಆರ್ಯೀಕರಣದ ಪ್ರಭಾವವು ಹೆಚ್ಚಾಯಿತೆಂಬುದು ಇದರಿಂದ ಸಿದ್ಧವಾಗುತ್ತದೆ. 'ಗೋದಾವರ್ಯಾಃ ದಕ್ಷಿಣೆತೀರೇ' ಎಂಬ ಸಂಕಲ್ಪವೂ ಇದನ್ನೇ ಬಲಪಡಿಸುತ್ತದೆ ನರ್ಮದೆಯ ದಕ್ಷಿಣಕ್ಕೆ ಎಂದಿರಬೇಕಾದುದು, ಗೋದಾವರಿಯ ದಕ್ಷಿಣವೆಂದಾಯ್ತು ೯ ನೆಯ ಶತಕದಲ್ಲಿ.

ಮುಂದೆ ೩೦೦-೩೫೦ ವರುಷಗಳಲ್ಲಿ ಹೊಯ್ಸಳ ಮತ್ತು ದೇವಗಿರಿಯ ಯಾದವರ ಯಾದವೀ ಕಲಹಗಳಲ್ಲಿ ಮತ್ತೆ ಕಂನಾಡು ಇನ್ನೂ ಸೊರಗಿತು. ಕೃಷ್ಣೆಯ ತಡಿಗೆ ಹೊಯ್ಸಳರು ತಮ್ಮ ರಾಜ್ಯ ನಿಲ್ಲಿಸಲು ಹವಣಿಸುತ್ತಿದ್ದರು. ಹೊಯ್ಸಳ ಕರ್ಣಾಟರು ಆಗ ಕನ್ನಾಡ ಹೆಮ್ಮೆಯಿಂದ ಕೆಲಸ ಮಾಡಿದರು. ದೇವಗಿರಿ ಯಾದವರ ಆಶ್ರಯದಲ್ಲಿ ಶುಕ್ಲ ಯಜುರ್ವೇದಿ ಮಧ್ಯಾಂದಿನರು ಮರ್ಹಾಟಿಯ ಧ್ವಜವನ್ನೆತ್ತಿ ಹಿಡಿದರು. ಇಲ್ಲಿ ಮತ್ತೆ 'ಯದು' ತುರ್ವಸುಗಳಲ್ಲಿ ಅರಿಯರಾಗಿ ನಿಂತವರು ಅರ್ಧ, ಕನ್ನಾಡ ಪಕ್ಷಪಾತಿಗಳಾದವರು ಅರ್ಧ ನಾಡನ್ನು ಹಂಚಿಕೊಂಡರು. ಕಂನಾಡಿನ ಉತ್ತರ ಮರ್ಯಾದೆ ತಗ್ಗಿ ಕೃಷ್ಣೆಗೆ ಬಂದಿತು.

ಮುಂದೆ ಮತ್ತೆ ೩೦೦-೩೫೦ ವರುಷಗಳಲ್ಲಿ ವಿಜಯನಗರ ಆಳಿಕೆಯಲ್ಲಿ ಅದು ತುಂಗೆಗೆ ಬಂದಿತು. ಕೃಷ್ಣಾ ತಟಾಕವನ್ನು ಆರ್ಯರ ಬೆಂಬಲದಿಂದ ಮಹಮ್ಮದೀಯರು ಆಕ್ರಮಿಸಿದರು. ವಿಜಾಪೂರವೂ ಮಹಾರಾಷ್ಟ್ರವಾಯಿತು. [illegible] ಶಹರಲ್ಲಿ ಒಬ್ಬನು ಮರ್ಹಾಟ ಸರದಾರನ ಚೆಲುವೆಯ ಮೋಹಕ್ಕೆ ಒಳಗಾಗಿ ಅಲ್ಲಿ ಮರ್ಹಾಟಿಗೇ ಮೇಲಣ ಸ್ಥಾನವನ್ನು ಕೊಟ್ಟುದಾಗಿ ಶ್ರೀ ಪಾಂಗಾರಕರರು ಬರೆಯುತ್ತಾರೆ. ೧೯

ಬಳಿಕ ೨೦೦ ವರುಷಗಳ ತರುವಾಯ ೧೫೬೫ ರಲ್ಲಿ ವಿಜಯನಗರದ ಕೊನೆಯ [illegible] ಕೊಲೆಯೂ ಆಯಿತು. ಅದು ಹು [illegible] ಳಾಡಿ ಕಣ್ಮರೆಯಾಯಿತು.

ವಿಜಯನಗರದ ರಾಜರು ಪೆನುಗೊಂಡೆ, ಚಂದ್ರಗಿರಿಯ ಕಡೆಗೆ ದಕ್ಷಿಣಕ್ಕೆ ಸರಿದರು. ಆ ಭಾಗಕ್ಕೆ 'ಕರ್ಣಾಟ'ವೆಂಬ ಹೆಸರು ಬಂತು. ೨೦ ಮೂಲ ಕರ್ಣಾಟವು ಎಲ್ಲಿಯೋ ಮಾಯವಾಯಿತು. ಅರ್ಕಾಟವು ಕರ್ಣಾಟವಾಯಿತು. ಬ್ರಿಟಿಶರ 'ಕರ್ಣಾಟದ ಯುದ್ಧಗಳು' ಈ ಕರ್ಣಾಟದಹೆಸರು ಇತಿಹಾಸದಲ್ಲಿ 'ಕರ್ಣಾಟ' ವಿಚಿತ್ರ ಅವಸ್ಥೆಯನ್ನು ಶೋಚನೀಯ ಸ್ಥಿತಿಯನ್ನು ಸೂಚಿಸುತ್ತದೆ.

ಮುಂದೆ ೨೦೦ ವರುಷಗಳ ಬಳಿಕ ಮರಾಠರು ಪೇಶ್ವರು ಬಂದರು. (೧೭೦೦). ಬೆಂಗಳೂರು ಶಹಾಜಿ ರಾಜಧಾನಿಯಾಯಿತು. ಕರ್ಣಾಟವು 'ಕರ್ಣೇಅಟತಿ' ಎಂದರೆ ಕಿವಿಗೆ ಮಾತ್ರ ಕೇ[illegible] ದೇಶವಾಯಿತು.

ಕಂನಾಡಿಗರು ದಿಕ್ಕೇಡಿಗಳಾದರು. ಮೈಸೂರು ಹೈದರ ಟೀಪುಗಳ ಪೀಳಿಗೆಯ ಕೈಗೇ ಇದ್ದರೆ ನಿಜಾಂ ಕರ್ಣಾಟದಂತೆ ಅದರ ಅವಸ್ಥೆಯೂ ಆಗುತ್ತಿತ್ತು. ಆದರೆ ಏನೋ ಸುದೈವದಿಂದ ಅದು ಮೈಸೂರ ರಾಜರ ಕಡೆಗೆ ಬಂತು. ಅವರು ಯದುವಂಶಜರೆಂಬುದನ್ನು ನೆನಪಿಡಬೇಕು.

ಮುಂದೆ ೨೦೦ ವರ್ಷಗಳ ಬಳಿಕ ಬ್ರಿಟಿಶರ ಆಳಿಕೆ ಬಂದಿತು. ಆದರಲ್ಲಿ ನಮ್ಮ ಭಾಗಕ್ಕೆ ಬಂದ ಇಂಗ್ಲಿಷ ಅಧಿಕಾರಿಗಳಿಗೆ ಅದು ಸೋಜಿಗವೆನಿಸುತ್ತಿತ್ತು. ಇದು ದಕ್ಷಿಣ ಮಹಾರಾಷ್ಟ್ರ; ಸದರ್ನ ಮರಾಠಾ ರೇಲ್ವೆ ದೇಶ; ಇಲ್ಲಿ ಇದ್ದುದು ಕನ್ನಡ ಜನ ಹೀಗಾಗಿ ೧೮೪೬ ರ ಸುಮಾರಿ ಇನಸ್ಪೆಕ್ಟರ ರಸೆಲ್ಲ ಎಂಬವರು ಕಂನುಡಿಯನ್ನು ಕಲಿಸುವದಕ್ಕೆ ಪ್ರೋತ್ಸಾಹನಕೊಟ್ಟರು. ಡಾ. ಸ್ಲೀಟರು. ಶಾಸನಗಳ ಆಧಾರದಿಂದ ಕರ್ನಾಟಕ ಸಂಸ್ಥಾನಗಳೆಂದು ಕೊಲ್ಲಾಪುರ, ಸಾಂಗ್ಲಿ ಮೊದಲಾದವುಗಳಿಗೆ ಹೆಸರು ಕೊಟ್ಟರು. ಆದರೆ ಆ ಹೆಸರು ಈಗ ಬರಿ ಕಾಗದದಲ್ಲಿ!

ಸಾಂಗ್ಲಿ, ಮಿರ್ಜಿ, ಜಮಖಂಡಿಯವರ ಸಣ್ಣ ತಾಲೂಕುಗಳು ಹರಿಹರದ ವರೆಗೆ ಇವೆ. ಸೊಂಡೂರು, ಗಜೇಂದ್ರಗಡ ಮೊದಲಾದ ಮರಾಠರ ಸಣ್ಣ ಜಹಗೀರು ಕಂನಾಡ ಒಡಲಲ್ಲಿಯೆ. ಆದರಿಂದ ಕರ್ಣಾಟವು ಎಲ್ಲಿದೆ ಎಂಬ ಸಂದೇಹ ಈಗಲೂ ತಪ್ಪಿಲ್ಲ.

ನಮ್ಮ ಜನರಲ್ಲಿಯೇ ಕಂನುಡಿಯ ಬಗ್ಗೆ ನಿಜವಾದ ಆತ್ಮೀಯತೆ ಇನ್ನೂ ಇಲ್ಲ ಆರ್ಯೀಕರಣದ ಮೋಹ ಇನ್ನೂ ಬಿಟ್ಟಿಲ್ಲ ಮರಾಠರು ಎಲ್ಲಿ ನೆಲೆಸಿದರೂ ತಮ್ಮ ನುಡಿ ಬಿಡರು. ಕಂನಾಡಿಗರು ಎಲ್ಲಿದ್ದರೂ ತಮ್ಮ ನುಡಿಯ ಬಗ್ಗೆ ಅನಾಸ್ಥೆ. ರಾಜಭಾಷೆ, ರಾಷ್ಟ್ರಭಾಷೆ, ಭಾರತಭಾಷೆ ಎಂದು ಅವರು ಪರಭಾಷೆಗೆ ಯಾವಾಗಲೂ ಮೋಹಿಸುವ ಪ್ರಭಾವವು ಇವರ ಕ್ಷೀಣತೆಗೆ ಕಾರಣವಾಗಿದೆ ಇವರು ಈ ಮೋಹ ಬಿಡದೆ ನಮ್ಮ ನಾಡಿಗೂ ನುಡಿಗೂ ಏಳಿಗೆಯ ಕಾಲವು ಇಲ್ಲ.

ಈಗ ಎಲ್ಲ ದಿಕ್ಕುಗಳಿಂದ ಕಂನಾಡ ಮೇಲೆ ದಾಳಿ ನಡೆದಿದೆ. ದಕ್ಷಿಣದಿಂದ ತಮಿಳರು ನೀಲಗಿರಿ ವ್ಯಾಪಿಸಿದರು. ಪಶ್ಚಿಮಕ್ಕೆ ಮಳೆಯಾಳಿಗಳು ಕಾಸರಗೋಡು ಆಕ್ರಮಿಸುತ್ತಿದ್ದಾರೆ. ಪೂರ್ವಕ್ಕೆ ತೆಲಗರು ಬಳ್ಳಾರಿಗೆ ಬಾಯಿ ಹಾಕಿದ್ದಾರೆ. ಉತ್ತರದಲ್ಲಿ ಮರಾಠರ ಹಾವಳಿ ನಡೆಯುತ್ತ ಇಂತೀ ಬಗೆಯಾಗಿ ಕುಗ್ಗುತ್ತ ನಡೆದ ನಮ್ಮ ನಾಡ ಮೇರೆ

—೧೫ನೇ ಪುಟ ನೋಡಿರಿ

ಸಂಪಾದಕೀಯ

ಟೀಕೆ-ಟಿಪ್ಪಣಿಗಳು

ಶ್ರೀ ಬಸವೇಶ್ವರ ಜಯಂತಿ

ವೀರಶೈವ ಮತೋದ್ಧಾರಕರಾದ ಶ್ರೀ ಬಸವೇಶ್ವರ ಜಯಂತಿಯನ್ನು ಈ ವಾರ ಕನ್ನಡಿಗರೆಲ್ಲ ವಿಜೃಂಭಣೆಯಿಂದ ಆಚರಿಸಿದರು. ಶ್ರೀ ಬಸವೇಶ್ವರರು ಕೇವಲ ಮತೋದ್ಧಾರಕರಾಗಿರದೆ ಕನ್ನಡ ನಾಡು ನುಡಿಗಳ ಸೇವೆಯನ್ನು ಸಲ್ಲಿಸಿದವರಲ್ಲಿ ಅಗ್ರಗಣ್ಯರೆಂದು ಹೇಳಬಹುದು. ಅಲ್ಲದೆ ಜನತೆಯ ನೀತಿ ಆಚರಣೆ ಮೊದಲಾದವುಗಳು ಎಂತಿರಬೇಕೆಂಬುದನ್ನು ಅವರು ಬೋಧಿಸಿ ಜನಗಳಿಗೆ ಮಹೋಪಕಾರ ಮಾಡಿರುತ್ತಾರೆ. ಬಸವೇಶ್ವರರ ವಚನಗಳು ಮಾನವನ ಆಚಾರ ವಿಚಾರಗಳಿಗೆ ಒಳ್ಳೆ ಮಾರ್ಗದರ್ಶಕವಾಗಿವೆ. ಪರಮಾತ್ಮನಲ್ಲಿ ಅನನ್ಯ ಭಕ್ತಿಯನ್ನು ಮಾಡುವುದರಿಂದಲೆ ಮಾನವನ ಉದ್ಧಾರವೆಂಬುದನ್ನು ಮನಗಂಡು ಶ್ರೀ ಬಸವೇಶ್ವರರು ಭಕ್ತಿಮಾರ್ಗವನ್ನು ಬೋಧಿಸಿರುವದರಿಂದ ಭಕ್ತಿಭಾಂಡಾರಿ[illegible] ಗೌರವದ ಬಿರುದು ಅವರಿಗೆ ಚೆನ್ನಾಗಿ ಶೋಭಿಸುವುದು. ಬಸವೇಶ್ವರರ ಬೋಧೆಯಂತೆ ಮಾನವನು ನಡೆದುದಾದರೆ ಅವನು ಆತ್ಮೋದ್ಧಾರ ಮಾಡಿಕೊಳ್ಳುವನಲ್ಲದೆ ದೇಶೋದ್ಧಾರಕ್ಕೂ ಸಹಾಯಕನಾಗುವನು. ಪ್ರತಿಯೊಬ್ಬನು ಶ್ರೀ ಬಸವೇಶ್ವರರ ವಚನಗಳ ಅಭ್ಯಾಸ ಮಾಡಿ ಅವುಗಳಲ್ಲಿ ಅಡಕವಾಗಿರುವ ಆಳವಾದ ಅರ್ಥವನ್ನು ಮನದಂದು ಅದರಂತೆ ನಡೆಯಲು ಪ್ರಯತ್ನಿಸಿದರೆ ಶ್ರೀ ಬಸವೇಶ್ವರರ ಜಯಂತಿಯನ್ನು ನಿಜವಾಗಿ ಆಚರಿಸಿದಂತಾಗುವುದು.

ಪ್ರಕಾಶಂರ ಮಂತ್ರಿಮಂಡಳ

ಮದ್ರಾಸ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಧುರೀಣರಾಗಿ ಆರಿಸಲ್ಪಟ್ಟ ಶ್ರೀ ಟಂಗಟೂರು ಪ್ರಕಾಶಂರು ತಮ್ಮ ಮಂತ್ರಿಮಂಡಳ ಸ್ಥಾಪಿಸಿಕೊಂಡು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಿರುವರು. ಮದ್ರಾಸ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಧುರೀಣರಾಯ್ಕೆಯ ಸಂಬಂಧದಲ್ಲಿ ಕಾಂಗ್ರೆಸ ವರಿಷ್ಠರು ಮತ್ತು ಶಾಸನ ಸಭಾ ಸದಸ್ಯರಲ್ಲಿ ಆದ ಮತಭೇದ ಸರ್ವಶ್ರುತ. ಕಾಂಗ್ರೆಸ ವರಿಷ್ಠರ ಸಲಹೆಯನ್ನು ನಿರಾಕರಿಸಿ ಧುರೀಣರನ್ನಾಯ್ದುಕೊಳ್ಳಲಾಯಿತು. ಆ ಧುರೀಣರು ಈಗ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಿರುತ್ತಾರೆ. ಧುರೀಣರಾಯ್ಕೆಯಲ್ಲಿಯೆ ತಮ್ಮ ಸಲಹೆ ಕೇಳದ್ದರಿಂದ ಸ್ವಾಭಾವಿಕವಾಗಿ ಕಾಂಗ್ರೆಸ ವರಿಷ್ಠರು ಮಂತ್ರಿಮಂಡಳ ರಚನೆಯಲ್ಲಿ ತಮ್ಮ ಸಲಹೆ ನೀಡಲಿಲ್ಲ. ಈ ಪರಿಸ್ಥಿತಿಯಲ್ಲಿ ರಚಿತವಾದ ಮಂತ್ರಿಮಂಡಳದ ಮೇಲೆ ಹೆಚ್ಚು ಹೊಣೆ ಬಿದ್ದಿದೆ. ಕಾಂಗ್ರೆಸ್ಸಿನ ಚುನಾವಣೆ ಘೋಷಣೆ ಪತ್ರಿಕೆಯಲ್ಲಿ ಮತದಾರರಿಗೆ ಕೊಟ್ಟ ಆಶ್ವಾಸನಗಳನ್ನು ಪೂರೈಸುವಲ್ಲಿ ಮಂತ್ರಿಗಳು ನಿರತರಾಗಿದ್ದರೆ[illegible] ಉಳಿದ ಮಂತ್ರಿಮಂಡಳಗಳಿಗೆ ಕಾಂಗ್ರೆಸ ವರಿಷ್ಠರ ಸಲಹೆ ಆಗಾಗ ಸಿಕ್ಕಬಹುದು. ಆದರೆ ಮದ್ರಾಸ ಮಂತ್ರಿಗಳಿಗೆ ಈ ಬಗೆಯ ಸಲಹೆ ಸಿಕ್ಕುವ ಸಂಭವವಿಲ್ಲ. ನಾವು ಹಿಂದಿನ ಸಂಚಿಕೆಯಲ್ಲಿ ಸೂಚಿಸಿದಂತೆ ಪಕ್ಷದ ಧುರೀಣರು ಕಾಂಗ್ರೆಸ ವರಿಷ್ಠರನ್ನು ಕಂಡು ಅವರ ಸಲಹೆಯಂತೆಯೆ ಮಂತ್ರಿಮಂಡಳ ರಚಿಸಬೇಕಿತ್ತು. ಆದರೆ ಶ್ರೀ ಪ್ರಕಾಶಂರು ಹಾಗೆ ಮಾಡಲಿಲ್ಲ. ಅಂತೆಯೆ ಕಾಂಗ್ರೆಸ ಧ್ಯೇಯ ಧೋರಣಗಳನ್ನು ಯಶಸ್ವಿ ಮಾಡುವಲ್ಲಿ ಅವರ ಹೊಣೆಗಾರಿಕೆ ಮತ್ತಷ್ಟು ಹೆಚ್ಚಿದೆ. ವರಿಷ್ಠರ ಮೇಲೆ ಸಿಡಿಮಿಡಿಗೊಂಡು ಕಾರ್ಯಸಾಗಿಸುವದು ಸರಿಯಾಗಲಾರದು. ಕಾಂಗ್ರೆಸ ಮಹಾಸಂಸ್ಥೆ ಮಂತ್ರಿಗಳಿಗೆ ಯಾವಾಗಲೂ ಪಿತೃಸ್ಥಾನದಲ್ಲಿ[illegible]ದನ್ನು ಮರೆಯಕೂಡದು. ಇನ್ನಾದರೂ ಅವರು ವರಿಷ್ಠರ ಸಲಹೆಯನ್ನು ಕೋರಿ ಆಡಳಿತ ಸಾಗಿಸಬೇಕು. ಈ ಮಂತ್ರಿಮಂಡಳವು ಪ್ರಾತಿನಿಧಿಕವಾಗಿದೆಂದೂ ಯೋಗ್ಯ ಜನರನ್ನೆ ಆಯ್ದುಕೊಳ್ಳಲಾಗಿದೆಂದೂ ಹೇಳಲಾಗುತ್ತದೆ. ಈ ಮಂತ್ರಿಮಂಡಳದ ಯಶಾಪಯಶಸ್ಸು ಅದರ ಕಾರ್ಯದಿಂದಲೆ ಸಿದ್ಧವಾಗುತ್ತದೆ. ಕರ್ನಾಟಕಕ್ಕೆ ಈ ಮಂತ್ರಿಮಂಡಳದಲ್ಲಿ ಒಂದು ಸ್ಥಾನ ಸಿಕ್ಕಿದೆ. ಶ್ರೀ ಕಾರಂತರು ಮಂತ್ರಿಗಳಾಗಿ ನಿಯಮಿಸಲ್ಪಟ್ಟದ್ದು ಅಭಿನಂದನೀಯವಾಗಿದೆ. ಅವರು ತಮ್ಮ ಪಾಂಡಿತ್ಯ, ಕಾರ್ಯಕ್ಷಮತೆ ಮೊದಲಾದ ಗುಣಗಳಿಂದ ಕನ್ನಡಿಗರ ಕೀರ್ತಿಯನ್ನು ಮೊಳಗಿಸಲಿ.

ಗೃಹಮಂತ್ರಿಗಳ ಆಶ್ವಾಸನ

ಮುಂಬಯಿ ಸರಕಾರದ ಗೃಹಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯರು ಪತ್ರಿಕಾ ಸುದ್ದಿಗಾರರ ಸಭೆಯಲ್ಲಿ ಮಾತಾಡುತ್ತ ಕೆಲ ಮಹತ್ವದ ಆಶ್ವಾಸನ ಕೊಟ್ಟಿರುವರು. ಸಲಹೆಗಾರ ಸರಕಾರದ ಅನಿರ್ಬಂಧ ಅಧಿಕಾರ ಮತ್ತು ಶಿಥಿಲ ಮೇಲ್ವಿಚಾರಣೆಗಳ ಮೂಲಕ ಎಲ್ಲೆಲ್ಲಿಯೂ ಲಂಚಗುಳಿತನ ನಲಿದಾಡಿ ಜನತೆ ಅದರಿಂದ ಜರ್ಜರಿತವಾಗಿದೆ. ಈ ಲಂಚಗುಳಿತನವನ್ನು ನಿರ್ಮೂಲ ಮಾಡಬೇಕಾದರೆ ಜನತೆ ಸರಕಾರದೊಡನೆ ಸಕ್ರಿಯ ಸಹಕರಿಸುವದು ಅವಶ್ಯವಾಗಿದೆ. ಈ ಸಂಬಂಧದಲ್ಲಿ ಗೃಹಮಂತ್ರಿಗಳು ಅಧಿಕಾರಿಗಳಲ್ಲಿ ಲಂಚಗುಳಿತನ ಮತ್ತು ಉಚ್ಛೃಂಖಲವೃತ್ತಿ ಬಹಳ ಬೆಳೆದಿವೆ. ಅವುಗಳನ್ನು ಮುರಿಯಬೇಕಾಗಿದೆ. ಎರಡು ಅನಿಷ್ಟಗಳಲ್ಲಿ ದೊಡ್ಡದನ್ನು ಹತ್ತಿಕ್ಕಿದರೆ ಸಣ್ಣದು ತಂತಾನೆ ಅಳಿದು ಹೋಗುವುದು. ಅನಿಷ್ಟವನ್ನು ತೆಗೆದೊಗೆಯಲು ಅನಿಷ್ಟ ಮಾರ್ಗವನ್ನು ಹಿಡಿಯಕೂಡದು' ಎಂದು ಹೇಳಿದ್ದು ಯಥಾಸ್ಥಿತವಾಗಿದೆ. ಅಧಿಕಾರಿಗಳ ಉಚ್ಛೃಂಖಲ ವೃತ್ತಿ ಪ್ರತಿಕ್ಷಣಕ್ಕೆ ಜನತೆಯ ನಿದರ್ಶನಕ್ಕೆ ಬರುತ್ತದೆ. ತಮ್ಮನ್ನು ಕೇಳುವವರಾರೂ ಇಲ್ಲ ಎಂಬ ಮದಾಂಧತೆಯಿಂದ ನಡೆದುಕೊಳ್ಳುವ ಅಧಿಕಾರಿಗಳ ಉಪಟಳವನ್ನೂ ಜನ ಅನುಭವಿಸಿದುದುಂಟು. ಈ ವೃತ್ತಿಯ ಪ್ರಾಬಲ್ಯದಿಂದ ಲಂಚಗುಳಿತನ ಅವರಲ್ಲಿ ಹೆಚ್ಚಾಗಿ ಮನೆಮಾಡಿದೆ. ಇದರಿಂದ ಸರಕಾರೀ ಅಧಿಕಾರಿಗಳ ವಿಷಯಕ್ಕೆ ಹೇಯಭಾವ ಜನತೆಯಲ್ಲಿ ಹೆಚ್ಚಿದೆ. ಇದು ಮಾಯವಾಗಿ ಅಧಿಕಾರಿಗಳಿಗೆ ಜನತೆಯ ಹಾರ್ದಿಕ ಸಹಕಾರ ಸಿಕ್ಕಬೇಕಾದರೆ ಅವರ ಮನೋವೃತ್ತಿಯಲ್ಲಿ ಸಂಪೂರ್ಣ ಬದಲಾವಣೆಯಾಗಬೇಕು. ಕಾರ್ಯಕ್ಷಮ ಸರಕಾರದ ಉಗ್ರ ಧೋರಣದಿಂದಲೆ ಇದು ಸಾಧ್ಯ. ಕಡಮೆ ಸಂಬಳ ಲಂಚಗುಳಿತನಕ್ಕೆ ಕಾರಣವೆಂಬದನ್ನು ಮಾನ್ಯ ಮಂತ್ರಿಗಳು ಅಲ್ಲಗಳೆದಿದ್ದಾರೆ. ಅಧಿಕಾರಿಗಳಿಗೆ ಸಂಬಳ ಕಡಮೆ ಸಿಕ್ಕುವದೆಂಬುದು ಸರಿಯಲ್ಲ 'ಅಧಿಕಾರಿಗಳು ಎರಡನೆ ಕಡೆಗೆ ಸಿಗಲಾರದಷ್ಟು ಭಾರೀ ಸಂಬಳ ಹೊಡೆಯುತ್ತಿರುವರು' ಎಂದು ಹೇಳಿದ್ದು ನಿಜವಾಗಿದೆ. ಲಂಚಗುಳಿತನವನ್ನು ತಮ್ಮ ಲಕ್ಷಕ್ಕೆ ಸಾರ್ವಜನಿಕರು ತರಬೇಕೆಂದು ಮಾನ್ಯ ಮಂತ್ರಿಗಳು ಹೇಳಿರುವರು. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ತಮ್ಮ ಗುಪ್ತ ಪೋಲಿಸಾಧಿಕಾರಿಗಳ ಸಹಾಯವನ್ನೂ ಪಡೆಯಬೇಕೆಂದು ನಾವು ಸೂಚಿಸದಿರಲಾರೆವು. ಅಧಿಕಾರಿಗಳ ವಿರುದ್ಧ ದೂರು ಹೇಳುವಲ್ಲಿ ಜನ ಧೈರ್ಯದಿಂದ ಮುಂದೆ ಬರಲಿಕ್ಕಿಲ್ಲ; ಏಕೆಂದರೆ ಆ ಅಧಿಕಾರಿಗಳ ಭಯ ಅವರಿಗೆ ಯಾವಾಗಲೂ ಇರುವುದು. ಆದುದರಿಂದ ಸಿ ಆಯ ಡಿ ಅಧಿಕಾರಿಗಳನ್ನೂ ಈ ಕಾರ್ಯಕ್ಕೆ ನೇಮಿಸಬೇಕೆಂದು ಕೇಳಿಕೊಳ್ಳುತ್ತೇವೆ. ಅಧಿಕಾರಿಗಳ ಉಚ್ಛೃಂಖಲವೃತ್ತಿ ಮತ್ತು ಲಂಚಗುಳಿತನ ಬೇಗನೆ ಇಲ್ಲದಂತಾಗಿ ಜನತೆಯ ಪೀಡೆ ಕಡಮೆಯಾಗಲೆಂದು ಹಾರೈಸುತ್ತೇವೆ.

ಕಾಂಗ್ರೆಸ್ಸಿನ ಅಧ್ಯಕ್ಷತೆ

ಕಳೆದ ಆರು ವರುಷಗಳಿಂದ ಕಾಂಗ್ರೆಸ್ಸಿನ ಸೂತ್ರಗಳನ್ನು ಒಳ್ಳೆ ಯಶಸ್ವಿಯಾಗಿ ಧರಿಸಿದ ಮೌಲಾನಾ ಅಬುಲ ಕಲಂ ಅಝಾದರು ಕಾಂಗ್ರೆಸ್ ಸೂತ್ರಗಳನ್ನು ಭಾವೀ ಚುನಾಯಿತ ಅಧ್ಯಕ್ಷರಿಗೆ ಒಪ್ಪಿಸಿಕೊಡಲಿರುವರು. ಕಾಂಗ್ರೆಸ್ಸಿನ ನಿಯಮಗಳಂತೆ ಕಾಂಗ್ರೆಸ್ ಬಹಿರಂಗ ಅಧಿವೇಶನದಲ್ಲಿಯೇ ಅವರ ಈ ರೀತಿ ಅಧಿಕಾರಗಳನ್ನು ಒಪ್ಪಿಸತಕ್ಕವರಿರುವರು. ಸದ್ಯದ ಕಠಿಣ ಪರಿಸ್ಥಿತಿಯಲ್ಲಿ ಪಂಡಿತ ಜವಾಹರಲಾಲರೆ ಕಾಂಗ್ರೆಸ್ ಅಧ್ಯಕ್ಷ ಪದವನ್ನಲಂಕರಿಸಲು ಸರ್ವಶ್ರೇಷ್ಠ ಯೋಗ್ಯರಾಗಿರುವರೆಂದು ತಮ್ಮದು ಮತ್ತು ವರ್ಕಿಂಗ ಕಮಿಟಿ ಸದಸ್ಯರ ಅಭಿಪ್ರಾಯವಿದೆಂದು ರಾಷ್ಟ್ರಪತಿ ಅಝಾದರು ಪ್ರಸಿದ್ಧಿಸಿರುವರು. ಈಗ ಕಾಂಗ್ರೆಸ್ ಪ್ರತಿನಿಧಿಗಳು ಪಂಡಿತ ಜವಾಹರಲಾಲ, ಸರದಾರ ವಲ್ಲಭಭಾಯಿ ಪಟೇಲ ಮತ್ತು ಆಚಾರ್ಯ ಕೃಪಲಾಣಿಯವರ ಹೆಸರುಗಳನ್ನು ಸೂಚಿಸಿರುವರು. ಇವರಲ್ಲಿ ಯಾರಾದರೂ ತಮ್ಮ ಹೆಸರು ಹಿಂತೆಗೆದುಕೊಳ್ಳುವದಿದ್ದರೆ ಹತ್ತು ದಿನಗಳಲ್ಲಿ ಹಾಗೆ ಮಾಡಬಹುದು. ಉಳಿದವರಲ್ಲಿ ಒಬ್ಬರ ಚುನಾವಣೆ ಮೇ ೧೯ ಕ್ಕೆ ನಡೆಯುವದು. ಈ ರೀತಿ ಚುನಾವಣೆಯಾದ ನಂತರ ಕಾಂಗ್ರೆಸ್ ಬಹಿರಂಗ ಅಧಿವೇಶನದಲ್ಲಿ ಸದ್ಯದ ಅಧ್ಯಕ್ಷರು ಅವರಿಗೆ ಅಧಿಕಾರ ಸೂತ್ರಗಳನ್ನು ವಹಿಸಿ ಕೊಡುವರು. ಈ ಮೂವರು ಹುರಿಯಾಳಗಳಲ್ಲಿ ಪಂಡಿತ ಜವಾಹರಲಾಲರು ಸದ್ಯದ ಕಠಿಣ ಪ್ರಸಂಗದಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷತೆ ವಹಿಸಲು ಸರ್ವ ರೀತಿಯಿಂದ ಯೋಗ್ಯರಾಗಿರುವರು. ಅವರು ಅಂತರ್‌ರಾಷ್ಟ್ರೀಯ ಕೀರ್ತಿ ಪಡೆದಿರುವರು. ಹಿಂದುಸ್ತಾನದಲ್ಲಿಯೂ ಅವರ ಬಗ್ಗೆ ಅತ್ಯಂತಿಕ ಪ್ರೇಮಾದರಗಳು ಇವೆ. ಮಹಾತ್ಮರ ಮಹಾತತ್ವಗಳನ್ನು ಜವಾಹರಲಾಲರು ಚೆನ್ನಾಗಿ ಅರಗಿಸಿಕೊಂಡಿರುತ್ತಾರೆ. ಕಾಂಗ್ರೆಸ್ ಪ್ರತಿನಿಧಿಗಳು ಇಂಥ ಮಹಾಮುತ್ಸದ್ಧಿಗಳನ್ನು ಮತ್ತೆ ಈ ಸಲ ಕಾಂಗ್ರೆಸ್ ಅಧ್ಯಕ್ಷರೆಂದು ಆರಿಸಿಕೊಂಡು ಅವರ ನೇತೃತ್ವದಲ್ಲಿ ಕಾಂಗ್ರೆಸ್ಸಿನ ಸ್ವಾತಂತ್ರ್ಯ ಸಂಗ್ರಾಮವನ್ನು ಯಶಸ್ವಿಯಾಗಿ ಸಾಗಿಸುವರೆಂದು ನೆರೆ ನಂಬಿದ್ದೇವೆ.

ಮಹತ್ವದ ನಿರ್ಣಯ

ಕಾಂಗ್ರೆಸ್ ಕಾರ್ಯಕಾರಿ ಮಂಡಳದವರು ದಿಲ್ಲಿಯಲ್ಲಿಯ ತಮ್ಮ ಸಭೆಯಲ್ಲಿ ಮಹತ್ವದ ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆ. ಸಾರ್ವಜನಿಕ ಕಾರ್ಯಕರ್ತರು ಸಾರ್ವಜನಿಕರಿಂದ ಸ್ವೀಕರಿಸಿದ ನಿಧಿಯನ್ನೆಲ್ಲ ಸಾರ್ವಜನಿಕರಿಗಾಗಿಯೆ ಉಪಯೋಗಿಸಬೇಕು. ಸ್ವಂತಕ್ಕಾಗಿ ಉಪಯೋಗಿಸಬಾರದೆಂಬುದೆ ಆ ಮಹತ್ವದ ಗೊತ್ತುವಳಿ. ಸಾರ್ವಜನಿಕ ಕಾರ್ಯಕರ್ತರಿಗೆ ಅರ್ಪಿಸಲಾದ ಸಾರ್ವಜನಿಕ ಹಣವನ್ನು ಸ್ವಂತಕ್ಕಾಗಿ ಉಪಯೋಗಿಸುವದರಿಂದ ಸಾರ್ವಜನಿಕ ಜೀವನವೆ ಕೆಟ್ಟು ಹಾಳಾಗುತ್ತದೆ. ಇಷ್ಟೇ ಅಲ್ಲದೆ ಕಾರ್ಯಕರ್ತರು ತಾವು ಸ್ವೀಕರಿಸಿದ ಹಣದ ಲೆಕ್ಕವನ್ನಿಡಬೇಕೆಂದು ಈ ಮಂಡಳವು ಅಭಿಪ್ರಾಯಪಡುತ್ತದೆ ಎಂದು ಕಾರ್ಯಕಾರಿ ಮಂಡಳದವರು ನಿರ್ಧರಿಸಿದ್ದಾರೆ. ಸಾರ್ವಜನಿಕರಿಂದ ಎತ್ತಿದ ನಿಧಿಯ ಉಪಯೋಗವು ಸಾರ್ವಜನಿಕ ಕಾರ್ಯಕ್ಕಾಗಿಯೆ ಆಗುವದು ನ್ಯಾಯ್ಯ. ಯಾರಾದರೂ ಇಂಥ ಹಣವನ್ನು ಸ್ವತಂಕ್ಕಾಗಿ ಉಪಯೋಗಿಸಿಕೊಂಡರೆ ಜನತೆಯಲ್ಲಿ ಅವರ ಬಗ್ಗೆ ಆದರಭಾವವು ಕಡಮೆಯಾಗುವದು. ಇಂಥವರಿಂದ ಸಾರ್ವಜನಿಕ ಕಾರ್ಯ ಮೊದಲಿನಂತೆ ಹೆಚ್ಚು ಯಶಸ್ವಿಯಾಗಿ ಸಾಗಲಾರದು. ಸ್ವಂತದ ಉಪಯೋಗಕ್ಕಾಗಿಯೆಂದು ನಿರ್ದಿಷ್ಟಪಡಿಸಿ ಯಾರಿಗಾದರೂ ನಿಧಿ ಸಮರ್ಪಿಸಲ್ಪಟ್ಟದ್ದರೆ ಅವರು ಕದಾಚಿತ್ ಸ್ವಂತಕ್ಕಾಗಿ ಅದನ್ನುಪಯೋಗಿಸಬಹುದು. ಆದರೆ ಹೀಗೆ ನಿರ್ದಿಷ್ಟಪಡಿಸದೆ ಕೇವಲ ಸಾರ್ವಜನಿಕ ಕಾರ್ಯಕರ್ತರೆಂದು ಯಾರಿಗಾದರೂ ನಿಧಿ ಸಮರ್ಪಿಸಲ್ಪಟ್ಟದ್ದರೆ ಅದರ ಉಪಯೋಗವು ಸಾರ್ವಜನಿಕ ಕಾರ್ಯಕ್ಕಾಗಿಯೆ ಆಗಬೇಕು. ಸಾರ್ವಜನಿಕ ಕಾರ್ಯಕರ್ತರು ಈ ಮಹತ್ವದ ಗೊತ್ತುವಳಿಯ ಮರ್ಮವನ್ನು ತಿಳಿದುಕೊಂಡು ಅದರಂತೆ ನಡೆದುದಾದರೆ ಅವರ ಬಗ್ಗೆ ಜನತೆಯಲ್ಲಿ ಇನ್ನಷ್ಟು ಆಳವಾದ ಪ್ರೇಮಾದರಗಳು ನೆಲಸಿ ಅವರಿಂದ ಹೆಚ್ಚು ಕಾರ್ಯ ಆಗುವದೆಂಬಲ್ಲಿ ಸಂದೇಹವಿಲ್ಲ.

ಹೊರಗಿನಿಂದ ಸಹಾಯ ಬೇಕು

ಹಿಂದುಸ್ತಾನದ ಆಹಾರ ಪರಿಸ್ಥಿತಿ ಇತ್ತೀಚೆ ಬಹಳ ಕೆಟ್ಟಿದ್ದು ಹೊರಗಿನಿಂದ ಆಹಾರ ಪದಾರ್ಥಗಳು ಬರದಿದ್ದರೆ ಪ್ರಾಣಹಾನಿ ನಿಶ್ಚಿತವೆಂದು ಅಮೇರಿಕೆಯ ಸ್ವಯಂ ಪ್ರೇರಣೆಯಿಂದ ಅನ್ನ ಮಿತವ್ಯಯ ಸಮಿತಿಯ ಅಧ್ಯಕ್ಷರೆಂದು ನಿಯಮಿಸಲ್ಪಟ್ಟ ಹೂವರರು ಅಭಿಪ್ರಾಯ ಪಟ್ಟಿದ್ದಾರೆ. ಅವರು ಹಿಂದುಸ್ತಾನದಲ್ಲಿ ಸಂಚಾರ ಮಾಡಿ ಈ ಬಗ್ಗೆ ಪ್ರಕಟಿಸಿದ ಅಭಿಪ್ರಾಯಗಳನ್ನು ಇದೇ ಸಂಚಿಕೆಯಲ್ಲಿ ಬೇರೆಡೆ ಕೊಟ್ಟಿದ್ದೇವೆ. ಅವರು ಸಂಚಾರಾನಂತರ ತಮ್ಮ ಮೊದಲಿನ ಅಭಿಪ್ರಾಯಗಳನ್ನು ಬಹಳ ಮಟ್ಟಿಗೆ ತಿದ್ದಿಕೊಂಡಿದ್ದು ಕೂಡಲೆ ಹಿಂದುಸ್ತಾನಕ್ಕೆ ಆಹಾರ ಪದಾರ್ಥ ಕಳಿಸಬೇಕಾದುದು ಅತ್ಯವಶ್ಯವೆಂದು ಹೇಳಿದ್ದಾರೆ. ಹಿಂದುಸ್ತಾನ ಸರಕಾರದವರು ಇಲ್ಲಿ ಬೇಕಾದ ಆಹಾರ ಪದಾರ್ಥಗಳ ಅಂಕೆಸಂಖ್ಯೆ ಪ್ರಮಾಣ ಮೀರಿ ಕೊಟ್ಟಂತೆ ಅಮೇರಿಕೆಯವರಿಗೆ ಸಂಶಯ ಬಂದಿದೆಂಬುದೂ ಹೂವರರ ಭಾಷಣಗಳಿಂದ ಸೂಚಿತವಾಗುತ್ತದೆ. ಅಂಕೆಸಂಖ್ಯೆ ಕೆಲಮಟ್ಟಿಗೆ ಅಂದಾಜು ಮೀರಿದ್ದರೂ ಇಲ್ಲಿನ ಪರಿಸ್ಥಿತಿ ಭೀಕರವಾಗಿದೆಂಬುದನ್ನು ಯಾರೂ ಅಲ್ಲಗಳೆಯರು. ಇನ್ನು ಪರದೇಶಗಳಲ್ಲಿ ಜನ ಮಾಂಸಾಹಾರವನ್ನು ಹೆಚ್ಚಾಗಿ ಸೇವಿಸುವುದರಿಂದ ಧಾನ್ಯ ದವಸಗಳು ಅವರಿಗೆ ಹೆಚ್ಚಿಗೆ ಬೇಕಾಗಲಿಕ್ಕಿಲ್ಲ. ಅಂತೆಯೇ ಅವರಿಗೆ ಪ್ರತಿದಿನ ೫ ಔಂಸು ಧಾನ್ಯ ಮಾತ್ರ ಸಾಕಾಗುತ್ತಿರುವಾಗ ೧೩ ಔಂಸ ಪಡೆಯುತ್ತಿರುವ ಭಾರತೀಯರು ಧನ್ಯರೆಂದು ಹೂವರರು ಹೇಳುವದರಲ್ಲಿ ಅರ್ಥವೇನೂ ಇಲ್ಲ. ಹೆಚ್ಚಾಗಿ ಧಾನ್ಯದವಸಗಳಿಂದಲೆ ಉಪಜೀವನ ಸಾಗಿಸುತ್ತಿರುವ ಭಾರತೀಯರಿಗೆ ೧೩ ಔಂಸ ಧಾನ್ಯಗಳೆಂದರೆ ಬಹಳ ಕಡಮೆಯೆಂದು ಹೇಳಬಹುದು. ಇದನ್ನು ನೆನೆದು ಅಮೇರಿಕೆ ಸರಕಾರದವರು ಭಾರತೀಯರಿಗೆ ಅತ್ಯವಶ್ಯವಾಗಿ ಬೇಕಾದ ಧಾನ್ಯಗಳನ್ನು ಕೂಡಲೆ ಪೂರೈಸಬೇಕು. ಇನ್ನು ಸರಕಾರದವರಾದರೂ ಕೇವಲ ಅಮೇರಿಕೆಯನ್ನೆ ಅವಲಂಬಿಸಿ ಸ್ವಸ್ಥ ಕೂಡ್ರದೆ ಸಯಾಮ ಅಸ್ಟ್ರೇಲಿಯಾ ಮೊದಲಾದ ರಾಷ್ಟ್ರಗಳಿಂದಲೂ ಅಕ್ಕಿ ಗೋದಿ ತರಿಸಿಕೊಳ್ಳಬೇಕು. ಧಾನ್ಯಗಳು ಬಂದರೆ ಮಾತ್ರ ಹಿಂದೀ ಜನರು ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಪಾರಾಗಬಹುದು. ಇಲ್ಲದಿದ್ದರೆ ಪರಿಸ್ಥಿತಿ ಅತ್ಯಂತ ಭೀಕರವಾಗಿ ಲಕ್ಷಗಟ್ಟಲೆ ಜನ ಉಪವಾಸಮಾರಿಗೆ ಬಲಿಯಾಗಬೇಕಾಗಬಹುದು. ಇದನ್ನು , ತಪ್ಪಿಸುವ ಹೊಣೆ ಅಮೇರಿಕೆ ಮೊದಲಾದ ಉಳಿಕೆಯ ರಾಷ್ಟ್ರಗಳ ಮೇಲಿದೆಂಬುದು ನಿಃಸಂಶಯ. ಶಕ್ಯವಿದ್ದ ಸ್ಥಳಗಳಿಂದ ಧಾನ್ಯಗಳನ್ನು ತರಿಸಿ ಯೋಗ್ಯ ರೀತಿಯಿಂದ ಅವುಗಳ ಹಂಚಿಕೆ ಎಲ್ಲೆಡೆ ಆಗುವಂತೆ ನೋಡಿಕೊಳ್ಳುವದು ಹಿಂದುಸ್ತಾನ ಸರಕಾರದ ಮತ್ತು ಪ್ರಾಂತಿಕ ಸರಕಾರಗಳ ಕರ್ತವ್ಯವಾಗಿದೆಂದು ಬೇರೆ ಹೇಳಬೇಕಿಲ್ಲ.

ಪ್ರತೀಕಾರ ಚಳವಳಿ

ದಕ್ಷಿಣ ಆಫ್ರಿಕೆಯಲ್ಲಿ ಹಿಂದ ವಿರೋಧಿ ಕಾಯದೆಗಳ ದುಷ್ಪರಿಣಾಮಗಳನ್ನು ಹಿಂದೀಯರು ಅನುಭವಿಸುತಿರುವರೆಂಬುದು ಸರ್ವಶ್ರುತ. ಇಂಥ ಹಿಂದ ವಿರೋಧಿ ಕಾಯಿದೆಗಳು ರದ್ದಾಗಲೆ ಹಿಂದೀಯರ. ಇದೀಗ ಹಿಂದೀಯರಲ್ಲಿ ಕೂಡಲಿರುವ ವಸಾಹತು ಪ್ರಮುಖ ಮಂತ್ರಿಗಳ ಪರಿಷತ್ತಿಗೆ ದಕ್ಷಿಣ ಆಫ್ರಿಕೆಯಲ್ಲಿಯ ಇಂಡಿಯನ್ ಕಾಂಗ್ರೆಸ್ಸಿನವರು ತಂತಿಮಾಡಿ ಈ ಕಾಯದೆಯನ್ನು ಹಿಂತೆಗೆದುಕೊಳ್ಳಲು ಜನರಲ್ ಸ್ಮಟ್ಸರಿಗೆ ಒತ್ತಾಯಪಡಿಸಿರೆಂದು ಬ್ರಿಟಿಶ್ ಮುಖ್ಯ ಮಂತ್ರಿಗಳಿಗೆ ಬಿನ್ನವಿಸಿಕೊಂಡಿದ್ದಾರೆ. ಈ ಬಗೆಯ ಕಾಯದೆಯನ್ನು ಹಿಂತೆಗೆದುಕೊಳ್ಳದಿದ್ದರೆ ಟ್ರಾನ್ಸವಾಲ್ ಕಾಂಗ್ರೆಸ್ಸಿನವರು ಸವಿನಯ ಕಾಯದೇಭಂಗ ಮಾಡುವ ನಿರ್ಣಯ ಸ್ವೀಕರಿಸಿರುವರೆಂದೂ ತಿಳಿಸಿದ್ದಾರೆ. ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯರು ಅಲ್ಲಿನ ಬಿಳಿಯರ ಸ್ವಾರ್ಥ ಧೋರಣೆಯಿಂದ ಬಗೆ ಬಗೆಯ ಕಷ್ಟನಷ್ಟ ಅಪಮಾನಗಳಿಗೆ ಗುರಿಯಾಗಿರುವರು. ಜನರಲ್ ಸ್ಮಟ್ಸರು ಭಾರತೀಯರ ಹಿತವನ್ನು ಸ್ವಲ್ಪವೂ ಲಕ್ಷಿಸಲೊಲ್ಲರು. ಪ್ರತೀಕಾರಾಸ್ತ್ರವೆ ಇದಕ್ಕೆ ಮದ್ದೆಂದು ಬೇರೆ ಹೇಳಬೇಕಿಲ್ಲ. ಹಿಂದುಸ್ತಾನ ಸರಕಾರದವರಾದರೂ ಈ ಸಂಬಂಧದಲ್ಲಿ ಉಗ್ರ ಉಪಾಯ ಕೈಕೊಳ್ಳಬೇಕೆಂದು ಈ ಮೊದಲು ಕೇಳಿಕೊಳ್ಳಲಾಗಿದೆ. ಆದರೆ ಪರಕೀಯ ಸರಕಾರ ಇಲ್ಲಿರುವ ವರೆಗೆ ಯಾವ ಪ್ರತೀಕಾರವನ್ನೂ ಹಿಂದೀ ಸರಕಾರ ಯಶಸ್ವಿಯಾಗಿ ಸ್ವೀಕರಿಸಲಾರದೆಂಬುದು ಸುಸ್ಪಷ್ಟವಾಗಿದೆ. ಹಿಂದೀ ಸಂಸ್ಥೆಗಳ ಮಹಾಮಂಡಳದ ಶಿಷ್ಟಮಂಡಳವೂ ಸ್ಮಟ್ಸರನ್ನು ಕಂಡು ಮಾತುಕತೆಯಾಡಬೇಕೆಂದು ನಿರ್ಧರಿಸಿದೆ. ಇದರಂತೆ ಇನ್ನೂ ಹಲವು ಸಂಸ್ಥೆಗಳೂ ಸ್ಮಟ್ಸರಲ್ಲಿಗೆ ಶಿಷ್ಟಮಂಡಳ ತೆಗೆದುಕೊಂಡು ಹೋಗಲಿರುವವು. ಆದರೆ ಸ್ಮಟ್ಸರವರು ಶಿಷ್ಟಮಂಡಳ ಮುಂತಾದವುಗಳಿಗೆ ಮಣಿಯುವವ್ಯಕ್ತಿಯವರಲ್ಲೆಂಬುದು ಇತ್ತೀಚಿನ ಅವರ ಧೋರಣದಿಂದ ಸ್ಪಷ್ಟವಾಗುವದು. ಮೂಗು ಹಿಡಿದರೆ ಬಾಯಿ ತೆರೆಯುವದೆಂಬ ಗಾದೆಯಂತೆ ಹಿಂದುಸ್ತಾನವು ಅದರ ಮೇಲೆ ಪ್ರತೀಕಾರಾಸ್ತ್ರವನ್ನು ಸ್ವೀಕರಿಸಿದರೆ ಮಾತ್ರ ದಕ್ಷಿಣ ಆಫ್ರಿಕಾ ಸರಕಾರವು ಇಂಥ ಕಪ್ಪುಕಾಯದೆಗಳನ್ನು ಹಿಂತೆಗೆದುಕೊಳ್ಳಬಹುದು. ಭಾವೀ ರಾಷ್ಟ್ರೀಯ ಸರಕಾರ ಮಾತ್ರವೆ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸಬಲ್ಲದು.

ಕಾಂಗ್ರೆಸ್ಸಿನ ಕರ್ನಾಟಕ ಪ್ರತಿನಿಧಿಗಳು

ಪ್ರಾಂ ಕಾಂ. ಕ. ಪ್ರಕಟನೆ

ಈ ಕೆಳಗಿನವರು ಕಾಂಗ್ರೆಸ್ಸಿನ ಪ್ರತಿನಿಧಿಗಳಾಗಿಯೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಸಭಾಸದರಾಗಿಯೂ ಆರಿಸಿ ಬಂದಿದ್ದಾರೆಂದು ಕರ್ನಾಟಕ ಪ್ರಾಂ. ಕಾಂ. ಕ. ಪ್ರಧಾನ ಕಾರ್ಯದರ್ಶಿಗಳು ತಿಳಿಸುತ್ತಾರೆ. ಕೆಲವು ಸ್ಥಳಗಳ ಫಲಿತಾಂಶವು ಇನ್ನೂ ಹೊರಬೀಳತಕ್ಕದ್ದಿದೆ. ಆ ಹೆಸರುಗಳು ದೊರೆತ ಕೂಡಲೇ ಅವುಗಳನ್ನು ಪ್ರಸಿದ್ಧಿಸಲಾಗುವದು.

ಬೆಳಗಾವ ಜಿಲ್ಲೆ

೧ ಸಿಂಗಪ್ಪ ಕರಿಲಿಂಗಣ್ಣವರ, ೨ ಜಯದೇವ ಕುಲಕರ್ಣಿ, ೩ ಮಾನ್ಯ ಮಂತ್ರಿಗಳಾದ ಎಂ. ಪಿ. ಪಾಟೀಲರು, ೪ ಶಿವರಾಂ ಮಲ್ಲಪ್ಪಾ ಕೋಷ್ಟಿ, ೫ ಬಸವಣ್ಣೆಪ್ಪಾ ಸಾಣಿಕೊಪ್ಪ, ೬ ಶಿರಗೌಡಾ ಶಿವಗೌಡಾ ಪಾಟೀಲ, ೭ ಶ್ರೀಧರ ನಾರಾಯಣ ಜೋಶಿ, ೮ ಎ. ಎ. ಮುಂಡಗಿ ವಕೀಲರು, ೯ ತಲ್ಲೂರ ರಾಯನಗೌಡಾ ಪಾಟೀಲ, ೧೦ ವೀರಪ್ಪಾ ರೇಶ್ಮಿ.

ವಿಜಾಪುರ ಜಿಲ್ಲೆ

೧೧ ಆರ್. ಜಿ. ದುಬೆ, ೧೨ ಚನಬಸಪ್ಪ ಅಂಬಲಿ ಎಂ. ಎಲ್. ಎ., ೧೩ ಸಿದ್ದಪ್ಪ ಮಾಳವಾಡ, ೧೪ ರಾಮಸಿಂಗ ಹಜೇರಿ, ೧೫ ಎಸ್. ಸಿ. ಮಿರ್ಜಿ, ೧೬ ನಿಜಗುಣಿ ರೇವಣಸಿದ್ದಪ್ಪ ತಾರಾಪುರೆ, ೧೭ ದಾನಪ್ಪಾ ರಾಜಮುನಿ, ೧೮ ತಿಪ್ಪಣ್ಣಾ ಗುದ್ಲಿ, ೧೯ ಜಿ. ನಾರಾಯಣಪ್ಪಾ.

ಧಾರವಾಡ ಜಿಲ್ಲೆ

೨೦ ಪಂಚಾಕ್ಷರಿ ಗುರುಪಾದಮಠ, ೨೧ ಟಿ. ಆರ್. ನೇಶ್ವಿ ಎಂ. ಎಲ್. ಎ., ೨೨ ಕೆ. ಎಫ್. ಪಾಟೀಲ ಉಪಮಂತ್ರಿಗಳು, ೨೩ ವಿ. ಟಿ. ಮಾಗಡಿ, ೨೪ ಅಂದಾನೆಪ್ಪ ಕುಂದರಗಿ, ೨೫ ಚನಬಸಪ್ಪಾ ರಾಚಪ್ಪಾ ವಾಲಿ, ೨೬ ಅಬ್ದುಲ್ ಅಜೀಜ ಥಾಲಾಯತ, ೨೭ ಎಲ್. ಭೀಮಕುಮಾರ, ೨೮ ಬಿ. ಎನ್ ಮುನವಳ್ಳಿ ವಕೀಲರು, ೨೯ ಮಲ್ಲನಗೌಡಾ ಪಾಟೀಲ, ೩೦ ಗುದ್ಲೆಪ್ಪ ಹಳ್ಳಿಕೇರಿ.

ಉತ್ತರ ಕನ್ನಡಜಿಲ್ಲೆ

೩೧— ತಿಮ್ಮಪ್ಪಾ ಮಂಜಪ್ಪಾ ಹೆಗಡೆ ೩೨ ಟಿ. ಎಸ್. ನಾಯಿಕ ೩೩ ಬಿ. ಎಸ್. ಮಾವಿನಕುರ್ವೆ ೩೪ ಶಂಕರ ನಾರಾಯಣ ಗಿರಿ.

ದ. ಕನ್ನಡ ಜಿಲ್ಲೆ

೩೫ ಆರ್ ಶ್ರೀನಿವಾಸರಾವ ೩೬ ಟಿ ರಾಮದಾಸ ನಾಯಕ ೩೭ ಕೆ. ಆರ್. ಕಾರಂತ ಮಂತ್ರಿಗಳು ೩೮ ಕೆ ರಾಮ ಕುಡುವ ೩೯ ದಾಮೋದರ ಬಾಳಿಗಾ ೪೦ ಯು ಶ್ರೀನಿವಾಸ ಮಲ್ಯ ೪೧ ಎಂ ಡಿ ಅಧಿಕಾರಿ ೪೨ ಕೆ ಕೆ ಶೆಟ್ಟಿ ೪೩ ಕೆ ಪಿ ರಾಮಪುದುವಾಳ ೪೪ ಕೆ ವೇಣುಗೋಪಾಲ ನಾಯ್ಕ ೪೫ ಕೆ ಉಮೇಶರಾವ ವಕೀಲ ೪೬ ಆರ್ ಆರ್ ದಿವಾಕರ ೪೭ ಶ್ರೀಮತಿ ಕಮಲಾದೇವಿ ೪೮ ಎಚ್ ನಾರಾಯಣರಾವ.

ಬಳ್ಳಾರಿ ಜಿಲ್ಲೆ

೪೯ ಶಿರಸಪ್ಪಾ ಇಜಾರಿ ೫೦ ಬಸ್ನಿಮಟ್ಟಿ ಲಂಕೆಪ್ಪ ೫೧ ಮರಿಸ್ವಾಮಿ ಮಠದ ಪಾಟೀಲ ೫೨ ಬಿ ಎಂ ಅಜ್ಜಯ್ಯ.

ಕೊಡಗು

೫೩ ಸಿ ಎಂ ಪುಣಚ್ಚ ೫೪ ಕೆ ಸಿ ಕರುಂಬಯ್ಯ.

ಬೆಂಗಳೂರು ದಂಡು

೫೫ ಇ ಎಸ್ ವೆಂಕಟರಮಣನ.

ಮೈಸೂರು ಸಂಸ್ಥಾನ

ಬೆಂಗಳೂರು ಜಿಲ್ಲೆ:— ೫೬ ಕೆ ಟಿ ಭಾಷ್ಯಂ ೫೭ ಜಿ ವಿ ಚೆಲ್ಲಂ ೫೮ ಆರ್ ದೇವರ ಕೊಂಡಪ್ಪ ಎಂ ಆರ್ ಎ ೫೯ ಕೆ ಸುಬ್ಬರಾವ. ಚಿತ್ರದುರ್ಗ ಜಿಲ್ಲೆ:— ೬೦ ಎಸ್ ನಿಜಲಿಂಗಪ್ಪ ೬೧ ಟಿ ಎಂ ಗುರುಸಿದ್ದಪ್ಪ ೬೨ ಪಿ ಚನ್ನರೆಡ್ಡಿ ಕಡೂರ ಜಿಲ್ಲೆ:— ೬೩ ಪಿ ಸಿ ರುದ್ರಪ್ಪ, ಶಿವಮೊಗ್ಗಾ ಜಿಲ್ಲೆ:— ೬೪ ಕೆ ಆರ್ ಮಾಧವರಾವ, ೬೫ ಕೆ ಜಿ ವಡೆಯರ, ೬೬ ಟಿ ಎಸ್ ಶಿವಪ್ಪ, ಹಾಸನ ಜಿಲ್ಲೆ:— ೬೭ ಡಿ ಶಂಕರಸಿಂಗ, ತುಮಕೂರ ಜಿಲ್ಲೆ:— ೬೮ ಟಿ ಎನ್ ಮುದಲಗಿರಿಗೌಡ ಎಂ ಆರ್ ಎ, ಮೈಸೂರ ಜಿಲ್ಲೆ:— ೬೯ ಎಂ. ಎಲ್. ನಂಜರಾಜ ಅರಸು, ೭೦ ಎಚ್, ಲಿಂಗಣ್ಣ, ೭೧ ಎ. ರಾಮಣ್ಣ, ಮಂಡ್ಯ ಜಿಲ್ಲೆ:— ಎಚ್ ಕೆ ವೀರಣ್ಣಗೌಡಾ.

ವಿಜಾಪುರ ಜಿಲ್ಲೆ— ೭೨ ಬಿ ಟಿ ಮುರನಾಳ

ಎರಡನೆ ಸಿಮ್ಲಾ ಪರಿಷತ್ತು

ಕಾಂಗ್ರೆಸ್—ಲೀಗ—ಸರಕಾರ ಪಕ್ಷಗಳಲ್ಲಿ ಚರ್ಚೆ ಪ್ರಾರಂಭ

ಪರಿಷತ್ತು ಎಂತು ಯಶಸ್ವಿಯಾಗಬಲ್ಲುದು ?

ಮತ್ತೆ ಸಿಮ್ಲಾ ಪರಿಷತ್ತು

ಹಿಂದುಸ್ತಾನದ ಸಮಸ್ಯೆಯನ್ನು ಬಿಡಿಸಲು ಮತ್ತೆ ಸಿಮ್ಲಾ ಪರಿಷತ್ತು ರವಿವಾರ ೫ ನೇ ತಾರೀಕು ಮುಂಜಾನೆ ಪ್ರಾರಂಭವಾಗಿದೆ. ಮಂತ್ರಿತ್ರಯರು ವಾಯಿಸರಾಯ ಲಾರ್ಡ ವೇವೆಲ್ಲರು ತಮ್ಮ ಪರಿವಾರದೊಡನೆ ಸಿಮ್ಲೆಗೆ ೧ ನೇ ತಾರೀಕಿನ ದಿನನೆ ಬಂದರು. ಮಹಾತ್ಮಾ ಗಾಂಧಿಯವರು ತ್ರಿಪಕ್ಷಗಳಿಗೂ ಸಲಹೆ ನೀಡುವುದಕ್ಕಾಗಿ ಸ್ಪೆಶಲ್ ಉಗಿಬಂಡಿಯಲ್ಲಿ ಸಿಮ್ಲೆಗೆ ಪ್ರಯಾಣ ಬೆಳಿಸಿದರು. ಅವರ ಜೊತೆ ಪಂಡಿತ ಜವಾಹರಲಾಲ ನೆಹರು, ಖಾನ ಅಬ್ದುಲ್ ಗಫರಖಾನರು ಹೋದರಲ್ಲದೆ ೧೦೦ ಜನ ಸುದ್ದಿಗಾರರೂ ಸಿಮ್ಲೆಗೆ ಪ್ರಯಾಣ ಬೆಳಿಸಿದರು. ಮೌಲಾನಾ ಅಬುಲ್‌ಕಲಂ ಆಝಾದ ಸರದಾರ ವಲ್ಲಭಭಾಯಿ ಪಟೇಲರು ವಿಮಾನ ಮೂಲಕ ಸಿಮ್ಲೆಗೆ ಹೋದರು. ಲೀಗ ಧುರೀಣರಾದ ಬ್ಯಾ. ಜಿನ್ನಾ, ನವಾಬಜಾದಾ ಲಿಯಾಕತ ಅಲ್ಲಿಖಾನ ನವಾಬ ಮುಹಮ್ಮದ ಇಸ್ಮಾಯಿಲ್‌ಖಾನ ಮತ್ತು ಸರದಾರ ಅಬ್ದುಲ್ ಬಾರನಿಶತಾರ ಇವರೂ ಸಿಮ್ಲೆಗೆ ಬಂದಿರುವರು. ಈ ರೀತಿಯಾಗಿ ಕಾಂಗ್ರೆಸ ಲೀಗ ಮತ್ತು ಸರಕಾರಗಳ ನಡುವೆ ವಿಚಾರವಿನಿಮಯ ನಡೆದಿದೆ.

ಸಂಯುಕ್ತಭಾರತದ ಸ್ಥಾಪನೆ

ತ್ರಿಮಂತ್ರಿಗಳು ಹಿಂದುಸ್ತಾನದ ಬೇರೆ ಬೇರೆ ಪಕ್ಷಪಂಗಡಗಳ ಧುರೀಣರೊಡನೆ ಹಿಂದೀ ಸಮಸ್ಯೆಯ ಬಗೆಗೆ ಚರ್ಚೆ ನಡೆಸಿದನಂತರ ತಮ್ಮ ಸೂಚನೆಗಳನ್ನು ಕಾಂಗ್ರೆಸ ಮತ್ತು ಲೀಗುಗಳಿಗೆ ಮಾಡಿದ್ದು ಆ ಸೂಚನೆಗಳ ತಳಹದಿಯ ಮೇಲೆಯೆ ಸಿಮ್ಲೆಯಲ್ಲಿ ಚರ್ಚೆ ನಡೆಯುವದೆಂದು ತಿಳಿಯುತ್ತದೆ. ಆ ಸೂಚನೆಗಳ ರೂಪರೇಷೆಯಿಂತಿದೆ ೧) ಸಂರಕ್ಷಣೆ ವಿದೇಶಖಾತೆ ಸುಂಕ ಮತ್ತು ಸಂಪರ್ಕ ಸೌಕರ್ಯಶಾಖೆಗಳನ್ನು ನೋಡಿಕೊಳ್ಳುವ ಸಂಯುಕ್ತ ಭಾರತವಿರಬೇಕು. ೨) ಪ್ರಾಂತಗಳನ್ನು ಹಿಂದೂಪ್ರಾಂತ ಮುಸ್ಲಿಂಪ್ರಾಂತ ಎಂದು ವಿಂಗಡಿಸಲಾಗದು ಸಂಯುಕ್ತ ಭಾರತ ಸರಕಾರಕ್ಕಿರುವ ಅಧಿಕಾರಗಳನ್ನು ಬಿಟ್ಟು ಬೇರೆ ಎಲ್ಲ ಅಧಿಕಾರಗಳು ಈ ಪ್ರಾಂತಗಳಿಗೆ ಸೇರುವವು. ೩) ಸಂಸ್ಥಾನಗಳು ಯಾವ ಕರಾರುಗಳಂತೆ ಸಂಯುಕ್ತಭಾರತವನ್ನು ಸೇರಬಹುದು ಎಂಬದನ್ನು ಸಂಯುಕ್ತಭಾರತದ ಸರಕಾರವು ಕಾಲಾನಂತರ ತಿಳಿಸಬಹುದು. ಎಂಬುದಾಗಿ ಬ್ರಿಟಿಶ್ ರಾಯಭಾರವು ಕಾಂಗ್ರೆಸ ಮತ್ತು ಲೀಗ ಪಕ್ಷಗಳಿಗೆ ತಿಳಿಸಿದೆಂದು ತಿಳಿಯುತ್ತದೆ. ಈ ಸೂಚನೆಗಳೆಂದರೆ ಲೀಗದ ಬೇಡಿಕೆ, ಕಾಂಗ್ರೆಸ್ಸಿನ ಕೊಡುಗೆ ಹಾಗು ಕೂಪಲಂಡ ಯೋಜನೆ ಈ ಮೂರು ಸಂಗತಿಗಳ ಕಿಚಡಿಯೆಂದು ಹೇಳಬಹುದಾಗಿದೆ.

ಕಾಂಗ್ರೆಸ ಧೋರಣೆಯ ಸ್ಪಷ್ಟೀಕರಣ

ರಾಷ್ಟ್ರಪತಿಗಳಾದ ಮೌಲಾನಾ ಅಬುಲ್ ಕಲಂ ಆಝಾದರು ಈ ತ್ರಿಪಕ್ಷ ಪರಿಷತ್ತಿನ ಆಮಂತ್ರಣ ಸ್ವೀಕರಿಸುವಾಗ ಸರಕಾರದವರಿಂದ ಕೆಲಮಾತಿನ ಬಗ್ಗೆ ಸ್ಪಷ್ಟೀಕರಣ ಕೇಳಿದ್ದರಂತೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಸರಕಾರದ ಈ ಸೂಚನೆಯ ಬಗ್ಗೆ ದೀರ್ಘ ಚರ್ಚೆಯಾಗಿ ನಂತರ ರಾಯಭಾರಿಗಳಿಗೆ ಈ ಸ್ಪಷ್ಟೀಕರಣ ಕೇಳಿದರೆಂದು ಹೇಳಲಾಗುತ್ತದೆ ಮೌಲಾನಾ ಸಾಹೇಬರ ಸ್ಪಷ್ಟೀಕರಣದ ಮುಖ್ಯ ಮುದ್ದೆಗಳು ಇಂತಿವೆಂದು ತಿಳಿಯುತ್ತದೆ.

೧) ಆಮಂತ್ರಣ ಪತ್ರಿಕೆಯಲ್ಲಿ ಹಿಂದೀ ಯೂನಿಯನ್ ಎಂದಿಷ್ಟೇ ಕಾಣಿಸಿದ್ದು ಅದು ಸಂಯುಕ್ತ ರಾಜ್ಯವೋ ನಾಡಕೂಟವೊ ಎಂಬುದು ಸ್ಪಷ್ಟವಿಲ್ಲ. ೨) ಮಹತ್ವದ ವಿಷಯಗಳನ್ನು ಚರ್ಚಿಸಿ ನಿರ್ಣಯಿಸುವಂಥ ಶಾಸನ ಸಭೆ ಇಲ್ಲದ ಕೇಂದ್ರ ಸರಕಾರವನ್ನು ಕಾಂಗ್ರೆಸು ಒಪ್ಪದು ೩) ಮುಸಲ್ಮಾನರು ವಿಶೇಷವಾಗಿರುವ ಪ್ರದೇಶ ಎಂದು ಅಸ್ಪಷ್ಟ ಶಬ್ದಗಳನ್ನು ಪಯೋಗಿಸಿದ್ದು ಆ ಪ್ರದೇಶದ ಹೆಸರಗಳನ್ನು ಸೂಚಿಸಿರುವದಿಲ್ಲ ೪) ಬಲುಚಿಸ್ತಾನ ಸಿಂಧ ಮತ್ತು ಗಡಿನಾಡು ಈ ಮೂರು ಪ್ರಾಂತಗಳಲ್ಲಿ ಮಾತ್ರ ಮುಸಲ್ಮಾನರ ಸಂಖ್ಯೆ ವಿಶೇಷವಿರುವದು. ಇದರಲ್ಲಿ ಗಡಿನಾಡು ಜಾತೀಯ ತತ್ವದನ್ವಯ ಸಂಘಟಿಸಲ್ಪಡುವ ಪ್ರದೇಶದಲ್ಲಿ ಸೇರುವದಿಲ್ಲ. ೫) ಪಂಜಾಬ ಮತ್ತು ಬಂಗಾಲ ಪ್ರಾಂತಗಳಲ್ಲಿ ಮುಸಲ್ಮಾನರ ಸಂಖ್ಯೆ ವಿಶೇಷವಾಗಿರುವದಿಲ್ಲ. ೬) ಸಂಸ್ಥಾನಗಳ ಸಮಸ್ಯೆಯನ್ನು ಸದ್ಯಕ್ಕೆ ಬಿಟ್ಟುಬಿಡಬೇಕೆನ್ನುವದು ಸಮಂಜಸವಲ್ಲ. ಈ ರೀತಿ ಸ್ಪಷ್ಟೀಕರಣ ಕೇಳಿರುವರಲ್ಲದೆ ತ್ರಿಪಕ್ಷ ಪರಿಷತ್ತಿನಲ್ಲಿ ಭಾಗವಹಿಸಿದ ಮಾತ್ರಕ್ಕೆ ಆಮಂತ್ರಣ ಪತ್ರಿಕೆಯಲ್ಲಿ ಕಾಣಿಸಲಾದ ಎಲ್ಲ ಸೂಚನೆಗಳಿಗೆ ಬದ್ಧವಾದಂತಾಗುವದಿಲ್ಲೆಂದೂ ಆಶ್ವಾಸನ ಪಡೆದಿರುವರು. ಮೌಲಾನಾ ಆಝಾದರು ಇದನ್ನು ಪತ್ರಿಕಾ ಸಂದರ್ಶನದಲ್ಲಿ ಸ್ಪಷ್ಟ ಪಡಿಸಿದ್ದಾರೆ. ಕಾಂಗ್ರೆಸು ಹೊಸ ಯೋಜನೆ ಮುಂಡಿಸಬಹುದು ಅಥವಾ ಆಮಂತ್ರಣ ಪತ್ರಿಕೆಯಲ್ಲಿಯ ಸೂಚನೆಗಳನ್ನು ನಿರಾಕರಿಸಬಹುದೆಂದೂ ಭಾರತ ಮಂತ್ರಿ ಲಾರ್ಡ ಪೆಥಿಕ್ ಲಾರೆನ್ಸರು ಸೂಚಿಸಿರುವರೆಂದು ಮೌಲಾನಾ ಆಝಾದರು ಸ್ಪಷ್ಟಪಡಿಸಿರುವರು.

ಪ್ರತಿಕ್ರಿಯೆ

ಸಿಮ್ಲಾ ಪರಿಷತ್ತಿನ ಸಂಬಂಧದಲ್ಲಿ, ಅಲ್ಲಿ ಚರ್ಚಿಸಲ್ಪಡತಕ್ಕ ವಿಷಯಗಳ ಸಂಬಂಧದಲ್ಲಿ ಮತ್ತು ಮಂತ್ರಿತ್ರಯರ ಕೊಡುಗೆಯ ಸಂಬಂಧದಲ್ಲಿ ದೇಶದಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳು ವ್ಯಕ್ತಮಾಡಲ್ಪಡುತ್ತವೆ. ಕಾಂಗ್ರೆಸ್ಸು ಈ ಚರ್ಚೆಯಲ್ಲಿ ಭಾಗವಹಿಸಲು ಸಿದ್ಧವಾದ ಮಾತ್ರಕ್ಕೆ ಮಂತ್ರಿತ್ರಯರ ಕೊಡುಗೆಯನ್ನು ಒಪ್ಪಿದಂತಾಗಲಿಲ್ಲೆಂದೂ ಅದಾದರಿಂದ ಕಾಂಗ್ರೆಸ್ಸು ಹಿಂದುಸ್ತಾನದ ವಿಭಜನೆಗೆ ಒಪ್ಪಿದಂತಾಯಿತೆಂದು ತಿಳಿಯಕೂಡದೆಂದೂ ಕಾಂಗ್ರೆಸ್ ಧುರೀಣರು ಹೇಳುತ್ತಿರುವರು. ಕಾಂಗ್ರೆಸ್ ಧೋರಣದಲ್ಲಿ ಯಾವದೆ ಬದಲಾವಣೆಯಾಗಿಲ್ಲ. ಅದು ಸ್ವಾಯತ್ತ ಘಟಕಗಳ ಮಹಾಮಂಡಳದ ಧ್ಯೇಯವನ್ನೇ ಸಿಮ್ಲಾ ಪರಿಷತ್ತಿನಲ್ಲಿ ಪ್ರತಿಪಾದಿಸುವದು. ಪ್ರಾಂತಗಳನ್ನು ಧಾರ್ಮಿಕ ಇಲ್ಲವೆ ಜಾತೀಯ ದೃಷ್ಟಿಯಿಂದ ಪುನರ್ರಚಿಸುವದನ್ನು ಕಾಂಗ್ರೆಸ್ಸು ಬಲವಾಗಿ ವಿರೋಧಿಸುತ್ತದೆ. ಮಹಾಮಂಡಳದಲ್ಲಿ ಮಹಾಮಂಡಳಗಳನ್ನು ಸ್ಥಾಪಿಸಬೇಕೆಂಬುದಕ್ಕೆ ಕಾಂಗ್ರೆಸ್ಸು ಒಪ್ಪುವದಿಲ್ಲ. ಹಿಂದೂ ವಿಭಾಗದಲ್ಲಿಯ ಘಟಕಗಳು ಆ ವಿಭಾಗದ ಮಹಾಮಂಡಳವನ್ನೇ ಸೇರಬೇಕು ಎಂಬ ನಿರ್ಬಂಧವಿರಬಾರದೆಂದು ಕಾಂಗ್ರೆಸ್ಸು ಆಗ್ರಹ ತೊಡುವದು ಎಂದು ಮುಂತಾಗಿ ಕಾಂಗ್ರೆಸ ಪ್ರಮುಖರೊಬ್ಬರು ಅಭಿಪ್ರಾಯಪಟ್ಟಿರುವರು.

ಹಿಂದೂ ಮಹಾಸಭೆಯವರು ಮಂತ್ರಿತ್ರಯರ ಈ ಸೂಚನೆಗಳನ್ನು ಬಲವಾಗಿ ವಿರೋಧಿಸಿದ್ದಾರೆ. ಈ ಸೂಚನೆಗಳು ಮುಸ್ಲಿಂಲೀಗಕ್ಕೆ ಪಕ್ಷಪಾತಿಯಾಗಿರುವದರಿಂದ ಹಿಂದುಗಳಿಗೆ ಒಪ್ಪಿಗೆಯಿಲ್ಲೆಂದು ಭಾಯಿ ಪರಮಾನಂದರು ಪ್ರಕಟನೆ ಮೂಲಕ ಸಾರಿದ್ದಾರೆ. ತ್ರಿಪಕ್ಷ ಪರಿಷತ್ತಿನ ಸುಮಾರು ೧೨ ಜನ ಸದಸ್ಯರಲ್ಲಿ ಇಬ್ಬರೇ ಹಿಂದುಗಳು ಇರುವರು. ಕಾಂಗ್ರೆಸ ಅಧ್ಯಕ್ಷರು ಲೀಗಿಗೆ ನೀಡುವ ವಿಶೇಷ ಸೌಕರ್ಯಗಳನ್ನು ಇವರು ಕೂಡ ಪ್ರತಿಭಟಿಸಲಾರರು. ಬ್ರಿಟಿಶರು ತಮ್ಮ ಹಿತಸಂಬಂಧಗಳನ್ನು ಕಾಯ್ದುಕೊಳ್ಳುವದಕ್ಕಾಗಿ ಪಾಕಿಸ್ತಾನಕ್ಕೆ ಬೆಂಬಲ ಕೊಟ್ಟಿದ್ದಾರೆಂದೂ ಅವರು ಹೇಳಿದ್ದಾರೆ. ಹಿಂದೂ ಮಹಾಸಭೆಯ ಮಹಾರಾಷ್ಟ್ರ ಶಾಖೆಯ ಕಾರ್ಯದರ್ಶಿಗಳೂ ಈ ಯೋಜನೆಯನ್ನು ವಿರೋಧಿಸುವ ಪ್ರಕಟನೆಯನ್ನು ಹೊರಡಿಸಿದ್ದಾರೆ. ಸಿಮ್ಲಾ ಪರಿಷತ್ತಿನ ಸಂಬಂಧದಲ್ಲಿ ಅನಧಿಕೃತವಾಗಿ ಹೊರಟ ಪ್ರಕಟನೆಯಿಂದ ಸಾರ್ವಜನಿಕರಿಗೆ ಒಳ್ಳೆ ಧಕ್ಕೆ ಕೂತಂತಾಗಿದೆ. ಈ ಸಂಬಂಧದಲ್ಲಿ ಅಧಿಕೃತ ಪ್ರಕಟನೆ ಹೊರಡುವದವಶ್ಯವಾಗಿದೆ. ಧಾರ್ಮಿಕ ಇಲ್ಲವೆ ಜಾತೀಯ ತಳಹದಿಯಿಂದ ಪ್ರಾಂತಗಳನ್ನು ವಿಭಾಗಿಸುವದರಿಂದ ಎಲ್ಲೆಲ್ಲಿಯೂ ಅಸಂತೋಷವುಂಟಾಗಿ ರಾಷ್ಟ್ರೀಯವಿರೋಧವುಂಟಾಗುವದೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ಕಾಂಗ್ರೆಸ ಪಕ್ಷದಪರವಾಗಿ ಕೇಂದ್ರಶಾಸನ ಸಭೆಗೆ ಆರಿಸಿಹೋಗಿರುವ ಡಾ. ದೇಶಮುಖರೂ ಹಿಂದುಸ್ತಾನದ ವಿಭಜನೆಯನ್ನು ಒಂದು ಭಾಷಣದಲ್ಲಿ ವಿರೋಧಿಸಿರುವರು. ಹಿಂದುಸ್ತಾನದ ವಿಭಜನೆ ಯಾವದೇ ಸ್ವರೂಪದಲ್ಲಿ ಆದರೂ ಅದನ್ನು ನಾನು ವಿರೋಧಿಸುತ್ತೇನೆಂದು ಅವರು ಹೇಳಿರುವರು. ಬಲಿಷ್ಠ ಕೇಂದ್ರವು ಹಿಂದು

—೧೩ನೇ ಪುಟ ನೋಡಿರಿ



ಬ್ರಿಟಿಶ್ ಮಂತ್ರಿತ್ರಯರು:—ಹಿಂದುಸ್ತಾನದ ಸಮಸ್ಯೆ ಬಿಡಿಸಲು ಬಂದ ಬ್ರಿಟಿಶ್ ರಾಯಭಾರಿಗಳಾದ ಲಾರ್ಡ ಪೆಥಿಕ್ ಲಾರೆನ್ಸ ಸರ್. ಎ. ವ್ಹಿ. ಅಲೆಕ್ಸಾಂಡರ, ಸರ್ ಸ್ಟಾಫರ್ಡ ಕ್ರಿಪ್ಸರು.

ಅಂತರ್ ರಾಷ್ಟ್ರೀಯ

ವಿದೇಶ ಮಂತ್ರಿಗಳ ಸಭೆ

ಯುರೋಪಿನಲ್ಲಿ ಇಟಲಿ ಮತ್ತು ಇತರ ಅಚ್ಚಿನ ರಾಷ್ಟ್ರಗಳ ಕೈಗೊಂಬೆಗಳಾಗಿದ್ದ ರಾಜ್ಯಗಳ ಕೂಡ ಮಾಡಿಕೊಳ್ಳಬೇಕಾದ ಶಾಂತಿ ಒಪ್ಪಂದದ ಕರಾರುಗಳನ್ನು ನಿರ್ಣಯಿಸಲು ಚತುರ್‌ರಾಷ್ಟ್ರಗಳ ವಿದೇಶ ಮಂತ್ರಿಗಳು ಪ್ಯಾರಿಸದಲ್ಲಿ ಸಭೆ ಜರಗಿಸಿದ್ದಾರೆ. ಈ ಶಾಂತಿ ಒಪ್ಪಂದ ಮಾಡಿಕೊಳ್ಳಲು ಮೇ ತಿಂಗಳಲ್ಲಿ ಶಾಂತಿ ಪರಿಷತ್ತು ಕೂಡಿಸಬೇಕೆಂದು ಹಿಂದೆಯೆ ನಿರ್ಣಯಿಸಲಾಗಿತ್ತು. ವಿದೇಶ ಮಂತ್ರಿಗಳು ಒಪ್ಪಂದದ ಕರಾರುಗಳ ವಿಷಯದಲ್ಲಿ ತಮ್ಮತಮ್ಮೊಳಗೆ ಒಡಂಬಡಿಕೆಗೆ ಬರಲು ಮಾತ್ರ ಬಹಳ ಸಮಯ ತೆಗೆದುಕೊಳ್ಳುತ್ತಿರುವಂತೆ ತೋರುತ್ತದೆ. ಈ ಒಂದು ವಾರದಿಂದ ಅವರು ಮುಖ್ಯವಾಗಿ ಇಟಲಿಯೊಡನೆ ಮಾಡಿಕೊಳ್ಳಬೇಕಾದ ಒಪ್ಪಂದದ ವಿಚಾರ ಮತ್ತು ಇಟಲಿಯ ವಸಾಹತುಗಳನ್ನು ಯಾವ ಬಗೆಯಾಗಿ ವ್ಯವಸ್ಥೆಗೊಳಿಸಬೇಕೆಂಬ ವಿಷಯ ಚರ್ಚಿಸಿದ್ದಾರೆ. ಇಟಲಿಯಿಂದ ೩೦ಕೋಟಿ ಡಾಲರ ಪರಿಹಾರ ಧನವೆಂದು ಕಸಿದುಕೊಳ್ಳಬೇಕೆಂದು ಸೋವಿಯೆಟ್ ಬೇಡಿಕೆ. ಆದರೆ ಅಮೇರಿಕನ್ ಸೂಚನೆಯನ್ನು ಮನ್ನಿಸಿ ಇಟಲಿಯಿಂದ ಹಣದ ರೂಪದಲ್ಲಿ ಪರಿಹಾರವನ್ನು ತೆಗೆದುಕೊಳ್ಳುವದು ಅಸಾಧ್ಯವಾದುದರಿಂದ ಯಾವ ಬಗೆಯಾಗಿ ಎಷ್ಟು ಪರಿಹಾರವನ್ನು ಪಡೆಯಬಹುದೆಂಬುದನ್ನು ವಿಚಾರಿಸಿ ವರದಿ ಮಾಡಲು ಒಂದು ತಜ್ಞ ಸಮಿತಿಯನ್ನು ನೇಮಿಸಲು ಸರ್ವಾನುಮತ ಒಪ್ಪಂದವಾಗಿದೆ. ಆದರೆ ಇಟಲಿಯ ವಸಾಹತುಗಳಲ್ಲಿ ಲೀಬಿಯಾ ಅದರಲ್ಲಿಯೂ ಟ್ರಿಪೋಲಿಟಾನಿಯಾ ಬಂದರದ ಮೇಲೆ ರಶಿಯನ್ನರ ಕಣ್ಣು ಇರುವದರಿಂದ ಅದು ಇನ್ನೂ ತಿಕ್ಕಾಟದ ವಿಷಯವೇ ಆಗಿದೆ. ಟ್ರಿಪೋಲಿಟಾನಿಯಾ ಬಂದರವನ್ನು ರಶಿಯನ್ ವಿಶ್ವಸ್ತಿಕೆಗೆ ಒಪ್ಪಿಸಿಬಿಡಬೇಕೆಂಬ ಮೂಲ ರಶಿಯನ್ ಬೇಡಿಕೆಯನ್ನು ಸ್ವಲ್ಪ ಸಡಲಿಸಿ ವಿದೇಶ ಮಂತ್ರಿ ಮಲಾಟೊವರು ಲಿಬಿಯಾವನ್ನು ಇಬ್ಭಾಗ ಮಾಡಿ ಟ್ರಿಪೋಲಿಟಾನಿಯಾ ಬಂದರದಲ್ಲಿ ರಶಿಯನ್ ಆಡಳಿತೆಗಾರನನ್ನೂ ಸಿರೆನಿಕಾ ಭಾಗದಲ್ಲಿ ಬ್ರಿಟಿಶ್ ಅಥವಾ ಅಮೇರಿಕನ್ ಆಡಳಿತೆಗಾರರನ್ನು ನೇಮಿಸಬೇಕೆಂದೂ ಇವೆರಡರ ಮೇಲೆ ಯುಕ್ತ ರಾಷ್ಟ್ರಗಳ ವಿಶ್ವಸ್ತಿಕೆ ಇರಬೇಕೆಂದೂ ಹೊಸ ಸೂಚನೆ ಮಾಡಿದ್ದಾರೆ. ಆದರೆ ಟ್ರಿಪೋಲಿಟಾನಿಯಾ ಬಂದರ ಬ್ರಿಟಿಶ ಸಾಮ್ರಾಜ್ಯದ 'ಜೀವನಾಡಿ'ಯ ಒಂದು ಕೇಂದ್ರವಾಗಿರುವದರಿಂದ ಅದರ ಮೇಲೆ ರಶಿಯನ್ ಪ್ರಭಾವವನ್ನು ಸಹಿಸಲು ಬ್ರಿಟಿಶರು ಸಿದ್ಧರಿಲ್ಲ. ನಾವು ಲೀಬಿಯಾವನ್ನು ಗೆದ್ದುಕೊಂಡಾಗ ಲೀಬಿಯನ್ನರಿಗೆ ಸ್ವಾತಂತ್ರ್ಯದ ಆಶ್ವಾಸನ ಕೊಟ್ಟಿದ್ದೆವು. ಆ ಆಶ್ವಾಸನವನ್ನು ಪಾಲಿಸಲು ನಾವು ಬದ್ಧರಾಗಿದ್ದೇವೆ, ಎಂದು ಬ್ರಿಟಿಶರು ವಾದಿಸುತ್ತಿದ್ದಾರೆ. ಯುಗೋಸ್ಲಾವಿಯಾ-ಇಟಲಿಗಳ ನಡುವೆ ವಿವಾದಕ್ಕೆ ಕಾರಣವಾದ ಟ್ರೀಸ್ಟ ಬಂದರವನ್ನು ಪೂರ್ಣ ಯುಗೊಸ್ಲಾವಿಯಾದ ಬುಟ್ಟಿಗೇ ಹಾಕಿಕೊಳ್ಳುವದು ಸಾಧ್ಯವಾಗದಿದ್ದರೂ ರಶಿಯನ್ ಪ್ರಭಾವದ ಕ್ಷೇತ್ರದಲ್ಲಿಯೇ ಉಳಿಸಿಕೊಳ್ಳಲು ರಶಿಯಾ—ಯುಗೊಸ್ಲಾವಿಯಾಗಳು ಹೆಣಗುತ್ತಿವೆ. ಎರಿಟ್ರಿಯಾದಿಂದ ಒಂದು ಭಾಗವನ್ನು ಅಬಿಸಿನಿಯಾಕ್ಕೆ ಕೊಡಬೇಕೆಂಬ ಬ್ರಿಟಿಶ ಸೂಚನೆಯನ್ನು ರಶಿಯನ್ನರು ವಿರೋಧಿಸಿಲ್ಲ. ಹೇಗೋ ಇದ್ದರೂ ಚತುರ್ರಾಷ್ಟ್ರಗಳೊಳಗಿನ ಭಿನ್ನಾಭಿಪ್ರಾಯಗಳು ಬಾಯಿಗೂಡಿಸಲು ಬರುವಂಥಸ್ಥಿತಿಗೆ ಬಂದಿವೆಯೆಂಬ ಆಶಾಂಕುರ ಮೊಳೆತಿದೆ.

ಜರ್ಮನಿ ಇನ್ನೊಮ್ಮೆ ಶಾಂತಿಭಂಗ ಮಾಡದಂತೆ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬ ವಿಷಯದಲ್ಲಿ ಅಮೇರಿಕೆ ಅತಿ ಗುಟ್ಟಾಗಿ ಸಿದ್ಧಗೊಳಿಸಿದ ಯೋಜನೆಯೊಂದನ್ನು ವಿದೇಶ ಮಂತ್ರಿ ಸಭೆಯ ಮುಂದೆ ಇರಿಸಲಾಯಿತು. ಜರ್ಮನಿಯನ್ನು ೨೫ ವರ್ಷಗಳ ವರೆಗೆ ನಿಶ್ಶಸ್ತ್ರಗೊಳಿಸಬೇಕು. ಅದಕ್ಕೆ ಸೈನ್ಯ, ವಿಮಾನ ಪಡೆ, ನೌಕಾಪಡೆಗಳನ್ನು ಇರಿಸಿಕೊಳ್ಳಲು ಅನುವು ಕೊಡಬಾರದು ಇತ್ಯಾದಿಯಾಗಿ ಆ ಯೋಜನೆ ಹೇಳುತ್ತದೆ. ಆದರೆ ಮುಂದಿನ ಮಾತು ಹೇಗೇ ಇರಲಿ, ಸದ್ಯಕ್ಕಾದರೂ ಜರ್ಮನಿಯನ್ನು ನಿಶ್ಶಸ್ತ್ರಗೊಳಿಸುವದು ಸಾಕಷ್ಟು ತೃಪ್ತಿಕರವಾಗಿದೆಯೇ ಎಂಬುದನ್ನು ಪರಿಶೀಲಿಸಲು ಒಂದು ಸಮಿತಿ ರಚಿಸಬೇಕೆಂದು ರಶಿಯಾ ಸೂಚಿಸಿದೆ.

ಸ್ಪೇನ್ ಮತ್ತು ಯುಕ್ತರಾಷ್ಟ್ರಗಳು

ಸ್ಪೇನು ಫ್ಯಾಸಿಝಂದ ಕೊನೆಯ ಪ್ರಾಬಲ್ಯ ಕ್ಷೇತ್ರವೆಂದು, ಶಾಂತಿಗೆ ಫ್ರಾಂಕೋನ ಆಡಳಿತದಿಂದ ಗಂಡಾಂತರವುಂಟೆಂದು, ಅದರ ಮೇಲೆ ಯುಕ್ತರಾಷ್ಟ್ರಗಳು ಕ್ರಮತೆಗೆದುಕೊಳ್ಳುವಂತೆ ಮಾಡಲು ರಶಿಯಾ ಮಾಡಿದ ಪ್ರಯತ್ನಗಳು ಪೂರ್ಣ ಫಲದಾಯಕವಾಗಲಿಲ್ಲ. ಆದರೂ ಸ್ಪೇನದ ಫ್ರಾಂಕೋ ಆಡಳಿತದಿಂದ ಶಾಂತಿಭಂಗವಾಗುವದಿಲ್ಲೆಂದು ಕೆಲದಿನ ಹಿಂದೆ ಗೊತ್ತುವಳಿ ಮಾಡಿದ ಅಂತರ್ ರಾಷ್ಟ್ರೀಯ ಭದ್ರತಾಮಂಡಲ ಆ ಮೇಲೆ ಜನಾಭಿಪ್ರಾಯದ ಒತ್ತಡಕ್ಕೆ ತಲೆವಾಗಿ ಸ್ಪೇನದ ವಿರುದ್ಧ ಮಂಡಿಸಲ್ಪಟ್ಟಿರುವ ದೂರು—ಪುರಾವೆಗಳನ್ನು ಪರಿಶೀಲಿಸಿ ವರದಿ ಮಾಡಲು ಒಂದು ಸಮಿತಿಯನ್ನು ನೇಮಿಸುವ ಗೊತ್ತುವಳಿಯನ್ನು ಮಾಡಿತು. ರಶಿಯಾ ಕೊನೆಯ ವರೆಗೆ ಈ ವಿಲಂಬ ಧೋರಣವನ್ನು ಪ್ರತಿಭಟಿಸಿತು. ಇದು ಸ್ಪ್ಯಾನಿಶ್ ಯಾದವಿ ಯುದ್ಧ, ಅಬಿಸೀನಿಯಾದ ಮೇಲಣ ದಾಳಿ ಮೊದಲಾದ ಪ್ರಸಂಗಗಳಲ್ಲಿ ರಾಷ್ಟ್ರಸಂಘ ವಹಿಸಿದ ವಿಲಂಬಕ ಧೋರಣೆಯ ತತ್ಪ್ರತಿಯಾಗಿದೆಯೆಂದು ಅದು ಟೀಕಿಸಿತು. ಈ ನಡುವೆ ಫ್ರಾಂಕೋಗೂ ಸಾಕಷ್ಟು ಬಿಸಿಹತ್ತಿದೆ. ಹಿಂದಿನ ವಾರ ಅವನು ಸ್ಪೇನದಲ್ಲಿರುವ ದೊಡ್ಡ ಆಸ್ತಿಗಳನ್ನು ರೈತರಿಗೆ ಹಂಚಿಕೊಡುವ ಆಜ್ಞೆಯೊಂದನ್ನು ಹೊರಡಿಸಿದನು. ಆ ಮೂಲಕ ಹಳ್ಳಿಗಾಡಿನಲ್ಲಿ ತನ್ನ ಆಡಳಿತೆಗೆ ಜನಸಾಮಾನ್ಯದ ಬೆಂಬಲ ದೊರಕಿಸಬೇಕೆಂದು ಅವನು ಅಪೇಕ್ಷಿಸಿರಬಹುದು. ಈಗ ಸ್ಪೇನದಲ್ಲಿ ರಾಜಸತ್ತೆಯ ಸ್ಥಾಪನೆಯನ್ನು ಕುರಿತು ಜನಾಭಿಪ್ರಾಯವನ್ನು ಸಂಗ್ರಹಿಸಲು ಅನುಕೂಲವಾಗುವಂತೆ ದೇಶದ ಎಲ್ಲ ಪ್ರಾಯಪ್ರಬುದ್ಧ ಸ್ತ್ರೀಪುರುಷರ ಮತದಾರ ಯಾದಿಯೊಂದನ್ನು ಸಿದ್ಧಗೊಳಿಸುವ ಆಜ್ಞೆ ಹೊರಟಿದೆ. ತಮ್ಮ ಸರಕಾರದ ಸ್ವರೂಪವನ್ನು ನಿರ್ಧರಿಸಿಕೊಳ್ಳುವ ಯೋಗ್ಯತೆ ಈಗ ಸ್ಪೇನದ ಜನತೆಗೆ ಬಂದಿದೆಯೆಂದು ಫ್ರಾಂಕೋ ನಟಿಸುತ್ತಿದ್ದಾನೆ.

ಸಾಮ್ರಾಜ್ಯ ಮುಖ್ಯಮಂತ್ರಿ ಸಭೆ

ಕಳೆದ ವಾರ ಲಂಡನ್ನಿನಲ್ಲಿ ಬ್ರಿಟಿಶ ಸಾಮ್ರಾಜ್ಯದ ಮುಖ್ಯ ಮಂತ್ರಿಗಳ ಸಭೆಯೊಂದು ಜರಗಿತು. ದ. ಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಝಿಲಂಡ, ಕೆನಡಾ, ಮೊದಲಾದ ಸಾಮ್ರಾಜ್ಯ ದೇಶಗಳ ಮುಖ್ಯ ಮಂತ್ರಿಗಳು ಅದರಲ್ಲಿ ಭಾಗವಹಿಸಿದರೂ ಹಿಂದುಸ್ತಾನಕ್ಕೆ ಪ್ರಾತಿನಿಧ್ಯವಿದ್ದಿಲ್ಲ. ಹಿಂದೀ ಬಿಕ್ಕಟ್ಟು ಇನ್ನೂ ಬಿಡದಿರುವದೇ ಇದಕ್ಕೆ ಕಾರಣವಂತೆ. ಬೆಳೆಯುತ್ತಿರುವ ರಶಿಯನ್ ಪ್ರಭಾವದ ನಡುವೆ ಸಾಮ್ರಾಜ್ಯದ ಭಾಗಗಳಲ್ಲಿ ಹೆಚ್ಚು ಐಕ್ಯವನ್ನು ಸಾಧಿಸುವದು ಮತ್ತು ಸಾಮ್ರಾಜ್ಯದ ಸಂರಕ್ಷಣೆಯ ವಿಷಯದಲ್ಲಿ ಯೋಜನೆಗಳನ್ನು ಪರ್ಯಾಲೋಚಿಸುವದು ಸಭೆಯ ಉದ್ದೇಶವಾಗಿತ್ತು. ಎಲ್ಲ ದೇಶಗಳ ಸೇನಾಧಿಪತ್ಯಗಳ ಪ್ರತಿನಿಧಿಗಳೂ ಅದರಲ್ಲಿ ಭಾಗವಹಿಸಿದ್ದರು.

ಪಾಲಿಸ್ತಾನದ ಪಾಠ

ಪಾಲಿಸ್ತಾನದ ಸಮಸ್ಯೆಯನ್ನು ಅಭ್ಯಸಿಸಿ ವರದಿ ಮಾಡಲು ನೇಮಿಸಲ್ಪಟ್ಟ ಅಂಗ್ಲೋ-ಅಮೇರಿಕನ್ ವಿಚಾರಣಾ ಸಮಿತಿಯ ವರದಿಯ ವಿಷಯವನ್ನು ಕಳೆದ ವಾರ ಪ್ರಸ್ತಾಪಿಸಲಾಗಿದೆ. ಈಗ ಆ ವರದಿ ಸಂಪೂರ್ಣವಾಗಿ ಪ್ರಸಿದ್ಧವಾಗಿದ್ದು ಅಂತರ್ರಾಷ್ಟ್ರೀಯ ಮಧ್ಯಸ್ಥಿಕೆಯಲ್ಲಿ ವಿಶ್ವಾಸವಿಟ್ಟವರಿಗೆಲ್ಲ ಕಣ್ಣು ತೆರೆಯಿಸುವಂಥದಿದೆ. ಯುರೋಪಿನಲ್ಲಿ ಯಹೂದ್ಯರು ಅನುಭವಿಸಿದ ಯಾತನೆಗಳು ಅವರ ಪ್ರತಿಪಾದನೆಗಳು, ಅರಬರ ತರ್ಕಧಾರೆ ಇವೆಲ್ಲವನ್ನೂ ಪೂರ್ಣವಾಗಿ ವಿವೇಚಿಸಿದಂತೆ ನಟಿಸಿ ಈ ಸಮಿತಿ ಕೊನೆಗೆ ಮಾಡಿದ ಸೂಚನೆಗಳು ಬಹಳ ಸ್ವಾರಸ್ಯವಾಗಿದೆ. ಪಾಲಿಸ್ತಾನವೆಂಬುದು ಕ್ರಿಶ್ಚನ್, ಯಹೂದ್ಯ, ಅರಬರೆಲ್ಲರಿಗೂ ಪವಿತ್ರ ಭೂಮಿಯಾಗಿದೆ. ಅದುದರಿಂದ ಅದನ್ನು ಯಾವುದೊಂದು ವಿಶಿಷ್ಟ ಪಂಗಡದ ಮಾತೃಭೂಮಿಯೆಂದು ಭಾವಿಸಲು ಸಾಧ್ಯವಿಲ್ಲವೆಂದು ಹೇಳಿ ಅದು ಸಾವಿರಾರು ವರ್ಷಗಳಿಂದ ಪಾಲಿಸ್ತಾನದಲ್ಲಿ ನೆಲೆನಿಂತ ಅರಬರ ಹಕ್ಕನ್ನು—ಕ್ರಿಶ್ಚನ್ ಮುಸ್ಲಿಮರೆಂಬ ಭೇದವಿಲ್ಲದೆ ಎಲ್ಲ ಅರಬರು ಪ್ರತಿಪಾದಿಸುತ್ತಿರುವ ಹಕ್ಕನ್ನು—ತೊಡೆದುಹಾಕಿದೆ. ಪಾಲಿಸ್ತಾನ ಯಹೂದಿ ರಾಷ್ಟ್ರವೂ ಆಗತಕ್ಕದ್ದಲ್ಲ, ಅರಬರದೂ ಆಗತಕ್ಕದ್ದಲ್ಲ. ಪರಸ್ಪರ ಪ್ರಭುತ್ವವನ್ನು ಹೊರಿಸಲು ಅವಕಾಶ ಕೊಡಕೂಡದು. ಎಲ್ಲ ಧರ್ಮಗಳವರ ಹಿತಸಂಬಂಧಗಳನ್ನು ಕಾಯುವಂಥ ಸರಕಾರವೇ ಅಲ್ಲಿ ಸ್ಥಾಪಿಸಲ್ಪಡಬೇಕು. ಯುರೋಪಿನಲ್ಲಿರುವ ನಿರಾಶ್ರಿತ ಯಹೂದ್ಯರ ಪರಿಸ್ಥಿತಿಯನ್ನನುಲಕ್ಷಿಸಿ ಒಂದು ಲಕ್ಷ ಯಹೂದ್ಯರಿಗೆ ಈ ವರ್ಷ ಪಾಲಿಸ್ತಾನಕ್ಕೆ ಹೋಗಿ ನೆಲೆಸಲು ಪರವಾನಗಿ ಕೊಡಬೇಕು. ಯುರೋಪಿನ ಯಾವುದೇ ದೇಶ ಯಹೂದ್ಯರನ್ನು ಸ್ವಾಗತಿಸಲು ಸಿದ್ಧವಿಲ್ಲದಿದ್ದರೂ ಎಲ್ಲ ಯಹೂದ್ಯರಿಗೆ ಪಾಲಿಸ್ತಾನದಲ್ಲಿ ಆಶ್ರಯ ಕೊಡುವದು ಸಾಧ್ಯವಿಲ್ಲದ್ದರಿಂದ ಅವರ ಹೊಣೆಯನ್ನು ಇಡಿ ಜಗತ್ತೇ ಸೇರಿ ಹೊರಬೇಕು, ಇದೊಂದೇ ಆ ವರದಿಯಲ್ಲಿ ಅರಬರಿಗೆ ಅನುಕೂಲವೆನ್ನಬಹುದಾದ ಮಾತು. ಆದರೆ ಎಲ್ಲದಕ್ಕೂ ಶಿರೋಮಣಿರೂಪವಾಗಿ ಮೆರೆಯಬಲ್ಲ ಸೂಚನೆಯೊಂದು ವರದಿಯಲ್ಲಿದೆ: ಅದೆಂದರೆ ಅರಬ ಯಹೂದ್ಯರಲ್ಲಿ ಪರಸ್ಪರ ದ್ವೇಷವಿರುವದರಿಂದ ಅವರಿಗೆ ಈಗ ಸ್ವಾತಂತ್ರ್ಯ ಕೊಟ್ಟರೆ ಅಂತಃಕಲಹವೇಳುವದು. ಆದ್ದರಿಂದ ಸ್ವಾತಂತ್ರ್ಯ ಕೊಡಲು ಅನುಕೂಲವಾದ ಸೌಹಾರ್ದ ವಾತಾವರಣವುಂಟಾಗುವ ತನಕ ಅದಕ್ಕೆ ಸ್ವಾತಂತ್ರ್ಯ ಕೊಡಕೂಡದು. ಯುಕ್ತ ರಾಷ್ಟ್ರಗಳ ವಿಶ್ವಸ್ತಿಕೆಯಲ್ಲಿ ಅದರ ಆಡಳಿತೆ ನಡೆಯಬೇಕು. ಎಂಬ ಸೂಚನೆ ಒಟ್ಟಿನ ಮೇಲೆ ಯುರೋಪಿನಲ್ಲಿ ಹಿಟ್ಲರನೂ ಅವನ ಅನುಯಾಯಿಗಳೂ ಯಹೂದ್ಯರನ್ನು ಯಮಯಾತನೆಗೀಡುಮಾಡಿದ್ದರ ಫಲವಾಗಿ ಪಾಕಿಸ್ತಾನದಲ್ಲಿ ಯಹೂದ್ಯರು ಸೇರಿಕೊಂಡದ್ದಕ್ಕೆ ಅರಬರು ಯಾವ ಬಗೆಯಲ್ಲಿಯೂ ಹೊಣೆಗಾರರಲ್ಲದ್ದಿದ್ದರೂ ಅಂಗ್ಲೋ-ಅಮೇರಿಕನ್ನರು ನಿರ್ಮಿಸಿದ ಈ ಅರಬ—ಯಹೂದ್ಯ ಸಮಸ್ಯೆಯ ಫಲವಾಗಿ ಅರಬರು ಸ್ವಾತಂತ್ರ್ಯಕ್ಕೆ ಎರವಾಗಬೇಕು !

ಮ್ಯಕಾರ್ಥರರ ಕೊಲೆಯ ಪ್ರಯತ್ನ

ಮೆಲ್ಲಮೆಲ್ಲನೆ "ಹೊಣೆಗಾರಿಕೆಯ ಅರಿವನ್ನು" ಸಂಪಾದಿಸುತ್ತಿದೆಯೆಂದು ಯಾರಿಂದ ಜಪಾನು ಶಭಾಸಗಿರಿಯನ್ನು ಕೆಲವೇ ದಿನಗಳ ಹಿಂದೆ ಸಂಪಾದಿಸಿತೋ ಅದೇ ಜಪಾನದಲ್ಲಿ, ಮಿತ್ರರ ಮುಖ್ಯ ಸೇನಾಪತಿಯಾಗಿರುವ ಜನರಲ್ ಮ್ಯಕಾರ್ಥರರ ಕೊಲೆ ಮಾಡಲು ರಚಿಸಿದ ಒಳಸಂಚೊಂದು ಇಪ್ಪತ್ತನಾಲ್ಕು ತಾಸು ಮುಂಚಿತವಾಗಿ ದೈವಯೋಗದಿಂದ ಬೆಳಕಿಗೆ ಬಂದು ಮ್ಯಕಾರ್ಥರರ ಜೀವ ಉಳಿಯಿತು. ಕೋರಿಯಾದ ಗೂಢಚಾರ ಕಾಲೇಜಿನಲ್ಲಿ ತರಬೇತಿ ಹೊಂದಿದ ಟಾಕಯಾಮನೆಂಬವನು ಈ ಒಳಸಂಚನ್ನು ರಚಿಸಿದನು. ಮೇ ಒಂದಕ್ಕೆ ಕಮ್ಯುನಿಸ್ಟರ ನೇತೃತ್ವದಲ್ಲಿ ಕೂಲಿಕಾರ ಪ್ರದರ್ಶನ ಜರಗುವದಿತ್ತು. ಆ ಗಡಿಬಿಡಿಯ ಅವಕಾಶ ತೆಗೆದುಕೊಂಡು ಚಕ್ರವರ್ತಿಯ ಅರಮನೆಯ ಮುಂದೆಯೆ ಮ್ಯಕಾರ್ಥರರಿಗೆ ಗುಂಡಿಕ್ಕಲು ಅವನು ಹವಣಿಸಿದ್ದನು. ಸಾಕಷ್ಟು ಹಣ ಅವನ ಕೈಯಲ್ಲಿದ್ದುದರಿಂದ ಅವನಿಗೆ ಅನೇಕ ಸಹಕಾರಿಗಳೂ ದೊರೆತಿದ್ದರು. ಅಂಥ ಸಹಕಾರಿಗಳಲ್ಲೊಬ್ಬನಲ್ಲಿ ಟಾಕಯಾಮಾನಿಗೆ ಸಂಶಯವುತ್ಪನ್ನವಾದುದರಿಂದ ಅವನಿಗೆ ಕಾಫಿಯಲ್ಲಿ ವಿಷ ಬೆರಸಿಕೊಟ್ಟನು. ಆದರೆ ವಿಷ ಪ್ರಾಣಾಪಾಯವಾಗುವಷ್ಟಿಲ್ಲದುದರಿಂದ ಅವನು ಅಮೇರಿಕನ್ ಆಸ್ಪತ್ರೆಯೊಂದಕ್ಕೆ ಸಾಗಿಸಲ್ಪಟ್ಟನು. ಅಲ್ಲಿ ಅವನು ಒಳಸಂಚನ್ನು ಬಯಲಿಗೆಳೆದನು.

ಟಾಕಯಾಮನನ್ನೂ ಅವನ ಸಂಗಡಿಗರನ್ನೂ ಬಂಧಿಸುವ ಪ್ರಚಂಡ ಪ್ರಯತ್ನಗಳು ಪ್ರಾರಂಭವಾಗಿವೆ. ಆದರೆ ಟಾಕಯಾಮಾನು ಇನ್ನೂ ಕೈಗೆ ಸಿಕ್ಕಿಲ್ಲ. ಗುಟ್ಟು ಒಡೆದವನೂ ಬಂಧನದಲ್ಲಿರುವನು.

ಬಳ್ಳಾರಿ

ರಾಷ್ಟ್ರೀಯ ಮುಸಲ್ಮಾನರಾದ ಹಾಫೀಜುದ್ದೀನರು ಬಳ್ಳಾರಿಯಲ್ಲಿ ಕೆ ಎನ್ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಅಖಂಡ ಹಿಂದುಸ್ಥಾನ ಹಾಗು ಹಿಂದು ಮುಸಲ್ಮಾನ ಐಕ್ಯ ಕುರಿತು ಭಾಷಣವಿತ್ತರು.

ದಿವಂಗತ ಟಿ ರಾಘವಾಚಾರ್ಯರ ಮನೆಯಲ್ಲಿ ವೀರಶೈವ ಕಾಲೇಜಿನ ಪ್ರಿನ್ಸಿಪಾಲರಾದ ಥಾಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ದಿವಂಗತರ ಬಗ್ಗೆ ವಟ್ಟಂ, ಆರ್ ವಿ ಶಾಸ್ತ್ರಿ, ಸಂಜೀವಮೂರ್ತಿ ಮೊದಲಾದವರ ಭಾಷಣ, ಹರಿಜನರ ಭಜನೆ ನಡೆದು, ಹರಿಜನ ವಿದ್ಯಾರ್ಥಿಗಳಿಗೆ ವಸ್ತ್ರದಾನ ಮಾಡಲಾಯಿತು.

ತೊಲಗಿ ಗ್ರಾಮದ ಲೆಫ್ಟನಂಟ ಟಿ ಹನುಮಂತಪ್ಪ ಬಿ ಎ ಬಿ ಎಲ್ ಅವರು ಮದ್ರಾಸ ಶಾಸನ ಸಭೆಯ ಸಹಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ಕನ್ನಡಿಗರಿದ್ದು ಸೇನೆಯಲ್ಲಿ ಸೇರುವ ಪೂರ್ವದಲ್ಲಿ ಬಳ್ಳಾರಿಯಲ್ಲಿ ವಕೀಲರಾಗಿದ್ದರು.

೧೯೪೨ ರಲ್ಲಿ ಪೋಲೀಸರು ಮಾಡಿದ ಅತ್ಯಾಚಾರಗಳನ್ನು ವಿಚಾರಿಸಿ ಅವರಿಗೆ ಯೋಗ್ಯ ಶಾಸನ ಸೂಚಿಸಲು ಒಂದು ವಿಚಾರಣಾ ಮಂಡಳ ನಿಯಮಿಸಬೇಕಾಗಿ ಬಿಹಾರ ಶಾಸನ ಸಭೆಗೆ ಫುಲನ್ ವರ್ಮಾ ಎಂಬ ಕಾಂಗ್ರೆಸ ಸೋಶಾಲಿಸ್ಟರು ಠರಾವು ಕಳಿಸಿದ್ದಾರೆ.

ಕರ್ಮವೀರ
ಹರಿಜನ ಪುರವಣಿ

ಸ್ವಾತಂತ್ರ್ಯ

ಸ್ವಾತಂತ್ರ್ಯದ ವ್ಯಾಖ್ಯೆಯೇನು ಎಂಬುದಾಗಿ ಗೆಳೆಯರು ನನ್ನನ್ನು ಆಹ್ವಾನಿಸಿ ಪುನಃ ಪುನಃ ಕೇಳಿರುವರು. ಪುನರುಕ್ತಿಯ ದೋಷ ಬಂದರೂ ಚಿಂತೆಯಿಲ್ಲ, ನನ್ನ ಕನಸಿನಲ್ಲಿಯ ಸ್ವರಾಜ್ಯವೆಂದರೆ ರಾಮ ರಾಜ್ಯ ಅರ್ಥಾತ್ ಪೃಥ್ವಿಯಲ್ಲಿ ಪರಮಾತ್ಮನ ರಾಜ್ಯವೆಂದು ನಾನು ಹೇಳಲಿಕ್ಕೆ ಬೇಕು. ಸ್ವರ್ಗದಲ್ಲಿ ಅದು ಎಂತಿರುವುದೆಂಬುದನ್ನು ನಾನರಿಯೆ. ದೂರದ ದೃಶ್ಯವನ್ನರಿತುಕೊಳ್ಳಲು ನಾನು ಬಯಸುವುದಿಲ್ಲ. ವರ್ತಮಾನವು ಸಾಕಷ್ಟು ಆಕರ್ಷಕವಾಗಿದ್ದರೆ ಭವಿಷ್ಯವು ಅದಕ್ಕಿಂತ ತೀರ ಭಿನ್ನವಿರಲಾರದು.

ಸ್ಪಷ್ಟ ಶಬ್ದಗಳಲ್ಲಿ ಹೇಳುವುದಾದರೆ ಸ್ವರಾಜ್ಯವು ರಾಜಕೀಯ ಆರ್ಥಿಕ ಮತ್ತು ನೈತಿಕ ಸ್ವರಾಜ್ಯವಾಗಿರತಕ್ಕದ್ದು. ರಾಜಕೀಯ ಸ್ವರಾಜ್ಯದಲ್ಲಿ ಬ್ರಿಟಿಶ್ ಸೇನೆಯ ನಿಯಂತ್ರಣವು ಯಾವದೇ ಸ್ವರೂಪದಲ್ಲಿ ಮತ್ತು ರೀತಿಯಲ್ಲಿ ಇರದಿರುವುದತ್ಯವಶ್ಯವಾಗಿದೆ.

ಆರ್ಥಿಕ ಸ್ವರಾಜ್ಯದಲ್ಲಿ ಬ್ರಿಟಿಶ್ ಬಂಡವಲುಗಾರರ ಮತ್ತು ಬಂಡವಲಿನ ಸ್ವಲ್ಪವೂ ಕೈವಾಡವಿರಲರಿಯದು. ಅದರಂತೆಯೆ ಹಿಂದೀ ಬಂಡವಲಗಾರರು ಮತ್ತು ಬಂಡವಲಿನಿಂದಲೂ ಸಂಪೂರ್ಣ ಅಲಿಪ್ತರಾಗಿರತಕ್ಕದ್ದು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅತಿ ದೀನ ದರಿದ್ರನು ಕೂಡ ಅತಿ ಶ್ರೇಷ್ಠ ಮನುಷ್ಯನಿಗೆ ಸಮಾನನಾಗಿರುವನೆಂದು ಭಾವಿಸಲಿಕ್ಕೆಬೇಕು. ಬಂಡವಲುಗಾರರು ತಮ್ಮ ಬಂಡವಲು ಮತ್ತು ಕೌಶಲ್ಯವನ್ನೆಲ್ಲ ಅತಿನೀಚ ದರಿದ್ರರಲ್ಲಿ ಕೂಡ ಹರಿದು ಹಂಚಲು ಸಿದ್ಧರಾದರೆ ಮಾತ್ರ ಇದು ಸಾಧ್ಯವಾಗಬಲ್ಲುದು.

ನೈತಿಕ ಸ್ವರಾಜ್ಯವೆಂದರೆ ಸಶಸ್ತ್ರ ಸಂರಕ್ಷಕ ದಲಗಳಿಂದ ಮುಕ್ತರಾಗಿರುವುದು. ನನ್ನ ಕನಸಿನ ರಾಮರಾಜ್ಯದಲ್ಲಿ ಬ್ರಿಟಿಶ್ ಸೈನಿಕರ ಸ್ಥಳದಲ್ಲಿ ಹಿಂದೀ ರಾಷ್ಟ್ರೀಯ ಸೈನಿಕರಿಗೂ ಅವಕಾಶವಿರುವುದಿಲ್ಲ. ಯಾವ ರಾಷ್ಟ್ರವು ಸಶಸ್ತ್ರ ಸೈನಿಕರಿಂದ-ಅದು ಸ್ವತಂತ್ರ ರಾಷ್ಟ್ರೀಯ ಸೈನ್ಯವೆ ಇರಲಿ-ಆಡಳಿತ ಸಾಗಿಸುವದೊ ಅದು ನೈತಿಕ ಸ್ವಾತಂತ್ರ್ಯಕ್ಕೆ ಅನರ್ಹವಾಗಿದೆ. ಆದುದರಿಂದಲೆ ಆ ರಾಷ್ಟ್ರದ ತೀರ ಅಶಕ್ತ ಮನುಷ್ಯನು ಅತ್ಯುಚ್ಚ ನೈತಿಕ ಮಟ್ಟನ್ನು ಎಂದಿಗೂ ಮುಟ್ಟಲಾರನು.

ಬ್ರಿಟಿಶರಿಗಾಗಿ ಚರ್ಚಿಲ್ಲರು ಯುದ್ಧವನ್ನು ಗೆದ್ದರೆಂದು ಜಂಭ ಕೊಚ್ಚಿಕೊಳ್ಳಲಾಗುತ್ತಿದ್ದರೂ ಅವರು ಅಬರ್ಡೀನದಲ್ಲಿಯ ತಮ್ಮ ಭಾಷಣದಲ್ಲಿ ಅತ್ಯಂತ ಅಹಿಂಸಾವಾದಿಯ ದೃಷ್ಟಿಯಿಂದ ಕೇವಲ ಜಾಣತನದ ಮಾತುಗಳನ್ನಾಡಿದರು. ನಮ್ಮ ಕಲೆಮಾರಿನಲ್ಲಿ ನಡೆದ ಎರಡು ಯುದ್ಧಗಳಲ್ಲಿ ಎಷ್ಟೊಂದು ಅನಾಹುತ ಸಂಭವಿಸಿದೆಂಬುದು ಸ ಸನ್ನದ್ಧ ಯಾವ ಯೋಧನಿಗಾದರೂ ಗೊತ್ತಿದ್ದ ಅವರು ಚರ್ಚಿಲ್‌ರೆಂದು ಹೇಳಬಹುದು. ಇದೇ ಸಂಚಿಕೆಯಲ್ಲಿ ಬೇರೆಡೆ ಪತ್ರಿಕೆಗಳಲ್ಲಿ ಬಂದ ಅವರ ಭಾಷಣದ ಸಾರವನ್ನು ಪ್ರಸಿದ್ಧಿಸಿದ್ದೇನೆ. ಆ ಭಾಷಣದಲ್ಲಿರುವ ನಿರಾಶೆಯ ನಿಟ್ಟುಸಿರಿನ ಬಗ್ಗೆ ಸಾರ್ವಜನಿಕರನ್ನು ಎಚ್ಚರಿಸಲಿಕ್ಕೆಬೇಕಾಗಿದೆ. ಯುದ್ಧದ ಅನಾಹುತಗಳಿಂದ ಮಾನವನು ಬುದ್ಧಿ ಕಲಿತು ಅದರಿಂದ ಪರಾವೃತ್ತರಾದರೆ ಇಷ್ಟೊಂದು ಅನರ್ಥವೊದಗುತ್ತಿರಲಿಲ್ಲ. ಧ್ಯೇಯವು ಎಷ್ಟೇ ಉದಾತ್ತ ಇಲ್ಲವೆ ನೀಚವಾಗಿದ್ದರೂ ನಾವು ಎಂದನೆಯುವರ ರಕ್ತವನ್ನು ಸೂರೆ ಮಾಡದೆ ನಮ್ಮ ರಕ್ತವನ್ನೆ ನಾವು ಸುರಿಸಲಿಕ್ಕೆ ಬೇಕೆಂಬ ಪಾಠವನ್ನ ಕಲಿತಿದ್ದಾದರೆ ಮಾನವರ ರಕ್ತ ಇಷ್ಟೊಂದು ಸೂರೆಯಾದುದು ನಿರರ್ಥಕವಾಗಲಾರದು.

ಮಂತ್ರಿತ್ರಯರ ಶಿಷ್ಟಮಂಡಳದಿಂದ ಏನಾದರೂ 'ಕಲ್ಯಾಣವಾದುದಾದರೆ' ಹಿಂದುಸ್ತಾನವು ಸೈನಿಕ ರಾಷ್ಟ್ರವಾಗಿ ಇನ್ನು ಹಲವು ವರ್ಷಗಳವರೆಗಾದರೂ ಕನಿಷ್ಠ ದರ್ಜೆಯ ರಾಷ್ಟ್ರವಾಗುಳಿದು ಮೇಲೆ ವಿವರಿಸಿದ ಸದ್ಯದ ನಿರಾಶೆಗೆ ಯಾವದೆ ಸಂದೇಶ ಕೊಡಲು ಸಮರ್ಥವಾಗದಂತೆ ಉಳಿಯಬಯಸುವದೊ ಇಲ್ಲವೆ ತನ್ನ ಅಹಿಂಸಾಸ್ತ್ರವನ್ನು ಮತ್ತಷ್ಟು ಹದಗೊಳಿಸಿ ವಿಜಯೀ ರಾಷ್ಟ್ರವೆಂದು ಮೆರೆಯುತ್ತಿರುವ ಬ್ರಿಟನ್‌ದ ಭಾರದಿಂದ ಮುಕ್ತವಾಗಿ ಜಗತ್ತಿನ ಉದ್ಧಾರಕ್ಕಾಗಿಯೆಂದೆ ಅತ್ಯಂತ ಕಷ್ಟದಿಂದ ಸಂಪಾದಿಸಿದ ಸ್ವಾತಂತ್ರ್ಯದಿಂದ ಮೊದಲನೆ ದರ್ಜೆಯ ರಾಷ್ಟ್ರವಾಗಲು ಬಯಸುತ್ತದೆಯೊ ಎಂಬದನ್ನು ನಿರ್ಧರಿಸಬೇಕಾಗುವದು.

ಹೊಸದಿಲ್ಲಿ　　　　　　　　ಮೋ. ಕ. ಗಾಂಧಿ
೨೯—೪—೪೬

ಮಹಿಳೆಯರಿಗಾಗಿ

ನಾವು ಯಾವ ಬಗೆಯಲ್ಲಿ ಸಮಾಜ ಸೇವೆ ಮಾಡಬಹುದೆಂದು ಹಲಬಾರಿ ನಗರವಾಸಿ ಸ್ತ್ರೀಯರು ಕೇಳುವದುಂಟು. ಯಾರ ಸೇವೆ ಮಾಡುವದು ಆ ಮಹಿಳೆಯರ ಕರ್ತವ್ಯವೋ ಅಂಥವರೊಡನೆ ಸಂಪರ್ಕವೇ ಇಲ್ಲದಿರುವುದು ಈ ಸೋದರಿಯರ ದುರ್ದೈವಗಳಲ್ಲೊಂದು. ಆ ಸಂಪರ್ಕವಿದ್ದಿದ್ದರೆ ಈ ಪ್ರಶ್ನೆಯೇ ಏಳುತ್ತಿರಲಿಲ್ಲ.

ದಿಲ್ಲಿಯ ದೈವುಳ್ಳ ಭಗಿನಿಯರಲ್ಲಿ ಎಷ್ಟು ಜನರು ಇಲ್ಲಿಯ ಹರಿಜನಕೇರಿಗೆ ಎಂದಾದರೂ ಭೆಟ್ಟಿ ಕೊಟ್ಟಿರುವರೊ ನಾನರಿಯೆ. ಗಾಂಧೀಜಿ ಈಗ ಯಾವ ಕೇರಿಯ ಹೊರವಲಯದಲ್ಲಿ ಉಳಿದುಕೊಂಡಿರುವರೋ ಆ ಕೇರಿಯಲ್ಲಿರುವ ಸಮಾಜತಿರಸ್ಕೃತ ಬಂಧುಗಳ ಸೇವೆ ಎಷ್ಟು ಮಾಡಿದರೂ ಕಡಿಮೆ. ಅವರ ವಾಸಗೃಹಗಳು ಇತರ ನಗರಗಳಲ್ಲಿನವುಗಳಿಗಿಂತ ಅಥವಾ ದಿಲ್ಲಿಯವೇ ಕೆಲ ವಸತಿಗಳಿಗಿಂತ ಎಷ್ಟೋ ಮೇಲೆಂಬುದು ನಿಜವಾದರೂ ಅವು ಇನ್ನೂ ಬಹಳ ಕೆಟ್ಟವೇ ಇವೆ. ಯಾರ ಸೇವೆ ಇಲ್ಲದಿದ್ದರೆ ನಾವು ಬದುಕುವದೇ ಕಠಿನವಾಗುವದೋ ಅಂಥವರಿಗಾಗಿ ಒಳ್ಳೆಯ ವಸತಿಗಳನ್ನು ಒದಗಿಸಬೇಕೆಂಬ ಚಳವಳಿಯಲ್ಲಿ ಮಹಿಳೆಯರು ಎಲ್ಲರಿಗಿಂತ ಮುಂದಿರಬೇಕಾದ್ದು ಅವಶ್ಯ. ಅವರಿಗೆ ಸಾಕಷ್ಟು ಸಂಬಳವಿಲ್ಲ ಅವರ ಹಾಸಿಗೆಯು ಹರಿವೆ, ಅವರ ಸ್ವಂತದ ಉಡಿಗೆ ತೊಡಿಗೆ ಮತ್ತು ಅವರ ಮಕ್ಕಳ ಮೀಯದೆ ಕೊಳೆನಾರುವ ಮೈ ಇವುಗಳನ್ನು ನೋಡಿದರೆ ದಯೆ ಬರುತ್ತದೆ. ಸೋದರಿಯರ ತಂಡವೊಂದು ದಿನವೂ ಅವರ ವಸತಿಗಳಿಗೆ ಸಂದರ್ಶನವಿತ್ತು ಅವರ ಮಕ್ಕಳನ್ನು ಮೀಯಿಸಿ, ಕುವರಿಯರ ಜಡೆಗಟ್ಟಿದ ಕೂದಲುಗಳನ್ನು ಬಾಚಿ, ಅವರಿಗೆ ಬರುವ ಚಿಕ್ಕಪುಟ್ಟ ರೋಗಗಳಿಗೆ ಸುಲಭ ಔಷಧಿಗಳನ್ನು ಕೊಟ್ಟು, ಅವರ ಅರಿವೆ ಅಂಚಡಿಗಳನ್ನು ಒಗೆಸಿ, ಅವರ ಕೂಸುಗಳಿಗೆ ಹಾಲು ಒದಗಿಸಿ, ಅವರ ಹೆಂಗಸರಿಗೆ ತಾವು ಹೇಗೆ ಉಣಬೇಕು, ಕುಟುಂಬದವರನ್ನು ಹೇಗೆ ಉಣಿಸಬೇಕು, ಸದ್ಯಕ್ಕೆ ಕತ್ತಲಿಕ್ಕಿದ, ಅಸ್ವಚ್ಛವಾಗಿರುವ ತಮ್ಮ ಮನೆಗಳನ್ನಾದರೂ ಹೇಗೆ ಇದ್ದದ್ದರಲ್ಲಿಯೇ ಸ್ವಚ್ಛವಾಗಿಡಬೇಕು. ಇತ್ಯಾದಿ ವಿಷಯಗಳನ್ನು ಅವರಿಗೆ ಕಲಿಸಬೇಕೆಂದು ನಿರೀಕ್ಷಿಸುವದು ಅತಿಶಯವಾದೀತೆ ? ವಿವಿಧ ಪ್ರಾಂತಿಕ ಸರಕಾರಗಳಲ್ಲಿರುವ ಜನತೆಯ ಆರಿಸಿದ ಪ್ರತಿನಿಧಿಗಳು, ಹರಿಜನರಿಗೆ, ಏಕೆ ಎಲ್ಲ ಕೂಲಿಕಾರರಿಗೆ ಓರಣವಾದ ವಸತಿಗಳನ್ನೊದಗಿಸಿ ಅವರ ಕೂಲಿಯನ್ನು ಹೆಚ್ಚಿಸುವದು ತಮ್ಮ ಸರಕಾರಗಳ ಉತ್ಪನ್ನದ ಮೇಲಿರುವ ಮೊಟ್ಟಮೊದಲಿನ ಭಾರವೆಂದು ಪರಿಗಣಿಸಬೇಕೆಂದು ಗಾಢವಾಗಿ ನಂಬಲಾಗಿದೆ.

ದಿಲ್ಲಿಯನ್ನು ನಿರ್ಮಿಸಿದವರು ಶ್ರೀಮಂತರ ಸೌಧಗಳಿಂದ ಹೊರಗೆ ಗಾಳಿ ಬೆಳಕುಗಳ ಅವಶ್ಯಕತೆಗೆ ಏನೂ ಗಮನ ಕೊಟ್ಟಂತಿಲ್ಲ. ಅವರ ತಪ್ಪುಗಳನ್ನು ನಮ್ಮವೇ ಆದ ಸರಕಾರಗಳು ಲಗುಬಗೆಯಿಂದ ಸರಿಪಡಿಸಬೇಕಾಗಿದೆ.

ಹೊಸದಿಲ್ಲಿ　　　　　　　　ಅ. ಕೌ.
೨೬—೪—೪೬

ಟೀಕೆ — ಟಿಪ್ಪಣಿಗಳು

ನೂಲುವುದರಿಂದ ಸ್ವರಾಜ್ಯ

ಅಖಿಲಭಾರತ ಚರಕಾಸಂಘದ ಸದಸ್ಯರೊಬ್ಬರು ಹೀಗೆ ಬರೆಯುತ್ತಾರೆ —

“ಮ[illegible]ನ್ನು ತಿಳಿದುಕೊಂಡು ನೂಲಲು ಕಲಿಸಬೇಕಾದರೆ ಮತ್ತು ಖಾದಿಯನ್ನು ಬಿಟ್ಟು ಬೇರೆ ಯಾವುದನ್ನೂ ಧರಿಸಬೇಡಿರೆಂದು ಬೋಧಿಸಬೇಕಾದರೆ ಖಾದಿಯ ವ್ಯಾಪಾರಕ್ಕೆ ಹಾನಿ ತಗಲುವದು ಸ್ವಾಭಾವಿಕ. ನಿಮ್ಮ ಹೊಸ ಯೋಜನೆಗೆ ವ್ಯಕ್ತಿಶಃ ಸಂಪೂರ್ಣ ಒಪ್ಪಿಗೆಯಿದೆ ನೂಲುವವರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕೆಂದು ನೀವು ಹೇಳಿರುವಿರಿ ಮತ್ತು ಅವರ ಚಟುವಟಿಕೆಗಳ ಮೂಲಕ ಸ್ವರಾಜ್ಯ ಸಂಪಾದಿಸುವದು ಅ. ಭಾ. ಚ. ಸಂಘದ ಉದ್ದೇಶವಾಗಿದೆಂದೂ ಪ್ರತಿಪಾದಿಸಿರುವಿರಿ. ಅರಳೆಯನ್ನು ಸ್ವಚ್ಛ ಮಾಡಿ ಹಂಜಿ ಮಾಡುವವರೆಗಿನ ಎಲ್ಲ ವಿಧಾನಗಳನ್ನು ನೂಲುವವರು ಅರಿತಿರಬೇಕೆಂದೂ ನಿಮ್ಮ ಬಯಕೆ. 'ಸ್ವರಾಜ್ಯದ ಸೋಪಾನ'ವಿದೆಂದು ನೀವು ಹೇಳುತಿರುವಿರಿ. ಎಲ್ಲ ವಿಧಾನಗಳು ನೂಲುವವರಿಗೆ ಚೆನ್ನಾಗಿ ಗೊತ್ತಿರಬೇಕೆಂಬುದು ನ್ಯಾಯವೆಂಬುದನ್ನು ನಾನು ಒಪ್ಪುತ್ತೇನೆ. ಈ ಜ್ಞಾನದಿಂದ ಕೂಲಿ ದೊರಕಿಸುವ ಅವರ ದರ್ಜೆಯು ಹೆಚ್ಚುವದಲ್ಲದೆ ಅವರು ಸ್ವಾವಲಂಬಿಗಳಾಗುವರು ನೂಲು ಮತ್ತು ಬಟ್ಟೆಗಳಲ್ಲಿ ಹೆಚ್ಚು ಸುಧಾರಣೆಯಾಗುವದು. ಆದರೆ ಈ ಮಾರ್ಗದಿಂದ ನೀವು ಸ್ವರಾಜ್ಯವನ್ನು ಸಂಪಾದಿಸುವದೆಂತು ? ನೂಲುವವರಲ್ಲಿ ಈ ಪಾಠವನ್ನು ಅರಗಿಸುವದೆಂತು ! ಇದರ ಅರ್ಥವನ್ನು ಕಾರ್ಯಕರ್ತರು ಚೆನ್ನಾಗಿ ತಿಳಿದುಕೊಳ್ಳುವದಲ್ಲದೆ ನೂಲುವವರಿಗೆ ಅದನ್ನು ತಿಳಿಸಿಕೊಡಲು ಬರುವಂತೆ ಈ ವಿಷಯವನ್ನು ಸ್ಪಷ್ಟವಾಗಿ ದಯವಿಟ್ಟು ಬರೆಯಿರಿ.”

ಎಲ್ಲ ನೂಲುವವರು ಚರಕದ ನಿಜಾರ್ಥವನ್ನರಿತುಕೊಂಡು ಒತ್ತಾಯದಿಂದಲ್ಲ ಆದರೆ ಸ್ವಯಂಪ್ರೇರಣೆಯಿಂದ ನೂಲುತ್ತಿರುವರೆಂದು ಕಲ್ಪಿಸಿರಿ; ಆಗ ಹಿಂದುಸ್ತಾನದ ಮಟ್ಟ ಎಷ್ಟು ಉಚ್ಚತಮವಾಗಬಲ್ಲದು ? ಕೋಟ್ಯವಧಿ ನೂಲುವ ಹೆಣ್ಣುಮಕ್ಕಳಲ್ಲಿ ಜಾಗ್ರತಿಯುಂಟಾದರೆ ಲಕ್ಷಾವಧಿ ಖಾದಿ ನೇಕಾರರ ಉತ್ಪಾದನೆ ತಾನಾಗಿಯೆ ಆಗುವದು. ಈ ಜಾಗ್ರತಿಯನ್ನುಂಟುಮಾಡಬೇಕಾದರೆ ಎಷ್ಟು ಸ್ತ್ರೀ ಪುರುಷ ಕಾರ್ಯಕರ್ತರ ಆವಶ್ಯಕತೆಯಿದೆಂಬುದನ್ನೂ ಕಲ್ಪಿಸಿರಿ. ಇಂಥ ವೇಳೆ ಬಂದುದಾದರೆ ಜವಳಿ ಗಿರಣಿಗಳು ಯಾವುವಾದರೂ ಬಟ್ಟೆಯನ್ನು ಸಿದ್ಧಪಡಿಸುತ್ತಿದ್ದರೆ ಆ ತಮ್ಮ ಬಟ್ಟೆಗಳಿಗಾಗಿ ಪರದೇಶದ ಪೇಟೆಗಳನ್ನು ಹುಡುಕಬೇಕಾಗುತ್ತದೆ. ಈಗಿನಂತೆ ಅವು ಹಳ್ಳಿಗರ ಮೇಲೆ ಸಾಮ್ರಾಜ್ಯತ್ವದ ಪ್ರಭುತ್ವವನ್ನು ನಡೆಸಲಾರವು. ಹಿಂದುಸ್ತಾನ ಐಕ್ಯವಾಗುವದು. ಎಲ್ಲರೂ ಸತ್ಯವಾದಿಗಳಾಗುವರು. ಕೈನೂಲಿನ ಖಾದಿಯ ಹೊರತು ಬೇರೆ ಬಟ್ಟೆಯೆ ಪೇಟೆಯಲ್ಲಿ ಸಿಕ್ಕದಂತಾಗುವದರಿಂದ ಖಾದಿಯನ್ನು ಧರಿಸಿರೆಂಬದಾಗಿ ಯಾರಿಗೂ ಹೇಳುವ ಅವಶ್ಯಕತೆಯುಳಿಯುವುದಿಲ್ಲ. ಈ ಬಗೆಯ ಕ್ರಾಂತಿಕಾರಕ ಬದಲಾವಣೆಯಲ್ಲಿ ಸ್ವರಾಜ್ಯ ಅಡಕವಾಗಿದೆಂಬುದು ಕಣ್ಣಿದ್ದವರಿಗೆ ಸ್ಪಷ್ಟವಾಗಿ ಕಂಗೊಳಿಸದಿರಲಾರದು. ಇದೆಲ್ಲ ಆಗುವದು ಅಶಕ್ಯವೆಂಬ ಪ್ರಶ್ನೆ ಉದ್ಭೂತವಾಗಬಹುದು. ಈ ಪ್ರಶ್ನೆ ಹೀಗಿದ್ದರೆ ಅಹಿಂಸಾ ಮಾರ್ಗದಿಂದ ಸ್ವರಾಜ್ಯ ಅಶಕ್ಯವೆಂದು ಇದರ ಅರ್ಥವಾಗುವದು.

ನೂಲುವವರಿಗೆ ಅವಶ್ಯಕ ಶಿಕ್ಷಣವೆಂತು ಕೊಡಬಹುದೆಂಬುದು ಮತ್ತೊಂದು ಪ್ರಶ್ನೆ. ಇದಕ್ಕೆ ಯೋಗ್ಯ ಉತ್ತರವನ್ನು ಹುಡುಕುವದು ಅ. ಭಾ. ಚ. ಸಂಘದ ಕೆಲಸ. ಈ ಬಗ್ಗೆ ಸಾಕಷ್ಟು ಸಂಶೋಧನೆ ಈ ವರೆಗೆ ಆಗಿರುವದಿಲ್ಲ. ಈ ತೊಡಕನ್ನು ಬಿಡಿಸಲು ಪ್ರಯತ್ನಿಸುವದು ಅ. ಭಾ. ಚ. ಸಂಘದ ಪ್ರತಿಯೊಬ್ಬ ಕಾರ್ಯಕರ್ತನ ಕರ್ತವ್ಯವಾಗಿದೆ. ಇದೀಗ ಅನೇಕ ಪ್ರಾಂತಗಳಲ್ಲಿ ಕಾಂಗ್ರೆಸ ಮಂತ್ರಿಮಂಡಲಗಳಿರುವದರಿಂದ ಈ ಕೆಲಸ ಸುಲಭಸಾಧ್ಯವಾಗಿದೆ. ಕಾರ್ಯಕರ್ತರು ಈ ಕೆಲಸದಲ್ಲಿ ಅಂತಃಕರಣಪೂರ್ವಕವಾಗಿ ತೊಡಗಲಿ. ಯಾವಾಗಲೂ ಕೇಂದ್ರಕಚೇರಿಯಿಂದ ಸಹಾಯ ಮತ್ತು ಮಾರ್ಗದರ್ಶನವನ್ನಪೇಕ್ಷಿಸಿದರೆ ಅವರೆಂದಿಗೂ ಯಶಸ್ವಿಯಾಗಲಾರರು.

ಹೊಸದಿಲ್ಲಿ　　　　　　　　ಮೋ. ಕ. ಗಾಂಧಿ
೨೬—೪....೪೬

[ಹರಿಜನ ಸೇವಕರಿಂದ]

ಮಂಗಗಳ ಕಾಟ

ಮಂಗಗಳ ಕಾಟಕ್ಕಾಗಿ ಜನ ಜರ್ಜರಿತರಾಗುವುದುಂಟು. ಆ ಮಂಗಗಳನ್ನು ಅವರು ಸ್ವತಃ ಕೊಲ್ಲುವರು ಇಲ್ಲವೆ ಎರಡನೆಯವರು ಕೊಂದರೆ ಸಂತುಷ್ಟರಾಗುವರು. ಆದರೂ ಅದೇ ಕಾಲಕ್ಕೆ ಅವುಗಳ ಕೊಲೆಯನ್ನ ಅವರು ವಿರೋಧಿಸುತ್ತಿರುವರು. ಶಾಸ್ತ್ರಗಳನ್ನು ಬಲ್ಲ ಗೆಳೆಯನೊಬ್ಬ ಮಂಗಗಳು ಬೆಳೆಗಳನ್ನು ಹಾಳುಮಾಡುತ್ತವೆ. ಪದಾರ್ಥಗಳನ್ನೂ ಒಯ್ಯುತ್ತವೆ. ಹಣ್ಣುಹಂಪಲಗಳನ್ನು ತಿಂದು ನಾಶಮಾಡುತ್ತವೆ. ಇಷ್ಟೇ ಅಲ್ಲದೆ ಮಕ್ಕಳನ್ನು ಕೂಡ ಎತ್ತಿಕೊಂಡು ಹೋಗುತ್ತವೆ. ಎಂದು ಬರೆಯುತ್ತಾರೆ. ಅವುಗಳ ಸಂಖ್ಯೆ ದಿನದಿನಕ್ಕೆ ಹೆಚ್ಚುತಲಿದೆ. ಅವುಗಳ ಬಗ್ಗೆ ಅಹಿಂಸೆಯೇನು ಪ್ರತಿಪಾದಿಸುತ್ತಿದೆಂದು ಅವರು ನನ್ನನ್ನು ಪ್ರಶ್ನಿಸಿರುವರು.

ನನ್ನ ಅಹಿಂಸೆ ನನ್ನದೇ ಆಗಿರುವದು. ಜನರು ಮಾಡುತ್ತಿರುವ ಜೀವ ದಯೆಯ ಅರ್ಥವನ್ನು ನಾನು ಸಂಪೂರ್ಣವಾಗಿ ಒಪ್ಪಲಾರೆ. ಮನುಷ್ಯನನ್ನು ತಿನ್ನುವಂಥ ಇಲ್ಲವೆ ಅವನನ್ನು ಹಾನಿಗೊಳಿಸುವಂಥ ಪ್ರಾಣಿಯನ್ನು ಉಳಿಸಬೇಕೆಂಬ ದಯೆ ನನ್ನಲ್ಲಿಲ್ಲ. ಅವುಗಳ ಬೆಳವಣಿಗೆಯಲ್ಲಿ ನಾವು ಪಾಲುಗಾರರಾಗುವದು ಪಾಪವೆಂದು ನಾನು ತಿಳಿಯುತ್ತೇನೆ. ಆದುದರಿಂದ ನಾನು ಇರುವೆಗಳಿಗೆ ಮಂಗಗಳಿಗೆ ಇಲ್ಲವೆ ನಾಯಿಗಳಿಗೆ ತಿನ್ನಲಿಕ್ಕೆ ಹಾಕುವದಿಲ್ಲ. ಆ ಪ್ರಾಣಿಗಳನ್ನುಳಿಸಲು ಯಾವ ಮನುಷ್ಯನ ಆಹುತಿಯನ್ನೂ ನಾನು ಕೊಡಲಾರೆ.

ಈ ಬಗೆಯಾಗಿ ವಿಚಾರ ಮಾಡುತ್ತ ನಾನು ಒಂದು ನಿರ್ದಿಷ್ಟ ಮಟ್ಟಕ್ಕೆ ಬಂದಿರುವೆನು. ಮಾನವನಿಗೆ ಉಪದ್ರವ ಕೊಡುವಂಥ ಮಂಗಗಳನ್ನು ಕೊಲ್ಲುವುದರಿಂದ ಆಗುವ ಅಹಿಂಸೆ ಕ್ಷಮ್ಯವೆಂದು ನನ್ನ ಅಭಿಪ್ರಾಯ. ಇಂಥ ಹಿಂಸೆ ಧರ್ಮವಾಗಿ ಪರಿಣಮಿಸುವದು.

ಮನುಷ್ಯನಿಗಾದರೂ ಇದೇ ನಿಯಮವನ್ನು ಏಕೆ ಹಚ್ಚಬಾರದೆಂಬ ಪ್ರಶ್ನೆ ಇದರಿಂದ ಉದ್ಭೂತವಾಗುವದು. ಆದರೆ ಈ ಪ್ರಶ್ನೆ ಮನುಷ್ಯನಿಗೆ ಹತ್ತಲಾರದು ಏಕೆಂದರೆ ಮನುಷ್ಯರು ಎಷ್ಟೇ ಕೆಟ್ಟವರಿದ್ದರೂ ಅವರೂ ನಮ್ಮಂತೆ ಮನುಷ್ಯರೆ. ಮನುಷ್ಯೇತರ ಪ್ರಾಣಿಗಳಿಗೆ ಕೊಡದಿದ್ದಂಥ ಬುದ್ಧಿಯನ್ನು ಈಶ್ವರನು ಮನುಷ್ಯನಿಗೆ ಕೊಟ್ಟಿರುವನು.'

ಹೊಸದಿಲ್ಲಿ　　　　　　　　ಮೋ. ಕ. ಗಾಂಧಿ
೨೫-೪-೪೬

ಅಹಿಂಸಾತ್ಮಕ ಸ್ವಯಂಸೇವಕ ದಳ

ನನ್ನ ಪ್ರೋತ್ಸಾಹನೆಯ ಮೇರೆಗೆ ಕೆಲ ದಿನಗಳ ಹಿಂದೆ ಶಾಂತಿದಳ ಸಂಘಟನೆಯ ಪ್ರಯತ್ನ ಮಾಡಲಾಯಿತು. ಆದರೆ ಅದರಿಂದ ಯಾವ ಫಲ ನಿಷ್ಪತ್ತಿಯೂ ಆಗಲಿಲ್ಲ. ಆದರೆ ಇಂಥ ಸಂಸ್ಥೆಗಳ ಸದಸ್ಯರ-ಸಂಖ್ಯೆ ಸ್ವಾಭಾವಿಕವಾಗಿ ದೊಡ್ಡದಾಗಿರಲಾರದೆಂಬ ಪಾಠವನ್ನು ಮಾತ್ರ ಕಲಿತಿದ್ದಾಯಿತು. ಬಲದ ತಳಹದಿಯ ಮೇಲೆಯೇ ಸಂಘಟಿತವಾದ ದೊಡ್ಡ ಸ್ವಯಂಸೇವಕ ದಳ ಯಶಸ್ವಿಯಾಗಿ ಕಾರ್ಯ ಮಾಡಬೇಕಾದರೆ ಶಿಸ್ತುಭಂಗವಾದಲ್ಲಿ ಬಲದ ಉಪಯೋಗವನ್ನು ಮಾಡಬೇಕೆಂಬುದು ಅದರ ಅರ್ಥವಿರುವದು ಸ್ವಾಭಾವಿಕ. ಇಂಥ ಸಂಸ್ಥೆಗಳಲ್ಲಿ ಮಾನವನ ಶೀಲಕ್ಕೆ ಹೆಚ್ಚು ಅದೇಕೆ ಸ್ವಲ್ಪಾ ಮಹತ್ವವನ್ನು ಕೊಡುವುದಿಲ್ಲ. ಶಾರೀರಿಕ ಸೌಷ್ಟವವೆ ಮುಖ್ಯವಾದುದು. ಅಹಿಂಸಾತ್ಮಕ ಸಂಸ್ಥೆಗಳಲ್ಲಿ ಇದರ ವಿರುದ್ಧವಿರತಕ್ಕದ್ದು. ಶೀಲ ಇಲ್ಲವೆ ಆತ್ಮಶಕ್ತಿಯೇ ಸರ್ವಸ್ವ. ಶಾರೀರಿಕ ಬಲಕ್ಕೆ ಗೌಣಸ್ಥಾನ. ಇಂಥ ಅನೇಕ ಜನರನ್ನು ಕಾಣುವದು ಕಠಿಣ. ಆದುದರಿಂದ ಅಹಿಂಸಾತ್ಮಕ ದಳಗಳು ಕಾರ್ಯಕ್ಷಮವಾಗಬೇಕಾದರೆ ಸಣ್ಣವಿದ್ದಷ್ಟು ಒಳಿತು. ಇಂಥ ದಳಗಳನ್ನು ಎಲ್ಲೆಡೆ ಸಂಘಟಿಸಬಹುದು. ಪ್ರತಿಹಳ್ಳಿಗೆ ಇಲ್ಲವೆ ಓಣಿಗೆ ಒಂದು ಇಂಥ ದಳವಿರತಕ್ಕದ್ದು. ಆ ದಳದ ಸದಸ್ಯರ ಪರಸ್ಪರ ಪರಿಚಯ ಚನ್ನಾಗಿ ಇರಬೇಕು. ಪ್ರತಿಯೊಂದು ದಳ ತನ್ನ ಧುರೀಣನನ್ನು ಆರಿಸಿಕೊಳ್ಳತಕ್ಕದ್ದು. ಎಲ್ಲ ಸದಸ್ಯರ ಸ್ಥಾನಮಾನಗಳು ಸಮಾನವಾಗಿರತಕ್ಕದ್ದು. ಆದರೆ ಪ್ರತಿಯೊಬ್ಬರು ಅದೇ ಕೆಲಸ ಮಾಡುವಾಗ ಒಬ್ಬನ ಅಂಕಿತಕ್ಕೊಳಗಾಗಿಯೆ ಕೆಲಸ ನಡೆಯಬೇಕು. ಇಲ್ಲದಿದ್ದರೆ ಕೆಲಸಕ್ಕೆ ಹಾನಿಯುಂಟಾಗುವದು. ಎರಡು ಅಥವಾ ಮೂರು ದಳಗಳಿದ್ದರೆ ಆಯಾ ಧುರೀಣರು ತಮ್ಮ ತಮ್ಮಲ್ಲಿ ವಿಚಾರವಿನಿಮಯ ಮಾಡಿ ಯಾವ ಬಗೆಯ ಕಾರ್ಯಕ್ರಮವನ್ನನುಸರಿಸಬೇಕೆಂಬದನ್ನು ನಿರ್ಧರಿಸಬೇಕು. ಈ ರೀತಿಯಿಂದಲೇ ಅವುಗಳ ಕಾರ್ಯ ಯಶಸ್ವಿಯಾಗಬಲ್ಲುದು.

ಮೇಲೆ ವಿವರಿಸಿದ ರೀತಿಯಲ್ಲಿ ಅಹಿಂಸಾ ದಳಗಳು ಸಂಘಟಿಸಲ್ಪಟ್ಟರೆ ಗಂಡಾಂತರವನ್ನು ಅವು ಸುಲಭವಾಗಿ ತಡೆಯಬಲ್ಲವು. ಗರಡೀಮನೆಗಳಲ್ಲಿ ಕೊಡುತ್ತಿರುವ ಎಲ್ಲ ಬಗೆಯ ಶಾರೀರಿಕ ಶಿಕ್ಷಣವು ಅವರಿಗೆ ಅವಶ್ಯವಾಗಲಿಕ್ಕಿಲ್ಲ. ಆದರೆ ಅದರಲ್ಲಿ ಕೆಲವು ಅವಶ್ಯವಾಗಬಹುದು.

ಇಂಥ ಸಂಘಗಳಲ್ಲಿ ಪರಮಾತ್ಮನಲ್ಲಿ ನಿಶ್ಚಲ ಭಕ್ತಿಯಿರುವುದು ಮಾತ್ರ ಅತ್ಯವಶ್ಯ. ಎಲ್ಲ ದಳಗಳಿಗೂ ಇದು ಸಾಮಾನ್ಯವಾಗಿದೆ. ಅವನೊಬ್ಬನೆ ಸಂಗಡಿಗ ಮತ್ತು ಕಾರ್ಯಕರ್ತ. ಅವರಲ್ಲಿ ಭಕ್ತಿಯಿಲ್ಲದಿದ್ದರೆ ಈ ಶಾಂತಿ ದಳಗಳು ನಿರ್ಜೀವವಾಗುವವು. ಅವಶ್ಯವೆನಿಸಿದರೆ ಅವನು ಆತ್ಮಾಹುತಿಯನ್ನು ಕೊಡಲು ಸಿದ್ಧನಾಗುವನು ಮತ್ತು ಮೃತ್ಯುದೇವತೆಯನ್ನು ಸೋಲಿಸಿ ಬಾಳಬಲ್ಲನು.

ಈ ನಿಯಮ ನಿಬಂಧನೆಗಳ ಸಾಕ್ಷಾತ್ಕಾರ ಯಾರ ಜೀವನದಲ್ಲಿ ಆಗಿರುವದೊ ಆ ಮನುಷ್ಯನು ಎಂಥ ಗಂಡಾಂತರ ಪ್ರಸಂಗದಲ್ಲಿಯೂ ಗೊಂದಲದಲ್ಲಿ ಬೀಳಲಾರನು., ಅವನು ಕೂಡಲೆ ಯೋಗ್ಯ ಮಾರ್ಗವನ್ನನುಸರಿಸಲು ಪ್ರವೃತ್ತನಾಗುವನು.

ಮೇಲೆ ಹೇಳಿದ್ದಲ್ಲದೆ ನನ್ನ ಸ್ವಂತ ಅನುಭವದ ಕೆಲ ನಿಯಮಗಳನ್ನು ಕೊಡಬಯಸುತ್ತೇನೆ.

೧) ಸ್ವಯಂಸೇವಕನು ಯಾವದೆ ಅಸ್ತ್ರವನ್ನು ಧರಿಸಕೂಡದು.

೨) ದಳಗಳ ಸದಸ್ಯರನ್ನು ಸಹಜವಾಗಿ ಗುರುತಿಸುವಂತಿರಬೇಕು.

೩) ಪ್ರತಿಯೊಬ್ಬ ಸ್ವಯಂಸೇವಕ ತನ್ನ ಸಂಗಡ ಬ್ಯಾಂಡೇಜ, ಕತ್ತರಿ, ಸೂಜಿ ಮತ್ತು ದಾರ, ಶಸ್ತ್ರಕ್ರಿಯೆ ಬೇಕಾದ ಚೂರಿ ಮೊದಲಾದವುಗಳನ್ನು ಪ್ರಥಮ ಚಿಕಿತ್ಸೆಗಾಗಿ ಇಟ್ಟುಕೊಳ್ಳತಕ್ಕದ್ದು.

೪) ಗಾಯಾಳುಗಳನ್ನು ಎಂತು ಎತ್ತಬೇಕು ಮತ್ತು ಎರಡನೆ ಕಡೆಗೆ ಒಯ್ಯಬೇಕೆಂಬುದು ಅವನಿಗೆ ಗೊತ್ತಿರಬೇಕು.

೫) ಬೆಂಕಿಯನ್ನು ಎಂತು ನಂದಿಸಬೇಕು. ಸ್ವತಃ ಸುಟ್ಟುಕೊಳ್ಳದೆ ಬೆಂಕಿ ಹತ್ತಿದ ಪ್ರದೇಶದಲ್ಲಿ ಹೇಗೆ ನುಗ್ಗಬೇಕು. ಪರಿಹಾರ ಕಾರ್ಯಕ್ಕಾಗಿ ಹೇಗೆ ಮೇಲೆ ಹತ್ತಬೇಕು ಮತ್ತು ಇಳಿಯಬೇಕು ಮುಂತಾದ್ದೆಲ್ಲ ಅವನಿಗೆ ಗೊತ್ತಿರಬೇಕು.

೬) ತಾನಿರುವ ಗ್ರಾಮದಲ್ಲಿಯ ಎಲ್ಲಜನರ ನಿಕಟ ಪರಿಚಯ ಅವನಿಗಿರತಕ್ಕದ್ದು. ಇದೇ ಒಂದು ಬಗೆಯ ನೀತಿ.

೭) ತನ್ನ ಮನಸ್ಸಿನಲ್ಲಿ ಅವನು ನಿರಂತರ ರಾಮನಾಮ ಜಪಿಸಬೇಕು. ಹಾಗೆ ಮಾಡಬೇಕೆಂದು ನಂಬಿಗೆ ಇದ್ದವರ ಮನಸ್ಸನ್ನು ಒಲಿಸಬೇಕು.

ನಾವು ಕೇಳಿಕೊಳ್ಳದಿದ್ದರೂ ಪರಮಾತ್ಮನು ನಮಗೆ ಸಹಾಯ ಸಲ್ಲಿಸುವನೆಂದು ಅನೇಕರು ತಿಳಿದುಕೊಳ್ಳುವುದುಂಟು. ಅದೊಂದು ಬಗೆಯ ಅವರ ಮಾನಸಿಕ ಉದಾಸೀನತೆ ಇಲ್ಲವೆ ಕೆಟ್ಟ ಚಟ ಕೇಳದೆ ಸಹಾಯ ಸಲ್ಲಿಸುವನೆಂದ ಬಳಿಕ ಅವನ ನಾಮವನ್ನು ಭಜಿಸುವದೇಕೆ ? ಪರಮಾತ್ಮನು ಇದ್ದುದಾದರೆ ನಾವು ನಂಬಲಿ ನಂಬದಿರಲಿ ಅವನು ಅಸ್ತಿತ್ವ ಇದ್ದೇ ಇದೆ. ಆದರೆ ಅವನ ಸಾಕ್ಷಾತ್ಕಾರ ಮಾತ್ರ ಬರಿ ನಂಬಿಕೆಗಿಂತ ಎಷ್ಟೋ ಪಾಲು ಕಠಿಣವಾದುದು. ನಿರಂತರ ಭಜನೆಯಿಂದಲೆ ಅದು ಬರಬಲ್ಲದು. ಎಲ್ಲ ಶಾಸ್ತ್ರಗಳಿಗೂ ಇದೇ ನಿಯಮ. ಎಲ್ಲ ಶಾಸ್ತ್ರಗಳಲ್ಲಿ ಶ್ರೇಷ್ಠವಾದ ಶಾಸ್ತ್ರದಲ್ಲಿ ಇದು ಮತ್ತಷ್ಟು ಸರಿ ಹೋಗುವದೆಂದು ಹೇಳುವದನವಶ್ಯಕ.

ಮಾನವನು ಗಿಳಿಯಂತೆ ಪರಮಾತ್ಮನ ನಾಮೋಚ್ಚಾರಣೆಮಾಡುತ್ತ ಫಲವನ್ನಪೇಕ್ಷಿಸುವವನು ಸ್ವಂತದ ಗಿಳಿಪಾಠದ ಅಸತ್ಯವನ್ನು ಹೋಗಲಾಡಿಸುವದು ಅಲ್ಲ ಎರಡನೆಯವರ ಮನಸ್ಸಿನಲ್ಲಿಯ ಗಿಳಿಪಾಠದ ಅಸತ್ಯತೆಯನ್ನು ಹೋಗಲಾಡಿಸುವಷ್ಟು ಅತ್ಯಂತಿಕ ವಿಶ್ವಾಸ ನಿಜವಾದ ಭಕ್ತನಲ್ಲಿರಬೇಕು.

ಹೊಸದಿಲ್ಲಿ

೨೬—೪—೪೬ ಮೋ. ಕ. ಗಾಂಧಿ

(ಹರಿಜನ ಬಂಧುವಿನಿಂದ)

ಜಾತೀಯತೆಯ ಗೆದ್ದಲು

ಭೂಮಿ ಜವಳೇರಿದರೆ ಎಂಥ ಒಳ್ಳೆ ಭೂಮಿಯಾದರೂ ನಿಃಸಾರವಾಗುವದು. ಅದು ಬಹಳ ಕೆಟ್ಟ. ಜಾತೀಯತೆಯ ಗೆದ್ದಲು ಇದಕ್ಕಿಂತ ಅಪಾಯಕರ, ಮನುಷ್ಯರ ಸರ್ವಸ್ವವನ್ನೆ ನಾಶಮಾಡಿ ಮನುಷ್ಯ ಮನುಷ್ಯರಲ್ಲಿಯೆ ಒಡಕು ಹುಟ್ಟಿಸುತ್ತದೆ. ಕ್ರಿಸ್ತರು, ಪಾರಸಿಗಳು, ಸ್ವಾಭಾವಿಕವಾಗಿ ಅಸ್ಪೃಶ್ಯರು ಮತ್ತು ಹೆಣ್ಣುಮಕ್ಕಳಿಂದ ಪತ್ರಗಳ ಒಂದೇಸವನೆ ಬರಹತ್ತಿವೆ. ಅವುಗಳ ಬಗ್ಗೆ ಮಂತ್ರಿಮಂಡಳದಲ್ಲಿ ಆರಿಕೆ ಮಾಡಿಕೊಳ್ಳಬೇಕಾಗಿದೆ. ಪ್ರಾಂತೀಯ ಸ್ಪರ್ಧೆ ಈಗಾಗಲೆ ತಲೆದೋರಿದೆ ಮಂತ್ರಿನಿರ್ಮಾತರೂ ಈ ಕಲಂಕದಿಂದ ಅಲಿಪ್ತರಾಗಿಲ್ಲ ಅವರಿಗೆ ಜಾತೀಯತೆ ಒಪ್ಪಿಗೆಯಿಲ್ಲದಿದ್ದರೂ ಅವರು ಕೇವಲ ಗುಣವನ್ನು ನೋಡಿ ಆಯ್ಕೆ ಮಾಡಿ ನ್ಯಾಯ್ಯ ಮಾರ್ಗ ಅನುಸರಿಸುವ ಧೈರ್ಯ ಮಾಡಿದರೆ ಜಾತಿಯಿಂದ ಬಹಿಷ್ಕೃತರಾಗುವರು. ಪ್ರಜಾಪ್ರಭುತ್ವ ಸಮಾಜರಿಗಿಂತ ಹಿಂದೆ ಹೋಗದಿದ್ದರೂ ಅಷ್ಟನ್ನೆ ಮಾತ್ರ ಅದು ಪ್ರತಿನಿಧಿಸಬಲ್ಲದು. ಆದುದರಿಂದ ಪ್ರಜಾಪ್ರಭುತ್ವ ಸಂಸ್ಥೆ ವಿಶುದ್ಧವಾಗುಳಿಯಬೇಕಾದರೆ ಅತಿದೀನ ದರಿದ್ರರ ಸಾರ್ವತ್ರಿಕ ಶಿಕ್ಷಣದತ್ತ ಗಮನಿಸಬೇಕು. ಎಲ್ಲ ಬಗೆಯ ಸ್ವಾರ್ಥಭಾವನೆ ಮತ್ತು ಸಾಮಾಜಿಕ ನಿಂದೆಯನ್ನು ಮೀರಿ ನಡೆಯಬೇಕು. ಇಂಥ ಸಮಾಜದಲ್ಲಿ ಕ್ರಿಸ್ತರು ಮತ್ತು ಕ್ರಿಸ್ತೇತರರು ಇರಲರಿಯರು. ಲಿಂಗಭೇದವೂ ಉಳಿಯದು. ಅತ್ಯುತ್ತಮ ವ್ಯಕ್ತಿಗಳೆಲ್ಲ ಹೆಣ್ಣುಮಕ್ಕಳೇ ಆಗಿದ್ದಾರೆ. ಎಲ್ಲ ಮಂತ್ರಿಗಳೂ ಹೆಣ್ಣುಮಕ್ಕಳೆ ಆಗಬಹುದು; ಪಾರ್ಸಿಗಳಲ್ಲಿ ಅತ್ಯುತ್ತಮರಿದ್ದಾರೆ ಅವರೇ ಮಂತ್ರಿಗಳಾಗಬಹುದು. ಅಂಥ ಸುದಿನಕ್ಕೆ ಬಹಳ ದಿನ ಹತ್ತಬಹುದು. ಮಧ್ಯಂತರ ಅವಧಿಯಲ್ಲಿ ಏನು ಮಾಡಬೇಕು? ಹಿಂದೆ ಸರಿಸಲ್ಪಟ್ಟವೆಂದು ಯಾರಿಗೆನಿಸುವದೊ ಅವರು ತಮ್ಮ ನಿಷ್ಠಾಪೂರ್ವಕ ಸೇವೆ ಮತ್ತು ಸದ್ಗುಣಗಳಿಂದ ಇನ್ನಷ್ಟು ಶ್ರೇಷ್ಠರಾಗಿ ತಾಳ್ಮೆಯಿಂದಿರತಕ್ಕದ್ದು. ಮಂತ್ರಿಮಂಡಳದಲ್ಲಿದ್ದವರು ಎಲ್ಲರಿಗೂ ಸಮಾನವಾದ ನ್ಯಾಯ್ಯವನ್ನು ದಯಪಾಲಿಸಬೇಕು. ಹೆಚ್ಚು ಅಲಕ್ಷಿಸಲ್ಪಟ್ಟ ಮತ್ತು ತುಳಿಯಲ್ಪಟ್ಟ ಜನರನ್ನು ಉಚ್ಚ ಸ್ಥಿತಿಗೆ ಮುಟ್ಟಿಸಲು ಹೆಚ್ಚಿಗೆ ಪ್ರಯತ್ನ ಮಾಡತಕ್ಕದ್ದು. ಮಂತ್ರಿಗಳು ಜನತೆಯ ಸೇವಕರು. ಆದರೆ ಒಡೆಯರು ಎಂಬದಾಗಿ ಎಲ್ಲರೂ ಭಾವಿಸುವಂತೆ ಅವರು ತಮ್ಮ ವರ್ತನವನ್ನಿಡಬೇಕು.

ಹೊಸದಿಲ್ಲಿ ಮೋ. ಕ. ಗಾಂಧಿ

೨೯—೪—೪೬

ತಿಳಿಗೇಡಿ ಶಾಸನ

ಶ್ರೀ ಟಿ. ಎನ್. ಜಗದೀಶನ್ನರು ಗಾಂಧೀಜಿಗೆ ಹೀಗೆ ಬರೆಯುತ್ತಾರೆ—

“ ಹಿಂದೂ ಪತ್ರಿಕೆಯಲ್ಲಿ ಈ ಕೆಳಗಿನ ಸುದ್ದಿ ಬಂದಿದೆ. ‘ ಕರಾಚಿ, ಎಪ್ರಿಲ ೧— ಕುಷ್ಠರೋಗಿಗಳನ್ನು ಷಂಡರನ್ನಾಗಿ ಮಾಡಲು ಸರಕಾರಕ್ಕೆ ಅಧಿಕಾರವೀಯುವಗೋಸುಗ ಮಸೂದೆಯೊಂದನ್ನು ಸಿಂಧ ಶಾಸನ ಸಭೆ ಇಂದು ಪರಿಶೀಲಕ ಸಮಿತಿಗೆ ಒಪ್ಪಿಸಿತು. ಮಸೂದೆಯ ಉದ್ದೇಶ ಕಾರಣಗಳ ವಿವರಣೆಯಲ್ಲಿ, ಕುಷ್ಠರೋಗ ಸಿಂಧ ಪ್ರಾಂತದ ಸ್ಥಾನಿಕರೋಗವಲ್ಲದಿದ್ದರೂ ಇಲ್ಲಿ ಅದರ ಚಿಕಿತ್ಸೆಗಿರುವ ಸೌಕರ್ಯಗಳ ಕಾರಣದಿಂದ ಹಿಂದುಸ್ಥಾನದ ಎಲ್ಲ ಕಡೆಗಳಿಂದಲೂ ಅನೇಕಾನೇಕ ಕುಷ್ಠರೋಗಿಗಳು ಇಲ್ಲಿಗೆ ಆಕರ್ಷಿಸಲ್ಪಡುತಿರುವರು. ಇದರಿಂದ ಈ ಪ್ರಾಂತಕ್ಕೆ ಕಠಿನ ಸಮಸ್ಯೆಯೊಂದು ಉದ್ಭವಿಸಿದಂತಾಗಿದೆ ಎಂಬದಾಗಿ ಹೇಳಿದೆ. ಈ ಮಸೂದೆಯಲ್ಲಿ ಪುರುಷ ಕುಷ್ಠರೋಗಿಗಳನ್ನು ನಪುಂಸಕರಾಗಿ ಮಾಡಲು ಅಧಿಕಾರ ಕೊಡಲಾಗಿದೆ. ’

“ ಸುಮಾರು ಒಂದು ವರ್ಷ ಕೆಳಗೆ ಈ ವಿಷಯದಲ್ಲಿ(ಈಗ ಇಂಗ್ಲಂಡಿನಲ್ಲಿ ರಜೆಯ ಮೇಲಿರುವ) ಡಾ. ಆರ್. ಜಿ. ಕೋಕ್ರೇನರ ಅಭಿಪ್ರಾಯವನ್ನು ಕೇಳಿದಾಗ ಅವರು ಈ ಮೇಲಿನ ಸೂಚನೆಗೆ ಪ್ರಬಲ ವಿರೋಧವನ್ನು ವ್ಯಕ್ತಗೊಳಿಸಿದ್ದರು. ಕುಷ್ಠರೋಗ ಅನುವಂಶಿಕವಾಗಿದ್ದರೆ ಪುರುಷರೋಗಿಗಳನ್ನು ನಪುಂಸಕರಾಗಿ ಮಾಡುವದು ಕುಷ್ಠರೋಗವನ್ನುಹಿಡಿತಕ್ಕೆ ತರಲು ಅವಶ್ಯವಾದ ಶಾಸನವೆಂದು ಒಪ್ಪಬಹುದಿತ್ತು. ಆದರೆ ಕುಷ್ಠರೋಗ ವಂಶಪಂಪರಾಗತವಲ್ಲ. ಅದು ಹೆಚ್ಚುವದಕ್ಕೆ ನಿರೋಗಿ ವ್ಯಕ್ತಿಗಳು, ಅದರಲ್ಲಿಯೂ ಮಕ್ಕಳು ಸುಂಕು ಕುಷ್ಠರೋಗಿಗಳೊಡನೆ ದೀರ್ಘಕಾಲದ ಸಂಸರ್ಗವಿಡುವದೇ ಕಾರಣವಾಗಿದೆ. ಸುಂಕರೋಗಿಯೊಡನೆ ಸಂಪರ್ಕ ಮಾಡಗೊಟ್ಟರೆ ಯಾವ ಮಗುವಿಗೂ ಅದು ಅಂಟಿಕೊಳ್ಳುವ ಸಂಭವವಿದೆ. ರೋಗಗ್ರಸ್ತ ಮಾತಾಪಿತೃಗಳಲ್ಲಿ ಜನಿಸಿದ ಮಕ್ಕಳನ್ನು ಬಹಳ ಚಿಕ್ಕವಯಸ್ಸಿನಲ್ಲೇ ಅವರಿಂದ ದೂರವಿರಿಸಿದರೆ ಅವುಗಳಿಗೆ ಆ ರೋಗ ಅಂಟುವದಿಲ್ಲ. ನಮ್ಮ ಹಿಂದೀ ಕೂಡುಕುಟುಂಬಗಳಲ್ಲಿ ರೋಗಗ್ರಸ್ತ ತಂದೆ ತಾಯಿಗಳ ಸಂಸರ್ಗಕ್ಕಿಂತಲೂ ಹೆಚ್ಚಾಗಿ ಚಿಕ್ಕಪ್ಪ, ಚಿಗವ್ವ, ಅಣ್ಣತಮ್ಮ ಅಕ್ಕತಂಗಿಯರ ಸಂಪರ್ಕದಿಂದಲೇ ಕುಷ್ಠರೋಗ ಸೋಂಕುವದೆಂದು ಈವರೆಗೆ ಆದ ಸೂಕ್ಷ್ಮ ನಿರೀಕ್ಷಣೆಗಳ ವರದಿಗಳು ಹೇಳುತ್ತವೆ. ನೆರೆಹೊರೆಯವರಿಂದಲೂ ಜತೆಬಾಡಿಗೆದಾರರಿಂದಲೂ ಸುಂಕು ತಗಲಿದ್ದು ಕಂಡುಬಂದಿದೆ. ಆದುದರಿಂದ ಪುರುಷರೋಗಿಗಳ ಪುಂಸ್ತ್ವನಾಶದಿಂದ ಪರಿಸ್ಥಿತಿ ಸುಧಾರಿಸುವದು ಸಾಧ್ಯವಿಲ್ಲ. ಬದಲಿಗೆ ಅದು ರೋಗಿಗಳಲ್ಲಿ ಭಯವನ್ನುಂಟುಮಾಡಿ, ಅವರು ದೀರ್ಘಕಾಲದ ವರೆಗೆ ತಮ್ಮ ರೋಗವನ್ನು ಮುಚ್ಚಿಡುವಂತೆ ಪ್ರೇರಿಸುವ ಮೂಲಕ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವದು ನಿಶ್ಚಯ. ಕುಷ್ಠರೋಗ ದೀರ್ಘಕಾಲ ಬಚ್ಚಿಡಬಲ್ಲದಂಥ ರೋಗವೆಂದೂ ಚಿಕಿತ್ಸೆ ಮಾಡಿದರೆ ಅದು ವಾಸಿಯಾಗಬಹುದಾದ, ಇಲ್ಲದಿದ್ದರೆ ಇತರರಿಗೆ ಅಂಟಿಕೊಳ್ಳುವಷ್ಟು ಪ್ರಬಲವಾಗಬಹುದಾದ ಕಾಲವೂ ಈ ಪ್ರಥಮ ಕಾಲವೇ ಎಂದೂ ನಾವು ನೆನಪಿನಲ್ಲಿಡೋಣ.

“ಮಸೂದೆ ಕಾಯಿದೆಯಾದರೆ ಅದು ವ್ಯವಹಾರದಲ್ಲಿ ರೋಗ ಸ್ಪುಟವಾಗಿ ಗೋಚರಕ್ಕೆ ಬಂದವರ ಮೇಲಷ್ಟೇ ಆಚರಣೆಗೆ ಬರಬಲ್ಲದು. ಅಷ್ಟರಲ್ಲಿ ರೋಗ ಬಹಳ ಬೆಳೆದು ಹಣ್ಣಾಗಿರುತ್ತದೆ. ಮತ್ತು ಬಹಳ ಮಟ್ಟಿಗೆ ಅದು ಬೇರೆಯವರಿಗೆ ಅಂಟುವ ಸ್ವರೂಪದ್ದಿರಲಾರದು. ಒಂದು ವೇಳೆ ಅದು ಅಂಟಿಕೊಳ್ಳುವ ಸ್ವರೂಪದ್ದೇ ಇದ್ದರೂ ಆ ರೋಗಿಗೆ ಮದುವೆಯಾಗಿ ಮಕ್ಕಳು ಹಡೆಯುವ ಅವಕಾಶವೇ ದೊರೆಯಲಾರದು. ಪ್ರವಾಸಿ ರೋಗಿಗಳಿಂದಾಗುವ ರೋಗದ ಹಬ್ಬುಗೆಯನ್ನು ತಡೆಯುವದು ಸಿಂಧ ಮಸೂದೆಯ ಉದ್ದೇಶ. ಪ್ರವಾಸಿ ರೋಗಿಯಾದವನು ಸುಂಕು ಸ್ವರೂಪದವನಾಗಿದ್ದರೆ ಅವನನ್ನು ಷಂಡನಾಗಿ ಮಾಡಿದ ಮಾತ್ರದಿಂದ ದೀರ್ಘಕಾಲದ ಸಂಪರ್ಕದಿಂದ ಇತರರಿಗೆ ರೋಗ ಸೋಂಕುವದನ್ನು ತಡೆದಂತಾಗಲಿಲ್ಲ. ಕುಷ್ಠರೋಗವನ್ನು ಹಿಡಿತಕ್ಕೆ ತರಲು ಒಂದೇ ಉಪಾಯವಿದೆ. ಸ್ಥಾನಿಕನಿರಲಿ ಪ್ರವಾಸಿಯಿರಲಿ, ಸುಂಕು ಜಾತಿಯ ಕುಷ್ಠರೋಗದಿಂದ ಗ್ರಸ್ತನಾದವನೊಡನೆ ಮಕ್ಕಳು ದೀರ್ಘ ಕಾಲದ ಸಂಪರ್ಕವಿಡದಂತೆ ನೋಡಿಕೊಳ್ಳುವದೇ ಆ ಉಪಾಯ.

“ಸಿಂಧದ ಮಸೂದೆ ಎಷ್ಟು ದಡ್ಡತನದ್ದೋ ಅಷ್ಟೇ ನಿಷ್ಠುರವೂ ಹೌದು. ಕ್ಷಯರೋಗದಂತೆ ಕುಷ್ಠರೋಗವಾದರೂ ನಿರೋಗಿ ವ್ಯಕ್ತಿಗಳು, ಮುಖ್ಯವಾಗಿ ಮಕ್ಕಳು ರೋಗಗ್ರಸ್ತರ ಸಮೀಪ ಸಂಪರ್ಕದಲ್ಲಿ ವಾಸಿಸುವದರಿಂದಲೇ ಕೆಲ ಕುಟುಂಬಗಳಲ್ಲಿ ವಂಶಾನುಗತವಾಗಿ ಬರುತ್ತಿದೆ. ಕುಷ್ಠರೋಗದ ಹಬ್ಬುಗೆಯನ್ನು ತಡೆಯಲು ಕೈಕೊಳ್ಳುವ ಕ್ರಮಗಳು ಕ್ಷಯರೋಗನಿರೋಧಕ ಕ್ರಮುಗಳಿಗಿಂತ ನಿಷ್ಠುರವಾಗಿರಬೇಕಾದ ಕಾರಣವಿಲ್ಲ. ರೋಗಗ್ರಸ್ತ ಸುಂಕಿಗರೊಡನೆ ನಿರೋಗಿಗಳಿಗಿರುವ ಸಂಪರ್ಕನ್ನು ಹರಿಯುವದೇ ಆ ಕ್ರಮಗಳ ಗುರಿಯಾಗಿರಬೇಕು. ವಿಷಾದದ ಸಂಗತಿ, ಅರಿತುನುರಿತ ಜನರು ಕೂಡ ಕುಷ್ಠ ರೋಗದ ವಿಷಯದಲ್ಲಿ ಹಳೆಯ ತಪ್ಪು ಕಲ್ಪನೆಗಳನ್ನು ಇಟ್ಟುಕೊಂಡಿರುವರು. ನಮಗಂಟಿದ ಪ್ರಾಚೀನ ಪೂರ್ವಗ್ರಹಗಳನ್ನು ಹೊಡೆದಟ್ಟುವದು ಎಲ್ಲಕ್ಕಿಂತ ಕಠಿನವಾದ ಕೆಲಸ. ಕಾರಣ, ಕುಷ್ಠರೋಗಿಗಳನ್ನು ಕುರಿತು ಶಾಸನಕಾರರಲ್ಲಿಯೂ ಆಡಳಿತೆಗಾರರಲ್ಲಿಯೂ ಒಂದು ಆಗ್ರಹಬುದ್ಧಿ ಉತ್ಪನ್ನವಾಗಿದೆ. ಆದರೆ ಕುಷ್ಠ ರೋಗದಲ್ಲಿ ಬಹಳ ಕೆಲಸ ಮಾಡಿದ ಮಹಾನುಭಾವರೆಲ್ಲರೂ ಕುಷ್ಠವನ್ನು ನಿರ್ನಾಮ ಮಾಡಲು ನಿಷ್ಠುರ ಕ್ರಮಗಳನ್ನು ಕೈಕೊಂಡರೆ ಅದರಿಂದ ವಿಪರೀತ ಫಲವೇ ದೊರಕುವದೆಂದು ಏಕಕಂಠದಿಂದ ಅನುಭವ ವಾಣಿಯನ್ನು ಸಾರಿದ್ದಾರೆ. ನಿಷ್ಠುರ ಕ್ರಮಗಳಿಂದ ರೋಗವನ್ನು ಮುಚ್ಚಿಡುವ ಪ್ರವೃತ್ತಿಯುಂಟಾಗಿ ಅದರ ಹಬ್ಬುಗೆ ಮತ್ತೂ ಬೆಳೆಯುವದು. ಜೀವನದ ಇತರ ಕ್ಷೇತ್ರಗಳಲ್ಲಿ ಹೇಗೋ ಹಾಗೆಯೇ ಕುಷ್ಠರೋಗದಲ್ಲಿಯೂ ಕಠೋರತೆಯಿಂದ ಲಾಭವಿಲ್ಲ, ಹಿಂಸೆಯಿಂದ ಫಲವಿಲ್ಲ.”

ಪ್ರೊ. ಜಗದೀಶನ್ನರು ಹೇಳಿರುವ ಪ್ರತಿಯೊಂದು ಶಬ್ದವನ್ನೂ ವೈದ್ಯಜಗತ್ತು ಅನುಮೋದಿಸುತ್ತದೆ. ಉಷ್ಣವಲಯದ ರೋಗಗಳಲ್ಲಿ ನಿಷ್ಣಾತರಾದ ಮಾನ್ಸನ್-ಬಹ್ರ ಅವರು ಕುಷ್ಠರೋಗದ ಪರಂಪಾರಾಗತಿಯನ್ನು ಕುರಿತು ಹೀಗನ್ನುತ್ತಾರೆ:

“ಕೆಲ ವಂಶಗಳಲ್ಲಿ ಕುಷ್ಠರೋಗ ಪ್ರಚಲಿತವಾಗಿರುವದರಿಂದಲೂ ಕೆಲವೊಮ್ಮೆ ಮಧ್ಯದಲ್ಲಿ ಕೆಲ ತಲೆಮಾರು ಬಿಟ್ಟು ಮತ್ತೆ ಅದು ತಲೆದೋರುವದರಿಂದಲೂ ಅದು ಅನುವಂಶಿಕ ರೋಗವೆಂಬ ನಂಬಿಕೆ ಹಿಂದೆ ಇತ್ತು. ಅದು ನಿಜವಾದ ಪಕ್ಷದಲ್ಲಿ ೧೬೦ ಜನ ನಾರ್ವೇ ದೇಶದ ಕುಷ್ಠರೋಗಿಗಳ ಮಕ್ಕಳು ಅಮೇರಿಕೆಗೆ ವಲಸೆ ಹೋದಾಗ ಅವರಲ್ಲೊಬ್ಬನೂ ಕುಷ್ಠರೋಗಿಯಾಗಲಿಲ್ಲೆಂದು ಹ್ಯಾನ್ಸನ್‌ರು ಬೆಳಕಿಗೆ ತಂದ ಸಂಗತಿಗೆ ಏನು ಅರ್ಥ ಹೇಳಬೇಕು? ಪ್ರಸವಾನಂತರ ಸ್ತ್ರೀಗರ್ಭದಿಂದ ಹೊರಚೆಲ್ಲಲ್ಪಡುವ ಕಸದಲ್ಲಿ (placenta) ಆ್ಯಸಿಡಿನಷ್ಟು ವೇಗವುಳ್ಳ (acid fast) ರೋಗಾಣುಗಳು (bacillus) ಕಂಡು ಬಂದಿವೆಯಾದರೂ ಫಿಲಿಫಾಯಿನ್ಸದಲ್ಲಿಯ ಕ್ಯೂಲಿಯನ್ ವಸತಿಯ ದೊರೆತ ಪ್ರಮಾಣಗಳಿಂದ ಕುಷ್ಠರೋಗ ಅನುವಂಶಿಕವಲ್ಲವೆಂದು ಸಿದ್ಧವಾಗಿದೆ.”

ಕುಷ್ಠರೋಗವನ್ನು ತಡೆಯುವ ಒಂದೇ ಒಂದು ಉಪಾಯವೆಂದರೆ ರೋಗಿಗಳನ್ನು ಇತರರಿಂದ ದೂರವಿರಿಸುವದು. ಕುಷ್ಠರೋಗಿ ತಾಯಿತಂದೆಗಳಿಂದ ಹುಟ್ಟಿದ ಮಗುವನ್ನು ಹುಟ್ಟಿದಾಕ್ಷಣ ಅವರಿಂದ ಬೇರ್ಪಡಿಸಿಡಬೇಕು. ಇನ್ನೊಬ್ಬ ಉಷ್ಣವಲಯದ ರೋಗ ತಜ್ಞರಾದ ಸ್ಟಿಟ್ಟರ ಅಭಿಪ್ರಾಯದಲ್ಲಿ, ಹೀಗೆ ಮಾಡಲು ಆರು ತಿಂಗಳ ತಡಮಾಡಿದರೆ ಅಷ್ಟರಲ್ಲಿ ಮಗುವಿಗೆ ಆ ರೋಗ ಅಂಟಿಕೊಳ್ಳುವ ಸಂಭವವೇ ಹೆಚ್ಚು. ಅಜ್ಞ ಶಾಸನದಿಂದ ಯಾವ ಪ್ರಯೋಜನವೂ ಇಲ್ಲ. ತದ್ವಿರುದ್ಧವಾಗಿ ಪ್ರೊಫೆಸರ ಮಹಾಶಯರು ತಮ್ಮ ಪತ್ರದಲ್ಲಿ ವಿವರಿಸಿರುವಂತೆ ಬಹಳ ಹಾನಿಯೇ ಆದೀತು. ದೇಶದಲ್ಲಿನ ವೈದ್ಯರು ಸಾರ್ವತ್ರಿಕವಾಗಿ ಬರಲಿರುವ ಕಾಯಿದೆಯನ್ನು ಪ್ರತಿಭಟಿಸಬೇಕೆಂದೂ ಸರಕಾರದವರೂ ಈ ಮಸೂದೆಯನ್ನು ಪಾಸು ಮಾಡುವ ಬದಲು ಆ ರೋಗದ ಹಬ್ಬುಗೆಯನ್ನು ತಡೆಯುವ ಸಿದ್ಧವಾದ ಪರಿಣಾಮಕಾರಿ ಕ್ರಮಗಳನ್ನು ಕೈಕೊಳ್ಳುವರೆಂದೂ ಹಾರೈಸಲಾಗಿದೆ.

ಹೊಸದಿಲ್ಲಿ ಸುಶೀಲಾ ನಯ್ಯರ

೨೪—೪—೪೬

ಪ್ರಶ್ನ—ಪೆಟ್ಟಿಗೆ

ಅಪರಾಧಿಗಳು ಮತ್ತು ಅಹಿಂಸೆ

ಪ್ರಶ್ನೆ:— ನಿಮ್ಮ ಅಹಿಂಸಾರ್ಥದಲ್ಲಿ ಸ್ವತಂತ್ರ ಹಿಂದುಸ್ತಾನದಲ್ಲಿ ಅಪರಾಧಿಗಳಿಗೆ ಯಾವ ಬಗೆಯ ಶಿಕ್ಷೆಯುಂಟು ಅವರನ್ನು ನಡೆಸಿಕೊಳ್ಳುವುದೆಂತು?

ಉತ್ತರ:— ಅಹಿಂಸಾತ್ಮಕ ಸ್ವತಂತ್ರ ಹಿಂದು ಸ್ತಾನದಲ್ಲಿ ಅಪರಾಧಗಳು ಸಂಭವಿಸಬಹುದು. ಆದರೆ ಅಪರಾಧಿಗಳಿರಲಾರರು ಅವರಿಗೆ ಶಿಕ್ಷೆ ವಿಧಿಸಲ್ಪಡಲಾರದು. ಬೇರೆ ಬಗೆಯ ಬೇನೆಯಂತೆ ಅಪರಾಧವೂ ಒಂದು ಬಗೆಯ ರೋಗವು. ಪ್ರಚಲಿತ ಸಾಮಾಜಿಕ ಪದ್ಧತಿಯ ಫಲವದು. ಆದುದರಿಂದ ಎಲ್ಲ ಅಪರಾಧ, ಕೊಲೆ ಸಹ ಒಂದು ಬೇನೆಯೆಂದು ತಿಳಿದುಕೊಂಡು ಚಿಕಿತ್ಸೆ ಮಾಡತಕ್ಕದ್ದು. ಇಂಥ ಹಿಂದುಸ್ತಾನ ಎಂದಾದರೂ ಅಸ್ತಿತ್ವದಲ್ಲಿ ಬರಬಲ್ಲುದೊ ಎಂಬುದು ಬೇರೆ ಪ್ರಶ್ನೆ.

ಹೊಸದಿಲ್ಲಿ ಮೋ. ಕ. ಗಾಂಧಿ

೨೮—೪—೪೬

ನಾಗರಿಕತೆಯ ಮುನ್ನಡೆ

ಪ್ರಶ್ನೆ:— ಹರಿಜನದ ೧೪—೪—೪೬ನೇ ಸಂಚಿಕೆಯ ೯೧ ನೇ ಪುಟದಲ್ಲಿ ಎತ್ತು ಜೀವಂತ ಯಂತ್ರವಿದ್ದು ಇಂಥ ಅನಪಾಯಕರ ಪ್ರಾಣಿಗಳೊಡನೆ ಸಂಪರ್ಕ ಬೆಳೆಸುವದು ಮಾನವ ನಾಗರಿಕತೆಯ ಮುನ್ನಡೆಯ ದ್ಯೋತಕವೆಂದು ಪ್ರತಿಪಾದಿಸಲಾಗಿದೆ. ಆದರೆ ಪ್ರಾಣಿಗಳನ್ನು 'ಅನಪಾಯಕರ' ಮಾಡಿದ್ದು ಅವುಗಳನ್ನು ಕ್ಲೈಬ್ಯಸ್ಥಿತಿಗಿಳಿಸಿದೆಂಬುದು ಸ್ಪಷ್ಟ. ನಾಗರಿಕತೆಯ ಮುನ್ನಡೆಯ ಸರಿಯಾದ ಪದ್ಧತಿಯೇ ಇದು? ಆಕಳುಗಳಿದ್ದಲ್ಲಿ ಹೋರಿಗಳಿರಬೇಕಾದದು. ಮಾನವನ ಸ್ವಾರ್ಥ ಮತ್ತು ನಿರ್ದಯತೆಯ ಉತ್ಪಾದನೆಯೆ ಎತ್ತು. ವಿಚಾರವಂತ ಜನರಲ್ಲಿ ಅಲ್ಲದಿದ್ದರೂ ಕೆಳಗಿನ ದರ್ಜೆಯ ಪ್ರಾಣಿಗಳಲ್ಲಿಯಾದರೂ ಸ್ವಭಾವತಃ ಇದ್ದ ಬಲವೆಲ್ಲ ಸೃಷ್ಟಿಕ್ರಮದ ರೊಚ್ಚಿನಲ್ಲಿ ಪರಿಣಮಿಸುವುದು. ಆದುದರಿಂದ ಅಸಭ್ಯ ಪ್ರಾಣಿಯನ್ನು, ಮಹಾದೇವನ ವಾಹನವನ್ನು ಭಾರ ಹೊರುವ ಪಶುವಿನಂತೆ ಪರಿವರ್ತಿಸುವದು ವಿಷಾದಕರವಾಗಿದೆ.

ಉತ್ತರ:— ಲೇಖಕರ ಪ್ರತಿಪಾದನೆ ತರ್ಕಬದ್ಧವಾಗಿದೆ. ಆದರೆ ಇಂಥ ತರ್ಕ ಆಕಳವನ್ನು ಸಾಕಲು ಕೂಡ ಪ್ರತಿಬಂಧವನ್ನುಂಟುಮಾಡುತ್ತದೆ. ಏಕೆಂದರೆ ಆಕಳವನ್ನು ಮನೆಯಲ್ಲಿ ಸಾಕುವುದರಲ್ಲಿ ಹೋರಿಯನ್ನು ಎತ್ತನ್ನಾಗಿ ಪರಿಣಮಿಸುವದಕ್ಕಿಂತ ಹೆಚ್ಚು ನಿರ್ದಯತೆ ಇದೆ. ಆದರ ಕ್ರೌರ್ಯದಲ್ಲಿ ಹೆಚ್ಚು ಕಡಿಮೆ ಇರಬಹುದು. ಪಶುಗಳಲ್ಲಿ ನಮಗೆ ಪ್ರಭುತ್ವ ನಡೆಸಿ ಅವುಗಳನ್ನು ಪಯೋಗಿಸಿಕೊಳ್ಳುವುದರಲ್ಲಿ ಇನ್ನಷ್ಟು ಹೆಚ್ಚು ಮಾನವ್ಯ ಪದ್ಧತಿಯನ್ನವಲಂಬಿಸುವುದು ನಾಗರಿಕತೆಯ ಮುನ್ನಡೆಯ ಅರ್ಥವಾಗಿದೆಂದು ಹೇಳಬಹುದು.

ಜೀವದಯಾವಾದಿಗಳಲ್ಲಿ ಮೂರು ವರ್ಗಗಳಿವೆ. ಪ್ರಾಣಿಶಕ್ತಿಯ ಬದಲು ಬೇರೆ ಶಕ್ತಿಯ ಉಪಯೋಗ ಮಾಡಿಕೊಳ್ಳಬೇಕೆಂದು ಒಂದು ವರ್ಗ ನಂಬುತ್ತದೆ. ಪ್ರಾಣಿಗಳೂ ಬಾಂಧವರೆಂದು ಭಾವಿಸಿ ಅಣ್ಣತಮ್ಮಂದಿರ ಉಪಯೋಗವನ್ನು ಯಾವ ರೀತಿ ತೆಗೆದುಕೊಳ್ಳಲಾಗುತ್ತದೆಯೋ ಆ ಬಗೆಯ ಉಪಯೋಗ ಅವುಗಳಿಂದ ತೆಗೆದುಕೊಳ್ಳಬೇಕೆಂದು ಎರಡನೆ ವರ್ಗದವರ ಪ್ರತಿಪಾದನೆ. ಮೂರನೇ ವರ್ಗದವರು ಮಾನವನ ಸ್ವಾರ್ಥಕ್ಕಾಗಿ ಕೆಳಗಿನ ದರ್ಜೆಯ ಪ್ರಾಣಿಗಳ ಉಪಯೋಗ ಮಾಡಿಕೊಳ್ಳದೆ ತನ್ನ ಸ್ವಂತ ಶಕ್ತಿಯನ್ನು ಮತ್ತು ತನ್ನ ಸಹಕಾರಿ ಬಾಂಧವರು ಸ್ವಯಂ ಮತ್ತು ಜಾಣತನದಿಂದ ಕೊಡಬಹುದಾದ ಶಕ್ತಿಯನ್ನು ಪಯೋಗಿಸಿಕೊಳ್ಳುತ್ತಾರೆ. ನಾನು ಮೂರನೇ ವರ್ಗಕ್ಕೆ ಸೇರಿದವನು. ಜಾಣತನದಿಂದ ಮತ್ತು ಮಾನವತೆಯ ದೃಷ್ಟಿಯಿಂದ ಮಾನವನು ಪರಿಶ್ರಮಿಸಿದ್ದಾದರೆ ಹಣ್ಣು ಹಂಪಲದ ತೋಟವನ್ನು ಮಾಡುವದಲ್ಲದೆ ಧಾನ್ಯಧ್ವವಸಗಳನ್ನೂ ಬೆಳೆಯಬಹುದು. ಕೈದಿಗಳಂತೆ, ಸತ್ಯಾಗ್ರಹಿಗಳಾದ ನಾವು ಟ್ರಾನ್ಸವಾಲದಲ್ಲಿ ಕಲ್ಲಿನಗಣಿಗಳ ಭೂಮಿಅಗಿದು ಮುನಸಿಪಾಲ್ಟಿಯ ತೋಟವನ್ನಾಗಿ ಪರಿವರ್ತಿಸಿದೆವು. ಎಷ್ಟೇ ರಂಟೆ ಹೊಡೆಯುವದರಿಂದ ಇದು ಸಾಧ್ಯವಾಗುತ್ತಿರಲಿಲ್ಲ. ಗುದ್ಲಿಗಳಿಗೆ ಮಾತ್ರ ನೆಲ ಹರಿಯುತಿತ್ತು.

ಮೊದಲನೆಯದು ನಿರುಪಯುಕ್ತ ಮತ್ತು ಕೊನೆಗೆ ಮಾನವರಿಗೆ ಘಾತಕವಾಗಿಯೂ ಇದೆ. ಉಳಿದ ಎರಡನ್ನು ಒಳ್ಳೆ ಜಾಣತನದಿಂದ ಸಮ್ಮಿಳಿಸಿ ಉಪಯೋಗಿಸುವದು ಧ್ಯೇಯವಾಗಿರಬೇಕೆಂದು ನನ್ನ ಅಪೇಕ್ಷೆ. ಹೋರಿಗಳ ಬೀಜ ತೆಗೆಯುವದನ್ನು ತಪ್ಪಿಸುವದು ಸಾಧ್ಯವಿಲ್ಲ. ಆದರೆ ಹಾಗೆ ಮಾಡುವಾಗ ಹೆಚ್ಚು ಮಾನವೀಯ ಪದ್ಧತಿಯನ್ನವಲಂಬಿಸುವದು ಶಕ್ಯವಿದೆ.

ಈ ಸಂದರ್ಭದಲ್ಲಿ ಸುದ್ದಿಗಾರನೊಬ್ಬ ದನಗಳಿಗೆ ಬರೆಕೊಡುವ ಪ್ರಶ್ನೆಯನ್ನು ಎತ್ತಿದ್ದಾನೆ. ಈ ರೀತಿ ಬರೆ ಕೊಡುವುದರಿಂದ ಆಗುವ ನೋವು ಒಡೆಯನಿಗೆ ಇಲ್ಲವೆ ಆ ಪ್ರಾಣಿಗೆ ಆಗುವ ಕಲ್ಯಾಣದಿಂದ ತುಂಬಿಬರುವುದೊ? ಅದರಿಂದ ಪ್ರಾಣಿಗೆ ಯಾವದೆ ಬಗೆಯ ಕಲ್ಯಾಣವಾಗದಿದ್ದರೆ ಅದನ್ನು ನಿಷೇಧಿಸಲಿಕ್ಕೆ ಬೇಕು.

ಹೊಸದಿಲ್ಲಿ ಮೋ. ಕ. ಗಾಂಧಿ

೨೯—೪—೪೬

ಸಕ್ಕರೆ ಮತ್ತು ಮಿಠಾಯಿ

ಪ್ರಶ್ನೆ:— ಮುಂಬಯಿಯಲ್ಲಿ ಸಕ್ಕರೆ ಸೀದಾ ಪ್ರಮಾಣವು ನೂರಕ್ಕೆ ೨೫ ರಷ್ಟು ಕಡಮೆಯಾಗಿದೆ. ವ್ಯಕ್ತಿಗಳ ಸಕ್ಕರೆ ಸೀದಾ ಪ್ರಮಾಣವನ್ನು ಕಡಮೆ ಮಾಡುವುದಕ್ಕಿಂತ ಮಿಠಾಯಿ ಅಂಗಡಿಗಳ ಸೀದಾ ಪ್ರಮಾಣಕ್ಕೆ ಕತ್ತರಿ ಹಾಕುವದು ಅವಶ್ಯವಾಗಿಲ್ಲವೆ?

ಉತ್ತರ:— ವ್ಯಕ್ತಿಗಳ ಸೀದಾ ಪ್ರಮಾಣ ಕಡಮೆ ಮಾಡುವ ಮೊದಲು ಮಿಠಾಯಿಗಾರರ ಸೀದಾಕ್ಕೆ ಕತ್ತರಿ ಹಾಕುವದು ಯಾವಾಗಲೂ ನ್ಯಾಯ್ಯವು. ಈ ಕಠಿನ ಕಾಲದಲ್ಲಿ ಮಿಠಾಯಿ ಮಾಡುವುದು ಪೂರ್ಣವಾಗಿ ನಿಂತರೂ ಟೀಕೆಯಿಲ್ಲೆಂದು ನನ್ನ ಅಭಿಪ್ರಾಯ. ಮಿಠಾಯಿಯೇನು ಯುಕ್ತಾಹಾರಕ್ಕೆ ಅವಶ್ಯವಾಗಿಲ್ಲ.

ಬಿಳೇ ರೋಟು—ಮತ್ತು ಕಂದೀ ರೋಟು

ಜನವರಿ ವರೆಗೆ ಗೋದಿ ಹಿಟ್ಟಿನಲ್ಲಿ ನೂರಕ್ಕೆ ೧೦ ಪ್ರಮಾಣದಷ್ಟು ತವುಡು ಕೂಡಿಸಬೇಕೆಂಬ ನಿರ್ಬಂಧವಿದ್ದಿತು. ಅನಂತರ ಆ ನಿಯಮವನ್ನು ರದ್ದುಪಡಿಸಲಾಯಿತು. ಮತ್ತೆ ಅದನ್ನು ಜಾರಿಯಲ್ಲಿ ತರಲಾಗುವದಿಲ್ಲವೆ?

ಉತ್ತರ:— ಈ ಬಿಳಿಯ ಮತ್ತು ಕಂದೀ ರೋಟುಗಳಲ್ಲಿ ಎಂದಿನಿಂದಲೂ ಸ್ಪರ್ಧೆಯಿದ್ದುದು ನನಗೆ ಗೊತ್ತಿದೆ. ಬಿಳಿಯ ಬಣ್ಣದಿಂದ ಜನ ಆಕರ್ಷಿತರಾಗುತ್ತಾರೆ. ಹಬಸಿಗಳು ಹೀಗೆ ಆಕರ್ಷಿತರಾಗಲಿಕ್ಕಿಲ್ಲೆಂದು ನನ್ನ ನಂಬಿಗೆ. ಅದು ಏನೇ ಇದ್ದರೂ ರೋಟಿಯನ್ನು ಶುಭ್ರ ಮಾಡಲು ವಿಶೇಷ ಪ್ರಯತ್ನ ಮಾಡಲಾಗುತಿದೆಂಬುದು ಸಿದ್ಧ. ಸುದೈವದಿಂದ ನಗರವಾಸಿಗಳೇ ಇಂಥ 'ಹುಚ್ಚುಚ್ಚಾರ' ಮಾಡುತ್ತಿರುವರು. ಸೋಸಿ ತೆಗೆದ ಗೋದಿ ಹಿಟ್ಟಿನ ಎರಡು ಇಲ್ಲವೆ ಐದು ಚಪಾತಿಗಳಿಗಿಂತ ತವಡು ಸಹಿತ ಇದ್ದ ಗೋದಿ ಹಿಟ್ಟಿನ ಒಂದೇ ಚಪಾತಿ ಹೆಚ್ಚು ರುಚಿಕರ ಮತ್ತು ಪೌಷ್ಟಿಕವಾಗಿದೆಂದು ಡಾಕ್ಟರರು ಹೇಳುತ್ತಿರುವರು. ಸದ್ಯದ ಸಮಯದಲ್ಲಿಯಂತೂ ಎಲ್ಲ ಹಿಟ್ಟಿನ ಉಪಯೋಗ ಮಾಡುವದು ಅತ್ಯವಶ್ಯವಾಗಿದೆ. ಇದರಿಂದ ಹೆಚ್ಚು ಹಿಟ್ಟನ್ನು ಉಳಿಸಿದಂತಾಗುವದು. ಒಂದು ದೃಷ್ಟಿಯಿಂದ ಅದಕ್ಕಿಂತ ಹೆಚ್ಚು ಮಹತ್ವದ್ದಾಗಿದೆ. ಬಂದರಗಳಲ್ಲಿ ಸಂಗ್ರಹಿಸಿಟ್ಟ ಚೀಲಗಟ್ಟಲೆ ಗೋದಿಗಿಂತ ಹಳ್ಳಿಗಳಲ್ಲಿಯ ಗೋದಿ ಹೆಚ್ಚು ಕೆಲಸಕ್ಕೆ ಬರುವಂತಹದು. ಆದುದರಿಂದ ಗೋದಿ ಹಿಟ್ಟಿನಲ್ಲಿ ಅವಶ್ಯಕವಾಗಿ ತವಡು ಕೂಡಿಸಲಿಕ್ಕೆ ಬೇಕು. ಯುದ್ಧ ಮುಗಿದಿದೆ; ಆದರೆ ಯುದ್ಧೋತ್ತರ ಪರಿಸ್ಥಿತಿ ಅದಕ್ಕಿಂತ ಕಠಿನವಾಗಿದೆ. ಪರಿಸ್ಥಿತಿ ದಿನ ದಿನಕ್ಕೆ ಕೆಡುತ್ತಲಿದೆ ಅದೆಂದು ಸುಧಾರಿವದೋ ದೇವರೇ ಬಲ್ಲ.

ಚುನಾವಣೆಯಲ್ಲಿ ಗೊಂದಲ

ಪ್ರಶ್ನೆ:— ಮುಂಬಯಿಯಲ್ಲಿಯ ಇತ್ತೀಚಿನ ಚುನಾವಣೆಗಳಲ್ಲಿ ಗೊಂದಲವಾಗಿ ಬಹಳ ಹಾನಿಯಾಯಿತೆಂಬುದು ನಿಮಗೆ ಗೊತ್ತಾಗಿರಲು ಸಾಕು ಇಂಥ ಸಮಯದಲ್ಲಿ ಮೌನ ತಾಳುವದು ಅಹಿಂಸಾಚಾರ್ಯರಿಗೆ ಶೋಭಿಸುವದೊ?

ಉತ್ತರ:— ಮೌನವು ಶೋಭಿಸುವದೊ ಇಲ್ಲವೊ ಎಂಬ ಚರ್ಚೆಯಲ್ಲಿ ನಾನು ಬೀಳುವದಿಲ್ಲ ಈ ಗೊಂದಲವು ಭವಿಷ್ಯದ ಸೂಚಕವಾಗಿರದಿದ್ದರೆ ಅದರ ಬಗ್ಗೆ ಉಲ್ಲೇಖಿಸುವದು ತಪ್ಪಾಗಬಹುದು. ಇಂಥ ಬಡೆದಾಟಗಳು ಆಗುತ್ತಲೆ ನಡೆಯುವುವು ಅವೇನು ಹೊಸವಲ್ಲ. ಆದರಿಂದ ನಾವು ವಿವಂಚನೆಗೊಳಗಾಗಬೇಕಿಲ್ಲ. ಜನಸಾಮಾನ್ಯರಿಗೆ ಅಹಿಂಸಾ ಪಾಠ ಕಲಿಸುತ್ತ ಹೋದಂತೆ ಇವು ಮಾಯವಾಗುತ್ತ ನಡೆಯುವವು. ಇಂಥ ಘಟನೆಗಳಿಂದ ಕಲಿತ ಪಾಠಗಳಿಂದ ಅದು ಅಭಿವೃದ್ಧಿ ಹೊಂದಬಹುದು. ಆದರೆ ಈ ಗೊಂದಲವನ್ನು ಹಬ್ಬುತ್ತಿರುವ ಒಂದು ಪಿಡುಗಿನಂತೆ ನಾವು ಭಾವಿಸಬೇಕು. ತಾವೊಬ್ಬರೆ ಸತ್ಯಸಂಧರು ಉಳಿದವರೆಲ್ಲ ತಪ್ಪುಗಾರರು ಎಂದು ಅನೇಕ ಜನರು ಭಾವಿಸುವರು. ಎರಡನೆಯವರ ಮೇಲೆ ತಮ್ಮ ಅಭಿಪ್ರಾಯವನ್ನು ಹೇರುವದೇನು ತಪ್ಪಲ್ಲೆಂದೂ ಇಂಥವರು ಭಾವಿಸುವುದುಂಟು. ಈ ತಪ್ಪನ್ನು ಹೋಗಲಾಡಿಸಬೇಕಾಗಿದೆ. ನಾವು ಸತ್ಯಸಂಧರರಾಗಿದ್ದರೆ ನಮ್ಮಲ್ಲಿ ಅತ್ಯಂತಿಕ ತಾಳ್ಮೆಯಿರತಕ್ಕದ್ದು.

ಕೂಡಲೆ ನಮ್ಮ ತಪ್ಪು ನಮಗೆ ಕಾಣಿಸದು. ವಿವೇಕಭ್ರಷ್ಟರಿಗೆ ಇಲ್ಲವೆ ರಂಜನೆಗಾಗಿಯೆ ಬಾಳಬಯಸುವವರಿಗೆ ತಮ್ಮ ತಪ್ಪು ಎಂದಿಗೂ ತೋರದು. ಇಂಥ ಜನರೇ ಹೆಚ್ಚಿಗಿದ್ದರೆ, ನಮ್ಮ ಅಹಿಂಸೆ ಅಶಕ್ತರ ಅಹಿಂಸೆಯಾಗಿದೆಂದು ನಾವು ನಿರ್ಧರಿಸಲಿಕ್ಕೆಬೇಕು. ಅಹಿಂಸೆಯ ಹೆಸರಿನಲ್ಲಿ ಮುಚ್ಚಿದ ಹಿಂಸೆಯದೆಂದು ಭಾವಿಸಬೇಕು. ಈ ಅಶಕ್ತತೆ ಹಾಗೆಯೆ ಸಾಗಿದ್ದಾದರೆ ನಾವು ರಕ್ತದ ಮಡುವಿನಲ್ಲಿ ಈಜಾಡಬೇಕಾಗುವದು.

ನಾವು ಬೇರೆ ಪರಕೀಯ ಪ್ರಭುತ್ವದಲ್ಲಿಯೂ ಬರಬಹುದು. ಇಲ್ಲವೆ ಯಾದವೀ ಯುದ್ಧದಲ್ಲಿ ಅಶಕ್ತ ರಾಷ್ಟ್ರವು ಬಲಿಷ್ಠ ಶಸ್ತ್ರಾಸ್ತ್ರಗಳುಳ್ಳ ರಾಷ್ಟ್ರಗಳಿಗೆ ಶರಣು ಹೋಗಬೇಕಾಗುವದು. ಇಂಥ ಹೊಡೆದಾಟವನ್ನು ನೋಡುವ ದುರ್ದೈವ ನಮ್ಮದಾಗಿದ್ದರೆ ಅಹಿಂಸಾವಾದಿಗಳು ಅದನ್ನು ತಡೆಯುವುದರಲ್ಲಿ ಸಂತೋಷದಿಂದ ಆತ್ಮಾಹುತಿ ಕೊಡಬೇಕು ಮತ್ತು ಅದರಿಂದ ಬಾಳಬೇಕು. ಜನಸಾಮಾನ್ಯರಲ್ಲಿ ಅಹಿಂಸಾಭಾವನೆ ಸಾಕಷ್ಟು ಬೇರೂರಿದೆಂದು ನನ್ನ ಆಸೆ. ಬ್ರಿಟಿಶ್‌ರು ಇಲ್ಲಿಂದ ಹೊರಟು ಹೋದಕೂಡಲೆ ಅಲ್ಲಲ್ಲಿ ಚಿಕ್ಕಪುಟ್ಟ ಕಲಹಗಳಾಗಬಹುದು. ಅನಂತರ ಜಗತ್ತಿಗೆ ಶಾಂತಿ ಪಾಠ ಕೊಡುವ ಬಂಧುಗಳಂತೆ ನಾವು ಬಾಳುವೆ ಸಾಗಿಸಬಹುದೆಂದೂ ನಾವು ಆಶಿಸುತ್ತೇವೆ.

ಮುಂಬಯಿಯಲ್ಲಿ ಹೋರಾಡಿದವರೆ ಅದರಿಂದ ಯಾವ ಲಾಭ ಪಡೆದರೆಂಬುದನ್ನು ಅರಿತಿರುವರು. ಯಾರು ಹೋರಾಡಿದರು ಮತ್ತು ಏತಕ್ಕಾಗಿ ಹೋರಾಡಿದರು ಅದರಿಂದ ಲಾಭವೇನಾಯಿತು ಮುಂತಾದ್ದೇನೂ ನನಗೆ ಗೊತ್ತಿಲ್ಲ.

ಹೊಸದಿಲ್ಲಿ ಮೋ. ಕ. ಗಾಂಧಿ

೨೭-೪-೪೬ (ಹರಿಜನ ಬಂಧುವಿನಿಂದ)

ಚರ್ಚಿಲ್ಲರ ಭಾಷಣದ ಸಾರ

ಜಗತ್ತಿಗೇ ಜಡ್ಡು ಬಂದಿದೆ ಜಗತ್ತಿನಲ್ಲಿದೀಗ ದ್ವೇಷ ಎಲ್ಲೆಡೆ ತುಂಬಿದೆ. ಮಾನವ ಕುಟುಂಬದ ಅನೇಕ ಬಲಿಷ್ಠ ಶಾಖೆಗಳು ವಿಜಯಿಗಳು ಇಲ್ಲವೆ ಪರಾಜಿತರು ಅಜ್ಞರು ಇಲ್ಲವೆ ಅಪರಾಧಿಗಳು ಕೂಡಿಯೆ ಗೊಂದಲದಲ್ಲಿ ಬಿದ್ದಿರುವರು ದುಃಖಕ್ಕೆ ಇಲ್ಲವೆ ನಾಶಕ್ಕೀಡಾಗಿರುವರು ನಮ್ಮ ಜೀವಾವಧಿಯಲ್ಲಿ ಸಂಭವಿಸಿದ ಎರಡು ಭಯಾನಕ ಯುದ್ಧಗಳಿಂದ ಸದ್ಗುಣ, ಸಂಸ್ಕೃತಿಗಳು ಹಾಳಾಗಿ ಹೋಗಿವೆ.

ಹತ್ತೊಂಭತ್ತನೆ ಶತಮಾನದಲ್ಲಿ 'ಕ್ರಿಶ್ಚನ್ ನಾಗರಿಕತೆ' ಎಂದು ಕರೆಯಿಸಿಕೊಳ್ಳಬಹುದಾಗಿದ ಅನೇಕ ವಿಷಯಗಳಿಗೆ ಅಪರಿಮಿತ ಹಾನಿಯಾಗಿದೆ ಎಲ್ಲ ಪ್ರಮುಖ ರಾಷ್ಟ್ರಗಳು ಬಲವಾದ ಭಾರದಿಂದ ಬಳಲುತ್ತಿವೆ. ಅದರಿಂದ ಅವುಗಳ ಚೇತನ ಶಕ್ತಿಯೇ ಮೊಂಡವಾಗಿದೆ ಮತ್ತು ಸಾಮಾಜಿಕ ಸಂಬಂಧಗಳು ನಾಶವಾಗಿವೆ.

ಶಾಸ್ತ್ರಗಳು ಮತ್ತೂ ಮುನ್ನಡೆದಿವೆ. ಘಾತಕ ಯುದ್ಧದ ಭಯಾನಕ ಗಾಳಿಯಿಂದ ಅವುಗಳಿಗೆ ಪ್ರೋತ್ಸಾಹನೆ ದೊರೆತಿದೆ. ಈ ಶಾಸ್ತ್ರಗಳ ಪರಿಣಾಮವಾಗಿ ಮಾನವರಿಗೆ ವಿನಾಶದ ಸಾಧನಗಳು ವಿಪುಲವಾಗಿ ದೊರೆತಿವೆ. ಅವುಗಳ ವ್ಯವಹಾರ ಜ್ಞಾನ ಇಲ್ಲವೆ ಸದ್ಗುಣಗಳ ಬೆಳವಣಿಗೆಯ ಆಚೆಗೆ ಈ ವಿನಾಶಕ ಸಾಧನಗಳು ದೊರೆತಿವೆ.

ಯಾವ ಜಗತ್ತಿನಲ್ಲಿ ಆಹಾರ ಪದಾರ್ಥಗಳ ಅತಿ ಉತ್ಪಾದನೆಯ ಸಮಸ್ಯೆ ಮೇಲಿಂದ ಮೇಲೆ ಮೊದಲು ಉಂಟಾಗುತಿದ್ದಿತೊ ಅದೇ ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಜನರಿಂದು ಭೀಕರ ಬರಗಾಲದ ಮತ್ತು ಅನಾವೃಷ್ಟಿಯ ಬಾಧೆಗೊಳಗಾಗಿರುವರು.

ಮಾನವರು ಈ ವರೆಗೆ ಅನುಭವಿಸಿದ ಮತ್ತು ಸದ್ಯ ಅನುಭವಿಸುತ್ತಿರುವ ಕಷ್ಟನಷ್ಟಗಳಿಂದ

—೧೦ನೇ ಪುಟ ನೋಡಿರಿ

ಗೋಮುಖ ವ್ಯಾಘ್ರ

"ನಾನು ಹೆಣ್ಣುಮಗಳಾದರೂ ಈ ವಿಷಯದ ಬಗ್ಗೆ ನಿಮಗೆ ಬರೆಯಲೇಬೇಕೆಂದು ನನಗೆನಿಸುತ್ತದೆ. ಮೂರು ತಿಂಗಳುಗಳ ಹಿಂದೆ........ಸೇವಕನೆಂದು ಹೇಳಿ ಒಬ್ಬ ಮನುಷ್ಯ ಇಲ್ಲಿಗೆ ಬಂದನು. ಕಾಂಗ್ರೆಸ್ಸಿಗರ ನಿರ್ದೋಷತೆಯ ಬಗೆಗೆ ಯಾವಾಗಲೂ ನನ್ನಲ್ಲಿ ಉಚ್ಚ ಭಾವನೆಗಳಿದ್ದುದರಿಂದ ಅವನ ಭೆಟ್ಟಿಗಾಗಿ ನನಗೆ ಸಂತೋಷವೆನಿಸಿತು. ಪ್ರತಿದಿನ ನಾನು ನೂಲು ತೆಗೆಯುತಿದ್ದೆ; ಅವನು ಪ್ರತಿದಿನ ನನ್ನೆಡೆಗೆ ಬಂದು ನನ್ನನ್ನು ಮಗಳೆಂದು ಕರೆಯುತಿದ್ದನು. ನಾನಾದರೂ ಅವನನ್ನು ಕಕ್ಕನೆಂದು ಕರೆಯಹತ್ತಿದೆ. ಒಂದು ದಿನ ಸಾಯಂಕಾಲ ಅವನು ಒಂದು ಮೋಟರಕಾರನ್ನು ತಂದು ನೀನು ಎಂದಾದರೂ ಇದರಲ್ಲಿ ಕುಳಿತಿರುವಿಯಾ ಎಂದು ಕೇಳಿದನಲ್ಲದೆ ತನ್ನ ಗೂಡ ಸಾಯಂಗಾಳಿ ಸವಾರಿಗೆ ಹೋಗಬಯಸುವಿಯಾ ಎಂದೂ ಕೇಳಿದನು. ಅವನ ಬಗ್ಗೆ ನನಗೆ ಎಳ್ಳಷ್ಟೂ ಸಂಶಯ ಬರಲಿಲ್ಲ. ಅವನ ಬಿನ್ನಹಕ್ಕೆ ನಾನು ಮನ್ನಣೆಯಿತ್ತೆನು. ಮೊದಲು ನನ್ನನ್ನು ....ಗೆ ಕರೆದುಕೊಂಡು ಹೋದನು. ಅಲ್ಲಿ ನನ್ನ ಮುಖವನ್ನು ಬಿಗಿಯಲಾಯಿತು. ಆ ಬಳಿಕ ನಾವು ....ಲ್ಲಿ ಒಂದು ಮನೆಗೆ ತೆರಳಿದೆವು. ನನ್ನ ಮೇಲೆ ಅತ್ಯಾಚಾರ ಮಾಡುವದಕ್ಕಾಗಿ ಕೆಲ ದಿನಗಳ ವರೆಗೆ ಪ್ರತಿ ದಿನ ಪ್ರಯತ್ನ ಮಾಡಲಾಯಿತು. ಹಲವು ಸಲ ನಾನು ಪಾರಾಗಲು ಪ್ರಯತ್ನಿಸಿದೆ. ಆದರೆ ಪ್ರತಿ ಸಲ ಗುಂಡಿನ ಭೀತಿಯಿಂದ ನನ್ನನ್ನು ತಡೆಯಲಾಯಿತು. ಪ್ರಾಣವು ಎಲ್ಲಕ್ಕೂ ಪ್ರಿಯವಲ್ಲವೆ? ನನಗೆ ಭೀತಿಯುಂಟಾಯಿತೆಂದು ನಾನು ಒಪ್ಪುತ್ತೇನೆ. ಅನಂತರ ಒಂದು ದಿನ ಒಬ್ಬ ಶ್ರೀಮಂತ ವ್ಯಾಪಾರಿಯೂ ...... ದಲ್ಲಿಯ ಕಾಂಗ್ರೆಸ ಧುರೀಣನು ನನ್ನೆಡೆಗೆ ಬಂದು ತನ್ನೊಡನೆ ಕೂಡಿಕೊಂಡು ಸುಖದಿಂದ ಬಾಳುವೆ ಮಾಡಬೇಕೆಂದು ಕೇಳಿಕೊಂಡನು. ನನ್ನನ್ನು ಎತ್ತಿಕೊಂಡು ಬಂದ ಮನುಷ್ಯನು ನನ್ನೆಡೆಗೆ ನೋಡುತ್ತ ನಗುತ್ತಿದ್ದನು. ಈ ನೀಚ ಮನುಷ್ಯನ ಘಾತಕ ನಡೆವಳಿಕೆಯನ್ನು ಬಣ್ಣಿಸಲು ನನಗೆ ಶಬ್ದಗಳೇ ಬರಲೊಲ್ಲವು. ಉಳಿದವರೂ ಈ ನೀಚವೃತ್ತಿಯಲ್ಲಿ ಪಾಲುಗಾರರು ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ನನ್ನನ್ನು ಯಾವ ಮನೆಯಲ್ಲಿಟ್ಟಿದ್ದರೊ ಆ ಮನೆಯ ಮುದುಕಿಗೆ ಆ ಶ್ರೀಮಂತ ಮನುಷ್ಯ ೫೦೦ ರೂಪಾಯಿ ಕೊಟ್ಟನು. ಅವನ ಕಡೆಗೆ ಹೋಗಿ ಸುಖದಿಂದ ಇರಬೇಕೆಂದು ಅವಳು ನನ್ನ ಮನವೊಲಿಸಲು ಪ್ರಯತ್ನಿಸಿದಳು.

"ಅನಂತರ ಒಂದುದಿನ ನನ್ನ ತಂದೆಯ ಗೆಳೆಯನೊಬ್ಬನು ಪೋಲೀಸರ ಸಹಾಯದಿಂದ ನನ್ನನ್ನು ಪಾರು ಮಾಡಿದ"

ಕೆಲ ಕಾಂಗ್ರೆಸ್ಸಿಗರ ಅನೈತಿಕ ವರ್ತನದ ಬಗ್ಗೆ ಇಂಥ ಒಂದಕ್ಕಿಂತ ಹೆಚ್ಚು ಪತ್ರಗಳು ನನ್ನ ಕಡೆಗೆ ಬಂದಿವೆ. ಅವೆಲ್ಲ ಅಸತ್ಯವಾಗಿವೆಂದು ತಿಳಿದು ದೂರುಗಳನ್ನು ಪೂರ್ಣವಾಗಿ ಅಲಕ್ಷಿಸುವುದು ಜಾಣತನದ್ದಾಗಲಾರದು. ಪ್ರತಿಯೊಬ್ಬ ಕಾಂಗ್ರೆಸ್ಸಿಗ ಸದ್ಗುಣಗಳ ಖಣಿ ಎಂದು ಯಾರೂ ತಿಳಿದುಕೊಂಡಿಲ್ಲ. ಆದರೆ ಕಾಂಗ್ರೆಸ್ಸಿಗರು ಎಲ್ಲರಿಗಿಂತ ಹೆಚ್ಚು ನೀತಿವಂತರಾಗಿರತಕ್ಕದ್ದೆಂದು ಜನ ಅಪೇಕ್ಷಿಸುತಿರುವುದು ಸದಭಿಮಾನದ ಸಂಗತಿಯಾಗಿದೆ. ನಮ್ಮಲ್ಲಿ ಎಲ್ಲ ಬಗೆಯ ಅನೀತಿಗಳು ಮನೆ ಮಾಡಿವೆ. ದುರ್ನಡತೆಯ ಬಗ್ಗೆ ನ್ಯಾಯವಾಗಿ ಆರೋಪಿಸಲ್ಪಟ್ಟವರನ್ನು ತಪ್ಪು ದಾರಿಯಿಂದ ಪರಾವೃತ್ತಗೊಳಿಸುವದು ಸುಧಾರಕರ ಕರ್ತವ್ಯವಾಗಿದೆ. ಅ ನೀತಿಮತ್ತೆಗೂ ಮಿತಿಯಿದೆ. ಮೇಲೆ ಬರೆದ ಸಂಗತಿ ನಿಜವಿದ್ದರೆ, ತನ್ನ ಕಾಮವಾಸನೆಯನ್ನು ತೃಪ್ತಪಡಿಸಿಕೊಳ್ಳುವುದಕ್ಕಾಗಿ ಅಜ್ಞ ಹುಡುಗೆಯರನ್ನು ಮೋಸಗೊಳಿಸಲು ಪ್ರಯತ್ನಿಸುವುದು ನ್ಯಾಯವೇ ಎಂದು ಪ್ರತಿಯೊಬ್ಬನು ತನ್ನ ಅಂತಃಕರಣದಲ್ಲಿ ಪ್ರಶ್ನೆ ಕೇಳಿಕೊಳ್ಳಬೇಕಾದುದವಶ್ಯ.

ಹೊಸದಿಲ್ಲಿ ಮೋ. ಕ. ಗಾಂಧಿ

೨೯-೪-೪೬ (ಹರಿಜನ ಸೇವಕದಿಂದ)

ನಾರದ ಪತ್ರ

ಗೊಂದಲಬಡಕ ಪತ್ರಿಕೆಗಳನ್ನು ಈಗ ಕೆಲಕಾಲದಿಂದ ಜನರಲ್ಲಿ ಹಬ್ಬಿಸಬಯಸುತ್ತಿದ್ದ ಉದ್ವೇಗಜ್ವರವನ್ನು ಕುರಿತು ಗಾಂಧೀಜಿ ಕಳೆದವಾರ ಎರಡು ಮಾತು ಆಡಿದ್ದರಷ್ಟೆ, ಆ ಉದ್ವೇಗ ಜ್ವರ ಮೊನ್ನೆ ಬುಧವಾರ ಚರಮಸೀಮೆಯನ್ನು ಮುಟ್ಟಿ ಒಬ್ಬ ಹಿಂದೂ ಹುಡುಗನನ್ನು ಅಜ್ಞಾತ ವ್ಯಕ್ತಿಯೊಬ್ಬನು ದೌರ್ಜನ್ಯದಿಂದ ಬೆನ್ನಲ್ಲಿ ಇರಿದುದರಲ್ಲಿ ಪರ್ಯವಸಾನ ಹೊಂದಿತು. ಸುದೈವದಿಂದ ಈ ಇರಿತ ಪ್ರಾಣಾಂತಿಕವಾಗಲಿಲ್ಲ. ಆ ಸ್ಥಳದ ಜನರು ತೋರಿಸಿದ ವಿವೇಕದ ಫಲವಾಗಿ ಸೇಡು ತೀರಿಸಿಕೊಳ್ಳುವ ಪ್ರಯತ್ನಗಳಾಗಲಿಲ್ಲ. ಅದರಿಂದ ತಂಟೆ ಹಬ್ಬಲಿಲ್ಲ. ಈ ವಿಷಯ ಟೀಕಿಸುತ್ತ ಗಾಂಧೀಜಿ ಅಂದದ್ದು, "ಸುದ್ದಿ ಕೇಳಿದ ಭರದಲ್ಲಿ ಈ ಪ್ರಕರಣದಲ್ಲಿ ಪೀಡೆಗೆ ಗುರಿಯಾದವನು ಹಿಂದುವಾಗಿದ್ದರಿಂದ ಅವನ ಮೇಲೆ ಏರಿಹೋದವನು ಮುಸ್ಲಿಮನಾಗಿರಬೇಕೆಂದು ಥಟ್ಟನೆ ತಿಳಿದುಕೊಳ್ಳುವ ಸಂಭವವುಂಟು. ಆದರೆ ಅಂಥ ಊಹೆ ಸೋಗಲಾಡಿತನದ್ದು ಮಾತ್ರವಲ್ಲ, ಕಿಡಿಗೇಡಿತನದ್ದೆಂದು ನನ್ನ ಅಭಿಪ್ರಾಯ. ಬದಲಿಗೆ ನಾವು ಸ್ವತಃ ಘಟನೆಯ ರಂಗದಲ್ಲಿದ್ದರೆ ಹೇಗೆ ವರ್ತಿಸುತ್ತಿದ್ದೆವು, ವರ್ತಿಸಬೇಕಾಗಿತ್ತೆಂದು ತುಸು ವಿಚಾರಿಸಿಕೊಳ್ಳುವದವಶ್ಯ." ಇಂಥ ದೌರ್ಜನ್ಯಪೂರ್ಣ ಅಭಿಯೋಗವನ್ನು ಕೈಕಟ್ಟಿಕೊಂಡು ನೋಡುತ್ತ ಕುಳ್ಳಿರುವದು ಹೇಡಿತನ. ಅಂದಾಕ್ಷಣ ಅವರು [ಜನರು] ಚೂರಿಯನ್ನು ಸೆಳೆದು ದುಷ್ಕರ್ಮಿಗೆ ಅವನ ರೀತಿಯಲ್ಲೇ ಪ್ರಾಯಶ್ಚಿತ್ತವನ್ನು ಕೊಡಬೇಕಾಗಿತ್ತೆ? ಇವೆರಡೂ ನೀತಿಗಳು ತಪ್ಪೆಂದು ಗಾಂಧೀಜಿ ಹೇಳಿದರು. ಅವರಿಗಿರುವ ಒಂದೇ ದಾರಿಯೆಂದರೆ, ನಿರಪರಾಧಿಯ ನೆತ್ತರದಿಂದ ಕೈತೊಳೆಯದಂತೆ ಆ ದುಷ್ಕರ್ಮಿಯನ್ನು ಕೇಳಿಕೊಳ್ಳುವದು. ಹಾಗೆ ಮಾಡುವದರಲ್ಲಿ ದುಷ್ಕರ್ಮಿಯ ಕೋಪಕ್ಕೆ ತಾವೇ ಆಹುತಿಯಾಗುವ ಪಾಳಿ ಬಂದರೂ ಅದಕ್ಕೆ ಹಿಂಜರಿಯದೆ ಆ ಸಂದರ್ಭವನ್ನು ಸ್ವಾಗತಿಸಬೇಕು. ದಿನವೂ ಪ್ರಾರ್ಥನಾ ಸಭೆಗೆ ಬಂದು ನೆರೆಯುತ್ತಿರುವ ಅವರು ತಮ್ಮ ಪ್ರಾಮಾಣಿಕತೆಯ ಪರೀಕ್ಷೆಗೊಂಡು ಅವಕಾಶ ಲಭಿಸಿತೆಂದು ತಿಳಿದುಕೊಳ್ಳಬೇಕು. "ಉದ್ವೇಗ ಉಗ್ಗಡಿಸುತ್ತಿರುವಾಗ, ಗಾಬರಿ, ಸಾಮೂಹಿಕ ಮತಿಭ್ರಮಣಗಳು ಜನರನ್ನು ಆವರಿಸಿರುವಾಗ ಪ್ರಾರ್ಥನಾಪ್ರಿಯ ಮನುಷ್ಯನು ಈ ಬಿರುಗಾಳಿಗೆ ತಲೆವಾಗದೆ, ಪಶುಗಳ ಮಟ್ಟಕ್ಕಿಳಿಯಲು ಒಪ್ಪದೆ, ತಲೆಯೆತ್ತಿ ನಿಲ್ಲಬೇಕು. ಹೃದಯದಲ್ಲಿರುವ ದ್ವೇಷ-ಕ್ರೋಧಗಳನ್ನು ಹತ್ತಿಕ್ಕಲು ಶಕ್ತಿ ಕೊಡೆಂದು ನಾವು ದೇವರನ್ನು ಪ್ರಾರ್ಥಿಸಬೇಕು. ದ್ವೇಷ, ಕ್ರೋಧ ಮತ್ತು ಇತರ ಹೇಯ ಪ್ರವೃತ್ತಿಗಳನ್ನು ಪ್ರತಿರೋಧಿಸಲು ಸಮರ್ಥನಾಗುವದೇ ಪ್ರಾರ್ಥನೆಗೆ ಯೋಗ್ಯ ಫಲ. ದುಷ್ಕರ್ಮಿಯನ್ನು ಕ್ರೋಧರಹಿತವಾದ ದೃಢ ನಿರ್ಧಾರದಿಂದ ಎದುರಿಸುವದೇ ಅವರನ್ನು ಬರ್ಚಿಯಿಂದ ನಿಗ್ರಹಿಸುವದಕ್ಕಿಂತ ಹೆಚ್ಚು ಶೌರ್ಯದ ಕೃತಿ; ಬೈಗಳಲ್ಲಿ ಪ್ರಸಕ್ತನಾಗುವದಕ್ಕಿಂತ ತುಟಿಗಳಿಂದ ಒಂದು ಕ್ರೋಧವಾಕ್ಯವೂ ಹೊರಬೀಳದಂತೆ ತಡೆದುಕೊಳ್ಳುವದೇ ಧೈರ್ಯದ ಕಾರ್ಯ."

ದಿಲ್ಲಿಯಲ್ಲಿ ವಿಜಯದಿನ ಸಮಾರಂಭ ಜರಗಿದಾಗ ನಿರಪರಾಧಿ ಜರ್ಮನನೊಬ್ಬನ ಮೇಲಾದ ಅಭಿಯೋಗದ ಇನ್ನೊಂದು ಸಂಗತಿಯನ್ನು ಗಾಂಧೀಜಿ ನೆನವರಿಕೆಗೆ ತಂದುಕೊಂಡರು. ಆಗಿನ ಸಾಮೂಹಿಕ ಮತಿಭ್ರಮಣ ಇಂಗ್ಲೀಷ ಜನರ ಮತ್ತು ಯುರೋಪಿಯನ್ನರ ಮೇಲೆ ಪರಿಣಾಮಿಸಿತ್ತು. ಗಾಂಧೀಜಿಯ ಅಭಿಪ್ರಾಯದಲ್ಲಿ ಅದೇನು ಕಡಿಮೆ ಹೇಡಿತನದ್ದಾಗಿರಲಿಲ್ಲ.

"ಆ ದುಷ್ಕರ್ಮಿಯನ್ನು ಕಂಡು ನಾವು ಅಯ್ಯೋ ಪಾಪ ಎನಬೇಕು" ಎಂದು ಗಾಂಧೀಜಿ ವಾದಿಸಿದರು. "ಪ್ರಾರ್ಥನೆಗೆ ಸ್ವಲ್ಪ ಮುಂಚೆ ನನ್ನನ್ನು ಕಂಡ ಮೌಲಾನಾರೊಬ್ಬರು, ಕೆಲ ಪತ್ರಿಕೆಗಳು ದಿನದಿನವೂ ವಾರವಾರವೂ ಜಾತೀಯ ದ್ವೇಷದ ಬೆಂಕಿಗೆ ಹೇಗೆ ಗಾಳಿ ಹಾಕುತ್ತಿರುವವೆಂದು ವಿವರಿಸುತ್ತಿದ್ದರು. ನಿಜವಾದ ಅಪರಾಧಿಗಳು ಅವುಗಳೆ. ಕೊಲೆಗೆ ಉತ್ತೇಜನ ಕೊಡುವದು ಕೊಲೆಯಷ್ಟೇ, ಅಲ್ಲ. ಅದಕ್ಕೂ ಮಿಗಿಲಾದ ಅಪರಾಧ. ನಿಜವಾಗಿ ಕೊಲೆ ಮಾಡಿದವನು ಎಷ್ಟೋ ವೇಳೆ ಕಿಡಿಗೇಡಿ ಪ್ರಚಾರಕ್ಕೆ ಮೋಸಹೋದ ತಿಳಿವಳಿಕೆಯುಳ್ಳದ ಕೈಗೊಂಬೆಯಾಗಿರುವನು" ಆದರೆ ಅಂಥ ಅಪಪ್ರಚಾರ ಕೂಡ ಕಲುಷಿತ ವಾತಾವರಣದಲ್ಲಿ ಮಾತ್ರ ಫಲಿಸಬಲ್ಲದು ಸ್ವಚ್ಛ ವಾತಾವರಣದಲ್ಲಿ ಅದು ಮೊಳೆಯಲಾರದು! "ಏನೇ ಇದ್ದರೂ ಗಾಬರಿಯೆಂಬುದು ಭಯದ ಪರಿಣಾಮವೇ ಸರಿ," ಎಂದು ಗಾಂಧೀಜಿ ಮುಗಿಸಿದರು. "ಆದರೆ ಪ್ರಾರ್ಥನೆಯ ಮನುಷ್ಯನಿಗೆ ಭಯವೇ ಇಲ್ಲ. ನಿಮ್ಮ ಪ್ರಾರ್ಥನೆಯಿಂದ ವಾತಾವರಣದಲ್ಲಿರುವ ಭಯ, ಗಾಬರಿ, ಸಾಮೂಹಿಕ ಮತಿಭ್ರಮಣಗಳು ತಿಳಿಯಾಗದೆ ಹೋದರೆ ಅದು ಬರಿ ಟೊಳ್ಳು ಪುನಶ್ಚರಣೆಯೇ ಸರಿ"

ಇನ್ನೊಂದು ಪ್ರಾರ್ಥನೋತ್ತರ ವ್ಯಾಖ್ಯಾನದಲ್ಲಿಯೂ ಈ ವಿಷಯವನ್ನು ಅವರು ಎತ್ತಿದರು. ಮುಂಬಯಿಯಲ್ಲಿ ಗಾಬರಿ ತುಂಬಿದೆ, ಹಿಂದೂಗಳು ಮುಸ್ಲಿಂ ವಸತಿಗಳಲ್ಲಿ ಮುಸ್ಲಿಮರು ಹಿಂದೂ ವಸತಿಗಳಲ್ಲಿ ಕಾಲಿಡಲು ಕೂಡ ಹೆದರುತ್ತಿದ್ದಾರೆ. ಅಂಗಡಿಗಳು ಮುಚ್ಚಿವೆ. ದಂಗೆಯ ಭಯದಿಂದ ಬೀದಿಗಳು ನಿರ್ಜೀವವಾಗಿವೆಯೆಂದು ಮುಂತಾಗಿ ಪತ್ರಿಕೆಗಳು ವರದಿ ಮಾಡಿದ್ದವು. ಇದೆಲ್ಲವೂ ಪತ್ರಿಕೆಗಳ ಸುಳ್ಳು ಸುದ್ದಿಯೆಂದು ಕೊನೆಗೆ ತಿಳಿದುಬಂತು. ಮುಂಬಯಿಯಲ್ಲಿ ಹೇಳಿಸಿಕೊಳ್ಳುವ ಗಾಬರಿಯಾಗಲಿ ಗಲಭೆಗಳಾಗಲಿ ಇದ್ದಿಲ್ಲ. ಹಿಂದೂ ಹೆಂಗಸರು ಮುಸ್ಲಿಂ ಪ್ರದೇಶಗಳಲ್ಲಿಯೂ ಮುಸ್ಲಿಂ ಸ್ತ್ರೀಯರು ಹಿಂದೂ ಪ್ರದೇಶಗಳಲ್ಲಿಯೂ ನಿರಾತಂಕವಾಗಿ ಓಡಾಡುತ್ತಿದ್ದರು. ಇಡೀ ಸುದ್ದಿಯೆ ಕಪೋಲಕಲ್ಪಿತವಾಗಿತ್ತು. ದಿಲ್ಲಿಯಲ್ಲಿಯೂ ಅದೇ ಹಿಂದಿನ ದಿನ ಹಿಂದೂ ಭಗಿನಿಯೊಬ್ಬಳು ಮುಸಲ್ಮಾನನ ಟಾಂಗಾದಲ್ಲಿ ಸವಾರಿ ಮಾಡುತ್ತಿದ್ದಳು ಜರುಗುತ್ತಿರುವ ಸಂಗತಿಗಳನ್ನು ನೋಡಿ ತನಗಾದ ಆಶ್ಚರ್ಯ, ಜಿಗುಪ್ಸೆಗಳನ್ನು ಅವನು ಬಾಯಿಬಿಟ್ಟು ಅಂದು ತೋರಿಸಿದನು. ಹಿಂದೂ ಮುಸಲ್ಮಾನರಲ್ಲಿ ಜಗಳವಾದರೂ ಏತಕ್ಕಿರಬೇಕು? ಎಂದು ಅವನ ಪ್ರಶ್ನೆ. ಹೇಳಿದನಾತ: "ತಮ್ಮ ತಮ್ಮಲ್ಲೆ ಬಡಿದಾಡುವವರನ್ನು ಕಂಡು ದೇವರು ಮುಖ ತಿರುಗಿಸುತ್ತಾನೆ." ಗಾಬರಿಬಡಕ ಸುದ್ದಿಗಳಲ್ಲಿ ವಿಶ್ವಾಸ ಇಡುವದು ಎಷ್ಟು ಅಪಾಯಕರವೆಂಬುದಕ್ಕೆ ಇದೇ ಸಾಕ್ಷಿ, ಎಂದರು ಗಾಂಧೀಜಿ. "ಇದೆಲ್ಲದರಿಂದ ಕಲಿಯತಕ್ಕ ಪಾಠವೇನು?" ಕೇಳಿದರವರು. "ನಾವು ಭಯಪಡಬಾರದೆಂಬುದೇ ಪಾಠ. ಏಕೆಂದರೆ, ಜನರು ಅಳುಬುರುಕರನ್ನು ಮಾತ್ರ ಹೆದರಿಸಬಲ್ಲರು. ಧೀರರನ್ನಲ್ಲ. ಆದರೆ ಹೃದಯದಲ್ಲಿ ಭಯವನ್ನಿಟ್ಟುಕೊಂಡು ಧೈರ್ಯದ ನಟನೆ ಮಾಡುವದು ಸಲ್ಲದು. ಹಾವಿನೊಡನೆ ಆಟವಾಡಿದರೂ ಯಾವ ಅಪಾಯಕ್ಕೂ ಒಳಗಾಗದ ಮಗುವಿನ ಕತೆಯನ್ನು ನೀವೆಲ್ಲ ಕೇಳಿರಬಹುದು. ಆದರೆ ಹಾವನ್ನು ಕಂಡು ಬೆದರುವ ಹಿರಿ ಮನುಷ್ಯನೊಬ್ಬನು ಹಾವಿನೊಡನೆ ಆಡಲು ಪ್ರಯತ್ನಿಸಿದರೆ, ಅದು ಅವನ ಕೈಯ ಸೋಂಕಿನಲ್ಲೇ ಭಯದ ಚಿಹ್ನವನ್ನು ಕಂಡು ಹಿಡಿದು ಅವನನ್ನು ಕಚ್ಚಿದರೂ ಕಚ್ಚಿಬಿಟ್ಟೀತು ಆದರೆ ನಿಮ್ಮಲ್ಲಿ ಭಯವಿದ್ದು ಅದನ್ನು ಕಿತ್ತೊಗೆಯಲು ಬಯಸುತ್ತಿದ್ದರೆ, ನೀವು ಯಾವುದೇ ಆಯುಧಗಳನ್ನು ಸಂಗಡ ಒಯ್ಯಬಾರದು. ಇದು ಮೊಟ್ಟಮೊದಲ ಕರಾರು. ದೇವರಲ್ಲಿ ವಿಶ್ವಾಸವಿಟ್ಟು ನಿಮ್ಮ ರಕ್ಷಣೆಯ ಭಾರ ಅವನ ಮೇಲೆ ಹೊರಿಸಿರಿ. ಭಯಗ್ರಸ್ತನಾಗಿ ಆಯುಧಗಳನ್ನು ಇಟ್ಟುಕೊಳ್ಳುವವನು ದೇವರನ್ನು ತ್ಯಜಿಸಿ ಆಯುಧಗಳನ್ನೇ ದೇವನಾಗಿ ಮಾಡಿಕೊಂಡಂತೆ."

ಹೀನಸ್ಥಿತಿ

ಹೊಸದಿಲ್ಲಿಯಲ್ಲಿ ಗಾಂಧೀಜಿಯ ಬಿಡಾರಕ್ಕೂ ನಗರ ಸಭೆಯ ಕಸಗೂಡಿಸುವವರ ವಸತಿಗೂ ನಡುವೆ ಇರುವದು ಒಂದು ಗೋಡೆ ಮಾತ್ರ. ಆದರೆ ಅವೆರಡರಲ್ಲಿ ಕಾಣುವ ಜೀವನ ಪರಿಸ್ಥಿತಿಗಳಲ್ಲಿ ಭೂಮ್ಯಾಕಾಶಗಳಷ್ಟು ಅಂತರವಿದೆ. ಕಳೆದ ಶನಿವಾರ ಬೆಳಗು ಮುಂಜಾನೆ ಆ ವಸತಿಗೆ ಭೆಟ್ಟಿಕೊಡುವ ಅವಕಾಶವನ್ನು ಗಾಂಧೀಜಿ ದೊರಕಿಸಿಕೊಂಡರು. ನಾಲ್ಕೂ ಸುತ್ತ ಒಂದೇ ಕೋಣೆಯ ಬಿಡಾರಗಳಿಂದ ಕೂಡಿದ ಒಂದು ಚೌಕಾಗಿತ್ತು ಆ ವಸತಿ. ಆ ಬಿಡಾರಗಳೆಂದರೆ ಕಲಕತ್ತೆಯ ಕತ್ತಲೆ ಕೋಣೆಯ ಚಿಕ್ಕ ಆವೃತ್ತಿಗಳು. ಗಾಳಿ ಬೆಳಕುಗಳಿಗಾಗಿ ಚಪ್ಪರದಲ್ಲಿ ಒಂದೊಂದು ಕಿಂಡಿ ಮಾತ್ರ ಇತ್ತು. ಯಾರಿಗಾದರೂ ಉಸಿರುಕಟ್ಟಿಸುವಂತಿತ್ತು ಅದು. ಹತ್ತಡಿ ಉದ್ದ ಹನ್ನೆರಡಡಿ ಅಗಲವುಳ್ಳ ಈ ಬಿಡಾರಗಳು ಕೆಲವದರಲ್ಲಿ ಒಂದು ಕುಟುಂಬದ ಆರು, ಎಂಟು, ಕೆಲವೊಮ್ಮೆ ಹತ್ತು ಜನರು ಕೂಡ ವಾಸಿಸುತ್ತಿದ್ದರು. ಅವರು ಅಲ್ಲಿ ಮರ್ಯಾದೆಯಿಂದ ಹೇಗೆ ಬಾಳುತ್ತಾರೊ ದೇವರಿಗೇ ಗೋಚರ. ಆ ಚೌಕಿನ ನಟ್ಟನಡುವೆ ಎದುರಿಗೆ ಬಾಗಿಲುಳ್ಳ ಅವ್ಯವಸ್ಥಿತ ಪಾಯಖಾನೆಗಳ ಒಂದು ಸಾಲು ಮತ್ತು ಸ್ನಾನಕ್ಕೆ ಕೆಲ ನಳಗಳು ಅನೇಕ ನಿವಾಸಿಗಳು ಬಯಲಿನಲ್ಲಿಯೇ ಮಲಗುತ್ತಿದ್ದರು. ಅವರ ಹಾಸಿಗೆಯ ಅರಿವೆಗಳು ಬಣ್ಣಿಸಲಾರದಷ್ಟು ಹೊಲಸಾಗಿದ್ದವು. ಅವರಿಗೊದಗಿಸಿದ್ದ ಸೌಕರ್ಯಗಳಲ್ಲಿ ಬೇರೆ ಹೆಗಿರಲು ಸಾಧ್ಯ? ಮರುದಿನ ಒಂದು ಸ್ವಯಂಸೇವಕ ಸಭೆಯಲ್ಲಿ ಮಾತಾಡುತ್ತ ಗಾಂಧೀಜಿಯವರು ತಮ್ಮ ಹೃದಯದಲ್ಲಿದ್ದ ಜ್ವಾಲಾರಸವನ್ನು ಹೊರಹೊಮ್ಮಿಸಿದರು. ಇದು ನನಗೂ ನಿಮಗೂ ಸೇರಿಯೇ ಲಜ್ಜಾಸ್ಪದವಾದುದು, ಎಂದರವರು. ನನ್ನ ಶಿಬಿರದಲ್ಲಿ ಮಾತ್ರ ನೀವು ಬಹಳ ಜತನದಿಂದ್ದೀರಿ. ಇದಕ್ಕಾಗಿ ನಾನು ಆಭಾರಿಯಾಗಿದ್ದೇನೆ ಆದರೆ ನನ್ನ ನೆರಹೊರೆಯವರಾದ ಈ ದೀನರಿಗಿಂತ ದೀನರನ್ನು ಸೇವಿಸದಿದ್ದ ಮೇಲೆ ನೀವು ನನ್ನ ಸೇವೆ ಮಾಡಿದ್ದರಿಂದೇನು ಫಲ? ನನ್ನ ನೆರೆಯಲ್ಲಿ ಹೊಲಸಿನಲ್ಲಿ ವಾಸಿಸುತ್ತಿರುವ ಭಂಗಿಗಳ ಸೇವೆಯನ್ನೇ ನೀವು ಮಾಡಬೇಕು ಅಂಥ ಸೇವೆಗೆ ಅದರದೇ ಆದ ಪ್ರತಿಫಲ ದೊರಕದಿರದು. ನಾನು ಕಸಗೂಡಿಸುವವರ ವಸತಿಯಲ್ಲಿ ವಾಸಿಸಲು ಬಂದಿರುವೆನಾದರೂ ಅವರಂತೆ ಹೊಲಸಿನಲ್ಲಿ ವಾಸಿಸಲಾರೆ. ಆದರೆ ಅದು ಅವರ ತಪ್ಪಲ್ಲ ಅವರನ್ನು ಆ ಸ್ಥಿತಿಗೆ ದೂಡಿದವರದು. ಅವರಿಗೆ ಒದಗಿಸುವ ವಸತಿಗಳು ಹಿಂದುಸ್ತಾನದಲ್ಲಿಯೂ ದಕ್ಷಿಣ ಆಫ್ರಿಕೆಯಲ್ಲಿಯೂ ನಾನು ಕಂಡಿರುವ ಅತಿ ಕೆಟ್ಟ ಸೆರೆಮನೆಗಳಿಗಿಂತಲೂ ಕೆಟ್ಟವಾಗಿದೆ ಭಂಗಿಗಳ ಆಶ್ರಯದಾತರು, ಶಿಕ್ಷಕರು, ಎಂಬ ಹೆಮ್ಮೆಯಿಂದ ಅವರ ವಸತಿಗಳಿಗೆ ಹೋಗದೆ ಅವರ ನಿಜವಾದ ಸೇವಕರಾಗಿಹೋದರೆ ಕ್ಷಣದಲ್ಲಿ ಅವರ ಹೃದಯಗಳನ್ನು ಸೂರೆ ಮಾಡಿ ಅಲ್ಲಿನ ವಸ್ತುಸ್ವರೂಪವನ್ನು ಬದಲಿಸಬಹುದು, ಎಂದರು ಗಾಂಧೀಜಿ.

ಹಳೆ ದಿಲ್ಲಿಯಲ್ಲಿ, ಅಜಮೀರ ಗೇಟಿನ ಬಳಿಯಿರುವ ಭಂಗಿಗಳ ಕೇರಿಗೆ ಗಾಂಧೀಜಿ ಭೆಟ್ಟಿಯಿತ್ತಾಗ ಇದಕ್ಕಿಂತಲೂ ಭಯಾನಕ ಸ್ಥಿತಿ ಕಂಡುಬಂತು. ಕೋಟೆಯ ಗೋಡೆಯ ಕೆಳಗೆ ಅವು ಎಂಟೇ ಬಿಡಾರಗಳಿದ್ದವು. ನಗರದ ಮುಖ್ಯ ಗಟಾರಕ್ಕೂ ಅದಕ್ಕೂ ನಡುವೆ ಅಗಲ ಕಿರಿದಾದ ಒಂದು ಅಂಚು ಮಾತ್ರ ಇತ್ತು. ಅದರಲ್ಲಿ ಒಬ್ಬ ಮನುಷ್ಯನಿಗೆ ಹಾಯ್ದುಹೋಗುವಷ್ಟು ಕೂಡ ಎಡೆಯಿತ್ತೊ ಇಲ್ಲವೊ? ಕೆಲ ದಿನಕೆಳಗೆ ಭಂಗಿ ಮಗುವೊಂದು ಕಾಲು ಜಾರಿ ಗಟಾರದಲ್ಲಿ ಬಿದ್ದು ಮುಳುಗಿ ಹೋಯಿತೆಂದು ಕೇಳಿದೆವು. ಬರಿ ಮಣ್ಣು ಮತ್ತು ಹಳೆ ತುಕ್ಕುಹಿಡಿದ ತಗಡಿನ ತುಂಡುಗಳಿಂದ ಭಂಗಿಗಳು ತಾವೇ ಇನ್ನು ಕೆಲ ಬಿಡಾರಗಳನ್ನು ಕಟ್ಟಿಕೊಳ್ಳುತ್ತಿದ್ದರು. ಸ್ನಾನಕ್ಕೂ ಪಾನಕ್ಕೂ ಒಂದೇ ಒಂದು ನಳವಿತ್ತು. ಅದೂ ಈಚೆಗೆ ಹಾಕಿದ್ದು. ಇಡೀ ವಸತಿ ಬಣ್ಣಿಸಲಾರದಷ್ಟು ಹೊಲಸಾಗಿತ್ತು. ಅಲ್ಲಿ ನಿಂತರೆ ಉಸಿರು ಕಟ್ಟುತ್ತಿತ್ತು. ಗಾಂಧೀಜಿಯೊಡನೆ ಆವಸತಿಗೆ ಬಂದಿದ್ದ ರಾಜಕುಮಾರಿ ಅಮೃತಕೌರಳಂತೂ ಅದನ್ನು ಸಹಿಸದಾದಳು. ಅವಳು ಕಾರಿಕೊಂಡಳು.

ಪಾಂಡವರ ಮತ್ತು ಮೊಗಲ ಬಾದಶಹರ ಗರ್ವದ ಖನಿಯಾಗಿದ್ದ ಈ ನಗರವಿಂದು ಹಿಂದುಸ್ತಾನದಲ್ಲೆಲ್ಲ ಅತಿ ಹೊಲಸುಪಟ್ಟಣವೆಂದು ಗಾಂಧೀಜಿಗೆ ತಿಳಿದುಬಂತು. ನಗರ ಸಭೆಯ ಸ್ವಚ್ಛತಾ ವ್ಯವಸ್ಥೆ ಸೀಮೆಯನ್ನು ದಾಟಿಹೋಗಿತ್ತು. ಭಂಗಿಗಳ ವಸತಿಯಲ್ಲಿ ಇದೆಲ್ಲದರ ಪ್ರತಿಬಿಂಬವನ್ನೇ ಕಾಣಬಹುದಾಗಿತ್ತು. ಏಳು ವರ್ಷ ಕೆಳಗೆ ದಿವಂಗತ ಮಹಾದೇವ ದೇಸಾಯರು ಈ ವಸತಿಯನ್ನು ಸಂದರ್ಶಿಸಿ ತೀಕ್ಷ್ಣವಾದ ವರದಿಯೊಂದನ್ನು ಪ್ರಸಿದ್ಧಿಸಿದ್ದರು. ಅಂದಿನಿಂದ ಗತಿಸಿದ ಕಾಲದಲ್ಲಿ ಸ್ಥಿತಿಗತಿ ಇನ್ನಷ್ಟು ಕೆಟ್ಟಂತೆ ತೋರುತ್ತದೆ. ಗಾಂಧೀಜಿ ಬೆಚ್ಚಿಬಿದ್ದರು. ನಗರ ಸಭಾಸದಸ್ಯರೂ ಅವರ ಆರೋಗ್ಯಾಧಿಕಾರಿಯೂ ಏನು ಮಾಡುತ್ತಿದ್ದಾರೊ! ನಗರ ಸಭೆಯ ಸಭೆಯತೆಂಗೆದಾರರು ಎಚ್ಚತ್ತು ನಗರ ಪಿತಾಮಹರಿಗೆ ಅವರ ಕರ್ತವ್ಯದ ನೆನವು ಮಾಡಿಕೊಟ್ಟರೆ ಎಷ್ಟು ಒಳಿತು!

ಇವರೊಡನೆ ಹೋಲಿಸಿದರೆ ಗಾಂಧೀಜಿ ಸಿಮ್ಲೆಗೆ ಹೊರಡುವ ಮುನ್ನ ಮಾಲವೀಯಜಿಯವರಿಗಿತ್ತ ಎರಡನೆ ಭೆಟ್ಟಿ ಗಂಗಾಸ್ನಾನದಂತೆ ಹಿತಕರವಾಗಿತ್ತು. ಅದನ್ನು ಕುರಿತು ಹೆಚ್ಚಿನದು ಮುಂದಿನ ವಾರ.

ಹೊಸದಿಲ್ಲಿ — ಪ್ಯಾರೇಲಾಲ

೧—೫—೪೬

ನಿರ್ದಯತೆ

ಕೆಲ ಪ್ರವಾಸಿಗಳು ರೇಲ್ವೆ ಅಧಿಕಾರಿಗಳಿಗೆ ಬರೆದುಕೊಂಡ ಪತ್ರದ ಸಾರವು ಇಂತಿದೆ.

"ಪುಣೆಗೆ ರಾತ್ರಿ ೧೦—೧೯ ಗಂಟೆಗೆ ಬಂದಿರುವ 'ಹುಬ್ಬಳ್ಳಿ ಮೇಲಿ'ನಲ್ಲಿಯ ಪ್ರವಾಸಿಕರಾದ ನಾವು ತಮಗೆ ಈ ರೀತಿ ಬರೆಯಲಪೇಕ್ಷಿಸುತ್ತೇವೆ. ನಾವು ಕುಳಿತ ಡಬ್ಬಿಯು ೩೮ ಪ್ರವಾಸಿಕರಿಗಾಗಿ ಇದ್ದು ಅದರಲ್ಲಿ ೮೦ ಜನ ಕುಳಿತಿರುವರಲ್ಲದೆ ಭಾರವಾದ ಗಂಟುಗದಡಿಗಳೂ ಇರುವವು. ಉಗಿಬಂಡಿಗಳಲ್ಲಿ ಸ್ಥಾನವಿದೆಯೋ ಇಲ್ಲವೋ ಎಂದು ಮೇಲ್ವಿಚಾರಣೆಯೇಕಿಲ್ಲೆಂಬುದೆ ನಮಗೆ ತಿಳಿಯದಾಗಿದೆ.

ದಂತಕತೆಯಲ್ಲಿಯ "ಕಲಕತ್ತೆಯ ಕತ್ತಲೆ ಕೋಣೆ"ಯ ಜತೆ ನಮ್ಮ ಪರಿಸ್ಥಿತಿಯನ್ನ ತುಲನೆ ಮಾಡಬಹುದಾಗಿದೆ. ನಮ್ಮ ಉಸುರುಗಟ್ಟಿಹತ್ತಿದೆ. ಹೆಣ್ಣುಮಕ್ಕಳು ಮತ್ತು ಚಿಕ್ಕ ಮಕ್ಕಳು ಸಾಯುವ ಸ್ಥಿತಿಯಲ್ಲಿದ್ದಾರೆ. ಮೂರನೆ ವರ್ಗದ ಪ್ರವಾಸಿಕರನ್ನು ಚೆನ್ನಾಗಿ ನಡೆಸಿಕೊಳ್ಳುತಿರುವ ರೀತಿಯು ಇದೇಯಾಗಿದೆ?

ತಕರಾರು ಅತ್ಯಂತ ಉಚಿತವಾಗಿದೆ. ಮೇಲೆ ವರ್ಣಿಸಿದ್ದು ನಿತ್ಯಶಃ ಅನುಭವಿಸತಕ್ಕ ಮಾತಾಗಿದೆ ಮೂರನೆ ವರ್ಗದ ಪ್ರವಾಸಿಕರ ರೊಕ್ಕದಿಂದಲೆ ಕೊಬ್ಬುತ್ತಿರುವ ರೇಲ್ವೆಗಳು ಈ ಬಡಜನರ ಸುಖಸೌಕರ್ಯಗಳತ್ತ ಗಮನಿಸುವವೋ? ಮೂರನೇ ವರ್ಗದ ಡಬ್ಬಿಗಳಲ್ಲಿ ಮತ್ತು ಮೂರನೆ ವರ್ಗದ ಪ್ರವಾಸಗಳಲ್ಲಿ ಕೂಡಲೆ ಆಮೂಲಾಗ್ರ ಬದಲಾವಣೆಯಾಗಬೇಕಾಗಿದೆ. ಜನತೆಯ ದೃಷ್ಟಿಯಿಂದ ವಿಚಾರ ಮಾಡುತ್ತಿರುವ ಸರಕಾರ ಬೇಗನೆ ಅಸ್ತಿತ್ವದಲ್ಲಿ ಬರುವದು ಅತ್ಯವಶ್ಯವಾಗಿದೆ.

ಹೊಸದಿಲ್ಲಿ — ಅ. ಕೌ.

೨೭—೪—೪೬

ಚರ್ಚಿಲ್ಲರ ಭಾಷಣದ ಸಾರ

(೯ನೇ ಪುಟದಿಂದ ಮುಂದರಿದುದು)

ಮಾನವನ ಉತ್ಸಾಹಶಕ್ತಿಯೆಲ್ಲ ವ್ಯಯವಾಗಿಬಿಟ್ಟಿದೆ. ನಮ್ಮ ರಕ್ತವನ್ನೆಲ್ಲ ಅದು ಶೋಷಿಸಿ ನಮ್ಮನ್ನು ಅತ್ಯಂತ ನಿರ್ಜೀವರನ್ನಾಗಿ ಮಾಡಿಬಿಟ್ಟಿವೆ.

ಮಾನವನ ಸ್ಫೂರ್ತಿಯ ಸೆಲೆಯೆ ಇಂದು ಬತ್ತಿಹೋಗಿದೆ. ಇದರ ಪುನರುಜ್ಜೀವನಕ್ಕೆ ಕಾಲಾವಧಿ ಬೇಕು. ಸದ್ಯದ ಗಂಡಾಂತರ ಪ್ರಸಂಗದಲ್ಲಿ ಮಾನವರು ಸಂಪೂರ್ಣ ಹಳೆಯ ಮತ್ತು ಪ್ರಾಚೀನ ಪದ್ಧತಿಯನ್ನನುಸರಿಸದೆ ಹೊಸ ಜಗಳಗಳನ್ನಾಗಲಿ ಇಲ್ಲವೆ ಆಘಾತವನ್ನಾಗಲಿ ಸಹಿಸಲಾರರು.

ಅತ್ಯಂತ ಕಠಿನವಾದ ಕಾಲವನ್ನು ಕ್ರಮಿಸಿ ಬಹಳ ದುಃಖಕ್ಕೀಡಾಗಿ ಅದುಹೇಗೋ ನಾವು ಸ್ವಲ್ಪದರಲ್ಲಿ ಪಾರಾಗಿರುವೆವು. ಆದರೆ ನಮ್ಮಲ್ಲಿ ಮನೆಮಾಡಿಕೊಂಡ ದ್ವೇಷ ಮತ್ತು ಗೊಂದಲಗಳು ಇವಕ್ಕೂ ಕಠಿಣವಾದ ಪರೀಕ್ಷೆಗೆ ನಮ್ಮನ್ನು ಈಡು ಮಾಡಲಿಲಿಕ್ಕಿಲ್ಲೆಂಬುದನ್ನು ನಾವರಿಯೆವು.

ಅನೇಕರಾಷ್ಟ್ರಗಳಲ್ಲಿ ಅವಶ್ಯಕ ಸಂಯುಕ್ತಪ್ರಯತ್ನಗಳು ನಡೆಯದಂತಹ ಪರಿಸ್ಥಿತಿಯುಂಟಾಗಿದೆ. ಪಕ್ಷಪಂಗಡಗಳ ತಿಕ್ಕಾಟ ಎಲ್ಲೆಲ್ಲಿಯೂ ತಲೆಯೆತ್ತಿದೆ. ಪಕ್ಷಾಂಧರು ಪರಸ್ಪರ ವಿರುದ್ಧ ಧ್ಯೇಯ ಧೋರಣೆಗಳಿಗಾಗಿ ಒಬ್ಬರಿಗೊಬ್ಬರು ಕಚ್ಚಾಡುತ್ತಿರುವರು.

ಇಷ್ಟೆಲ್ಲ ನಡೆದಿರುವಾಗ ಪ್ರತಿಯೊಂದು ರಾಷ್ಟ್ರದ ಜನಸಾಮಾನ್ಯರು ದಯಾಪೂರಿತರಾಗಿ ಎಲ್ಲವನ್ನು ಶೂರರಂತೆ ಸಹಿಸುತ್ತ ತಮ್ಮ ಬಾಂಧವರ ಸೇವೆಗೆ ಸನ್ನದ್ಧರಾಗಿರುವರು. ಆದರೂ ಯುಗಾಂತರಗಳಲ್ಲಿ ರಾಜ ಮಹಾರಾಜರು ಇರುವಾಗಿನ ಸಮಯದಲ್ಲಿಯಂತೆ ಜನಸಾಮಾನ್ಯರನ್ನು ಸೈನಿಕರು ಸಂಸ್ಥೆಗಳು ಇಲ್ಲವೆ ತತ್ವಗಳು ಬೇಕಂತಲೆ ಹೋರಾಡ ಹಚ್ಚುತ್ತಾನೆ.

ಇದೆಲ್ಲ ರೋಗನಿವಾರಣೆಯಾಗಬೇಕಾದರೆ ಹೆಚ್ಚು ಕಾಲದ ಪರಮಾತ್ಮನ ಮತ್ತು ಮಾನವನ ವಿರಾಮ ಕಾಲದ ಅವಶ್ಯಕತೆ ಈಗಿನಷ್ಟು ಹಿಂದೆಂದೂ ಇರಲಿಲ್ಲ.

(ಸ್ಟೇಟ್ಸಮನ್ ಎಪ್ರಿಲ ೨೯—೧೯೪೬)

ಕ ರ್ನಾ ಟ ಕ

ಧಾರವಾಡ

ಜಿಲ್ಲಾ ಮಹಿಲಾ ಮಂಡಲದವರು ಶ್ರೀಮತಿ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಸಾಂಬ್ರಾಣಿಯವರಿಗೆ ಶಾಸನ ಸಭೆಗೆ ಆರಿಸಿ ಬಂದುದಕ್ಕೆ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಸಭೆ ಸೇರಿಸಿ ಸನ್ಮಾನ ಮಾಡಿದರು. ಶ್ರೀಮತಿಯವರು ಉತ್ತರ ಕೊಡುತ್ತ ಕರ್ನಾಟಕದ ಉನ್ನತಿ, ಮಹಿಳೆಯರ ಹಿತ ಹಾಗು ಹರಿಜನರ ಏಳಿಗೆಗಾಗಿ ತಾವು ದುಡಿಯುವದಾಗಿ ತಿಳಿಸಿದರು.

...ಹಾಬಾದ ಹತ್ತರ ಮೇಲಗಾಡಿ ಲೂಟಿ ಮಾಡಿದ ಆರೋಪಕ್ಕಾಗಿ ೯ ವರ್ಷ ಶಿಕ್ಷೆಗೊಳಗಾಗಿ ಬರೇಲಿ ಜೇಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಕ್ರಾಂತಿಕಾರರಾದ ಹಾವೇರಿಯ ಶ್ರೀ ವ್ಹಿ ಜಿ ಅಂಗಡಿಯವರು ಅನಿರ್ಬಂಧ ಬಿಡಲ್ಪಟ್ಟಿದ್ದಾರೆ. ಜೋಗೇಶಚಂದ್ರ ಚಟರ್ಜಿಯವರ ಉಪವಾಸಕ್ಕೆ ಸಹಾನುಭೂತಿಪರವಾಗಿ ಇವರೂ ಉಪವಾಸ ಕೈಕೊಂಡಿದ್ದರು.

ಬೆಟಗೇರಿಯಲ್ಲಿ ನೀಲಕಂತಪ್ಪ ನರೇಗಲ್ಲ ಅವರ ಮನೆಯಲ್ಲಿ ಜೂಜಾಡುತ್ತಿದ್ದ ೧೧ ಜನರನ್ನು ಸಬ್‌ಇನಸ್ಪೆಕ್ಟರ ಬೆತಾವಾಲಾರವರು ಹಿಡಿದು ಖಟ್ಲೆಗೆ ಗುರಿಪಡಿಸಿದ್ದಾರೆ.

ಹಾಲಕೇರಿ ಅನ್ನದಾನಿ ಸ್ವಾಮಿಗಳ ಹಡಗಲಿ ಮಠದಲ್ಲಿ ಅಕ್ಕಮಹಾದೇವಿ ಉತ್ಸವವು ೮ ದಿನಗಳ ವರೆಗೆ ವಿವಿಧ ಕಾರ್ಯಕ್ರಮಗಳಿಂದ ಸಾಂಗವಾಯಿತು.

ಶ್ರೀಮಂತ ನಾನಾಸಾಹೇಬ ನಾಡಗೀರ ಕುಂದಗೋಳ ಅವರು ನವಲಗುಂದ ಮಾಡೆಲ ಹಾಯಸ್ಕೂಲಿಗೆ ಭೆಟ್ಟಿ ಕೊಟ್ಟು ಸಂತೋಷ ಪ್ರದರ್ಶಿಸಿ ೧೦೧ ರೂ. ಕೊಟ್ಟರು.

ಅಖಿಲ ಕರ್ನಾಟಕ ಏಕೀಕರಣ ಸಂಘದವರು ಪ್ರಾಂತ ಮಂತ್ರಿತ್ರಯರಿಗೆ ಏಕೀಕರಣದ ಅಗತ್ಯ ನಿವೇದಿಸಿ ಒಂದು ಮನವಿ ಕಳಿಸಿದ್ದಾರೆ.

ಹಿರೇಕೆರೂರ ತಾಲೂಕ ಹಳ್ಳೂರಲ್ಲಿ ತಾ ೨೩ ನೇ ದಿನ ೬೦—೭೦ ಮನೆಗಳು ಸುಟ್ಟು ಸುಮಾರು ೫೦ ಸಾವಿರ ರೂಪಾಯಿ ಹಾನಿಯಾಗಿರುವದೆಂದು ತಿಳಿಯುತ್ತದೆ. ಜನರು ಇಟ್ಟುಕೊಂಡ ಅಲ್ಪಸ್ವಲ್ಪ ಕಾಳಕಡಿ, ಬಟ್ಟೆಬರೆ, ನೋಟು ಸುಟ್ಟು ಹೋಗಿ ಜನರು ಅನ್ನಾನ್ನಗತಿಕರಾಗಿದ್ದಾರೆ.

ಶ್ರೀ ಗೊರವನಕೊಳ್ಳ ಫೌಜದಾರರು (ಪೂರೈಕೆ ಖಾತೆ) ಅಪ್ಪಣೆ ಚೀಟಿಯಿಲ್ಲದೆ ಕಲಘಟಗಿಯಿಂದ ಹುಬ್ಬಳ್ಳಿಗೆ ಅಕ್ಕಿ ಸಾಗಿಸಿದ್ದರಿಂದ ಹುಬ್ಬಳ್ಳಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಅವರಿಗೆ ೧ ದಿನದ ಕಠಿಣ ಶಿಕ್ಷೆ ಹಾಗು ೩೦೦ ರೂ ದಂಡ ವಿಧಿಸಿದರು. ರಾಮನಾಳದ ಪೋಲೀಸ ಪಾಟೀಲನು ಇದನ್ನು ಹಿಡಿದುಕೊಟ್ಟಿದ್ದನು.

ಕರ್ನಾಟಕದಿಂದ ಕಾಂಗ್ರೆಸ್ಸಿಗೆ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ೭೩ ಜನರ ಹೆಸರುಗಳನ್ನು ಕಾರ್ಯದರ್ಶಿಗಳು ಜಾಹೀರ ಮಾಡಿರುವರು. ಆರಿಸಿ ಬಂದವರಲ್ಲಿ ಶ್ರೀಯುತರಾದ ಎಂ ಪಿ ಪಾಟೀಲ, ಕಾರಂತ, ಕೆ ಎಫ್ ಪಾಟೀಲ, ದಿವಾಕರ, ಕಮಲಾದೇವಿ, ಯು ಶ್ರೀನಿವಾಸ ಮಲ್ಯ, ಅಂಬಲಿ, ಎಸ್ ನಿಜಲಿಂಗಪ್ಪ, ಮುಂಡಗಿ ವಕೀಲ, ಮುನವಳ್ಳಿ ವಕೀಲ, ಟಿ ಆರ್ ನೇಶ್ವಿ, ಅಬ್ದುಲ ಅಜೀಜ ಧಾಲಾಯತ, ಟಿ ಎಸ್ ನಾಯಿಕ, ಬಿ ಎಸ್ ಮಾವಿನಕುರ್ವೆ, ಕೆ ಟಿ ಭಾಷ್ಯ, ಮೊದಲಾದವರು ಪ್ರಮುಖರಿರುವರು. ಇನ್ನೂ ಕೆಲವು ಸ್ಥಳಗಳ ಫಲಿತಾಂಶ ಹೊರಬೀಳಲಿದೆ.

ನೊರಬ, ಗುಡಿಸಾಗರ, ಶಲವಡಿ, ಕಲಕೇರಿ ಹಳ್ಳಿಗಳಲ್ಲಿ ಬರಗಾಲ ಕೆಲಸಗಾರರಿಗೆ ಎರಡು ವಾರಗಳಿಂದ ಕೂಲಿ ಕೊಟ್ಟಿಲ್ಲವಾದ್ದರಿಂದ ಅವರು ಧಾನ್ಯಕೊಳ್ಳಲು ಹಣವಿಲ್ಲದೆ ಗೋಳಾಡುತ್ತಿರುವರು.

ಧಾರವಾಡ ತಾಲೂಕ ಮರೇವಾಡ ಬಸವೇಶ್ವರ ಜಾತ್ರೆಯನ್ನು ಪ್ಲೇಗ ಬೇನೆ ಮೂಲಕ ೨ ತಿಂಗಳ ಪ್ರತಿಬಂಧಿಸಲಾಗಿದೆ.

ಉತ್ತರ ಕನ್ನಡ

ಜಿಲ್ಲಾ ಕಿಸಾನ ಸಂಘದ ಧರ್ಮವೀರ ಸಿಂಗ, ಎಸ್. ಜಿ. ಮ್ಹಾಳ್ಸೇಕರ, ಪಿ. ಜಿ. ನಾಯಿಕ ಹಾಗು ಸಯ್ಯದ ಯುಸೂಫ ಅವರ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟರು ನೋಟೀಸ ಪ್ರಯೋಗಿಸಿ ಪ್ರತಿಯೊಬ್ಬರಿಂದ ಒಳ್ಳೆ ನಡತೆ ಬಗ್ಗೆ ೫೦೦೦ ರೂ. ಜಾಮೀನ ಹಾಗು ಅಷ್ಟೇ ಬೆಲೆಯ ಎರಡು ಜಾತ ಮುಚ್ಚಳಿಕೆ ಏಕೆ ತೆಗೆದುಕೊಳ್ಳಬಾರದೆಂಬುದಕ್ಕೆ ಕಾರಣ ತೋರಿಸಲು ಹೇಳಿದ್ದಾರೆ.

ಜಿಲ್ಲಾ ೨ನೇ ಸಾಹಿತ್ಯ ಸಮ್ಮೇಲನವು ಮೇ ೨೨–೨೩ ದಿವಸ ಶ್ರೀ. ಕೊ. ಶಿ. ಕಾರಂತರ ಅಧ್ಯಕ್ಷತೆಯಲ್ಲಿ ಜರುಗುವದು.

ಸಿರ್ಸಿ ಮಾರಿಕಾಂಬಾ ಆಸ್ಪತ್ರೆಯಲ್ಲಿ ಓರ್ವಳು ತಲೆ ಪೂರ್ಣವಾಗದ ಕೂಸು ಹಡೆದು ಮಿದುಳು ಕಾಣಿಸುತ್ತಿರುವದು. ಜನರು ತಂಡ ತಂಡವಾಗಿ ಬಂದು ನೋಡಿ ಹೋದರು.

ಬೆಳಗಾವಿ

ಸವದತ್ತಿ ನಗರ ಸಭೆಗೆ ಕೆಳಗಿನವರು ಆರಿಸಿ ಬಂದಿರುವರು. ೧ ಎಚ್. ವಿ. ಕೌಜಲಗಿ ೨ ರಾಮರಾವ ಯಾದವಾಡ ೩ ಎಚ್. ಜಿ ಹಂಪಣ್ಣವರ ೪ ರಾಯಪ್ಪ ಬರಗಾಲ ೫ ಫಟಿಗೆಪ್ಪಗೌಡ ಪಾಟೀಲ ೬ ರಾ. ಸಾ. ಬಿ. ಎಸ್. ಹಂಪಣ್ಣವರ ೭ ಡಾ ವ್ಹಿ. ಜಿ ಬಾಡಗಂಡಿ ೮ ದತ್ತಾತ್ರಯ ಸವದತ್ತಿ ೯ ಶಿವಲಿಂಗವ್ವ ಯರಗಂಬಳಿಮಠ ೧೦ ಮಲ್ಲೇಶಪ್ಪ ಗಾಡಗೋಳಿ ೧೧ ಮಲ್ಲಿಕಾರ್ಜುನಪ್ಪ ಮಾಮನಿ ೧೨ ರುದ್ರಪ್ಪ ಹೊಲೇರ ೧೩ ರಾ. ಸಾ. ಪರಸನಗೌಡ ತಿಪರಾಸಿ ೧೪ ಆರ್ ವ್ಹಿ ಕಾರಡಿಗಿ ೧೫ ಶಿವಪುತ್ರಪ್ಪ ಜಕಾತಿ ೧೬ ಕಾಶೀಮಸಾಹೇಬ ಹೊರಕೇರಿ ೧೭ ಕಾಶೀಮಸಾಹೇಬ ಶಹಾಪುರ.

ಮೇ ತಿಂಗಳಲ್ಲಿ ಕಾಗವಾಡದಲ್ಲಿ ಅ. ಭಾ. ರಾಷ್ಟ್ರೀಯ ಹರಿಜನರ ಪರಿಷತ್ತು ಕೂಡಿಸುವ ವಿಚಾರ ನಡೆದಿದೆ.

ಓ. ಜೆ. ರಬೆಲೊ ಅವರು ಬೆಳಗಾವ ವಿಜಾಪುರ ಜಿಲ್ಲೆಗಳಿಗೂ ಜೆ. ಎ. ಸಾಲಢಾಣಾ ಅವರು ಧಾರವಾಡ ಕಾರವಾರ ಜಿಲ್ಲೆಗಳಿಗೂ ಮಾರಾಟ ಕರ ಅಧಿಕಾರಿಗಳಾಗಿ ನೇಮಕ ಹೊಂದಿದ್ದಾರೆ.

ಲೋಕಮಾನ್ಯ ಪರ್ಸಫಂಡ ಟ್ರಸ್ಟಿನ ಸಭೆ ತಾ ೨೮ ನೇ ದಿನ ಬೆಳಗಾವಿಯಲ್ಲಿ ಶ್ರೀ ಬೆಳವಿಯವರ ಅಧ್ಯಕ್ಷತೆಯಲ್ಲಿ ಜರುಗಿ ಧರ್ಮದರ್ಶಿಗಳ ೨ ಸ್ಥಳಗಳಿಗೆ ಶ್ರೀ ರಾ. ಶ್ರೀ ಹುಕ್ಕೇರಿಕರ ಹಾಗು ಸ ಲ ಸೋಮಣರನ್ನು ಆರಿಸಲಾಯಿತು. ಮತ್ತು ಈ ಸಲದ ಮ್ಯಾಟ್ರಿಕ ಪರೀಕ್ಷೆಯಲ್ಲಿ ಉತ್ತರ ಕರ್ನಾಟಕದ ೪ ಜಿಲ್ಲೆಗಳ ಹರಿಜನರಲ್ಲಿ ಆ ಆ ಜಿಲ್ಲೆಗಳಿಗೆ ಮೊದಲನೆ ನಂಬರ ಬರುವ ವಿದ್ಯಾರ್ಥಿಗೆ ೧೦ ರೂಪಾಯಿಯಂತೆ ೧ ವರ್ಷದ ವರೆಗೆ ಶಿಷ್ಯವೃತ್ತಿ ಕೊಡುವದು, ಖಾಸಗಿ ಪ್ರಾಥಮಿಕ ಶಾಲೆಗಳ ಬಗ್ಗೆ ಪ್ರತಿ ಜಿಲ್ಲೆಗೆ ೨೫೦ ರೂಪಾಯಿ ಕೊಡುವದು, ಹಣಮಂತರಾವ ಕೌಜಲಗಿ ಸ್ಮಾರಕನಿಧಿಗೆ ೨೫೦ ರೂಪಾಯಿ ಕೊಡುವದು, ಹೊನ್ನಾವರದಲ್ಲಿ ಕೂಡುವ ರಚನಾತ್ಮಕ ಕಾರ್ಯಕರ್ತರ ಸಮ್ಮೇಲನಕ್ಕೆ ೩೦೦ ರೂ ಕೊಡುವದು, ಹಳ್ಳಿಗರ ಕೈಪಿಡಿ ಪುನರಾವೃತ್ತಿ ಮುದ್ರಣಕ್ಕೆ ೫೦೦ ರೂಪಾಯಿ ಮಂಜೂರ ಮಾಡುವದು ಗೊತ್ತಾಯಿತು.

ಚಿಕ್ಕೋಡಿ ಪೂರ್ವ ಭಾಗದ ಮತ್ತು ನೆರೆಯ ಸಂಸ್ಥಾನಗಳ ಹಳ್ಳಿಗಳ ಕಾರ್ಯಕರ್ತರು ಮಾಂಜರಿಯಲ್ಲಿ ಶ್ರೀ ಪುಂಡಲೀಕರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗ್ರಾಮ ಸೇವಾ ಸಂಘ ಸ್ಥಾಪಿಸಿದರು. ಶ್ರೀ ಭೂಪಾಲ ವಣಕುದ್ರಿಯವರು ಅಧ್ಯಕ್ಷರಾಗಿಯೂ ಶ್ರೀ ಅಪ್ಪಾಸಾಹೇಬ ಪಾಟೀಲರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಗೋಕಾಕ ಸಾವಳಗಿ ಮಠದಲ್ಲಿ ಅಕ್ಕನ ಜಯಂತಿ ಉತ್ಸವವು ಎರಡು ದಿನ ಬಸವೇಶ್ವರ ವಚನ, ಉಪನ್ಯಾಸ ಮೊದಲಾದ ಕಾರ್ಯಕ್ರಮಗಳಿಂದ ಸಾಂಗವಾಯಿತು.

ಜಿಲ್ಲಾ ಗ್ರಾಮಪಂಚಾಯತಿಗಳ ಸೆಕ್ರೆಟರಿಗಳ ಸಭೆಯು ತಾ ೨೮ ನೇ ದಿನ ಬೆಳಗಾವಿಯಲ್ಲಿ ಜಿಲ್ಲಾ ಬೋರ್ಡ ಚೀಫ ಆಫೀಸರರ ಅಧ್ಯಕ್ಷತೆಯಲ್ಲಿ ಜರುಗಿ, ಸೆಕ್ರೆಟರಿಗಳಿಗೆ ೨೫—೩—೪೦ ೨—೫೦ ಈ ಸಂಬಳ ಪ್ರಮಾಣ ಗೊತ್ತುಮಾಡಬೇಕು, ಪ್ರಾವಿಡೆಂಟ ಫಂಡ ವ್ಯವಸ್ಥೆ ಮಾಡಬೇಕು, ಮೊದಲಾಗಿ ಕೇಳಿಕೊಳ್ಳಲಾಯಿತು.

ಜಿಲ್ಲಾ ಮ್ಯಾಜಿಸ್ಟ್ರೇಟರು ಒಂದು ತಾಲೂಕಿನಿಂದ ಅಥವಾ ಮಹಾಲದಿಂದ ಬೇರೆ ತಾಲೂಕ ಅಥವಾ ಮಹಾಲಿಗೆ ಚುರುಮುರಿ ಮತ್ತು ಅವಲಕ್ಕಿ ಕಳಿಸುವದಕ್ಕೆ ಪ್ರತಿಬಂಧಿಸಿದ್ದಾರೆ ಆದರೆ ಪ್ರಯಾಣಿಕರು ತಮ್ಮ ಸಂಗಡ ೪ ಸೇರು ಒಯ್ಯಬಹುದು.

ವಿಜಾಪುರ

ಬೀಳಗಿ ಪೇಠಾ ತೋಳಮಟ್ಟಿ ಉಗ್ರಾಣಾಧಿಕಾರಿಯು ಹೆರಕಲ್ಲಿನ ಸಾತಪ್ಪ ಎಂಬವನಿಂದ ಅವನು ಮಹಾಲಕರಿಯವರ ಪರಮಿಟ್ ತಂದಿದ್ದರೂ ಜೋಳದ ಚೀಲ ಪೂರೈಸಲು ಲಂಚ ತೆಗೆದುಕೊಂಡದ್ದು ತಿಳಿದು ಬಂದಿದ್ದರಿಂದ ಬಾಗಲಕೋಟೆ ಕಾಂಗ್ರೆಸ ಕಮೀಟಿ ಅಧ್ಯಕ್ಷರು ಕಲೆಕ್ಟರರಿಗೂ ಮಂತ್ರಿಗಳಿಗೂ ತಂತಿ ಕಳಿಸಿ ಅಧಿಕಾರಿಯನ್ನು ವರ್ಗಾಯಿಸಲು ಹಾಗು ವಿಚಾರಣೆ ನಡೆಸಲು ಕೇಳಿದ್ದಾರೆ.

ವಿಜಾಪುರ ಜನರಲ್ ಟ್ರಾನ್ಸಪೋರ್ಟ ಟ್ರಕ್ ಕಂಪನಿಯ ಡ್ರಾಯವ್ಹರರು ಹಾಗು ೮೫ ಕೆಲಸಗಾರರು ಸಂಬಳ ಹಾಗು ತುಟ್ಟಿಭತ್ತೆ ಹೆಚ್ಚಿಸಬೇಕೆಂದು ತಾ. ೨೭ ರಿಂದ ಸಂಪು ಹೂಡಿದ್ದಾರೆ. ಇದರಿಂದ ೩೦ ಟ್ರಕ್ಕುಗಳು ನಿಂತುಹೋಗಿವೆ

ಏಕೀಕರಣ ಪ್ರಚಾರಕರಾದ ಶ್ರೀ ಹೊನ್ನಾಪುರಮಠರವರು ತಾ. ೨೩ ನೇ ದಿನ ಚಡಚಣದಲ್ಲಿ ಏಕೀಕರಣ ಕುರಿತು ಭಾಷಣ ಮಾಡಿದರು. ಕರ್ನಾಟಕ ಸಂಘದವರು ೫೧ ರೂ. ಪ್ರಚಾರಕ್ಕೆ ಕೊಟ್ಟರು.

ಲಿಂಗರಾಜ ಕಾಲೇಜಿನಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿರುವ ಶ್ರೀ ಟಿ ಕೆ ಪಾಟೀಲರು ವಿಜಾಪುರ ವಿಜಯ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಟಿ ರುಬೇನರು ಹ್ವಾಯಿಸ ಪ್ರಿನ್ಸಿಪಾಲರಾಗಿಯೂ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತದೆ.

ಶ್ರೀ ಹೊನ್ನಾಪುರಮಠ ವಕೀಲರು ಸಾಲೋಟಗಿಯಲ್ಲಿ ಶ್ರೀ ಶಿವಯೋಗಿಸ್ವಾಮಿ ಉತ್ಸವದಲ್ಲಿ ಸಭೆ ಜರುಗಿಸಿ ಕರ್ನಾಟಕ ಏಕೀಕರಣ ಹಾಗು ಪ್ರಾಂತೀಕರಣ ವಿಷಯವಾಗಿ ಭಾಷಣ ಮಾಡಿದರು. ಏಕೀಕರಣ ಸಂಘ ಸ್ಥಾಪಿಸಲ್ಪಟ್ಟಿತು. ಇವರಂತೆ ಭತಗುಣಕಿಯಲ್ಲಿ ಅವರ ಭಾಷಣವಾಗಿ ಶ್ರೀಮಂತ ಇನಾಮದಾರರ ಅಧ್ಯಕ್ಷತೆಯಲ್ಲಿ ಸಂಘ ಸ್ಥಾಪನೆಯಾಯಿತು.

ಹಿಂದುಸ್ತಾನ

ಮುಂಬಯಿ

ಮುಂಬಯಿ ಸರಕಾರದವರು ಮಂತ್ರಿಗಳಿಗೆ ಗೌರವ ಸೂಚಕವಾಗಿ ಅವರ ಹೆಸರಿನ ಹಿಂದೆ ಬರೆಯುತ್ತಿದ್ದ "ಮಾನ್ಯ" (ಅನರೇಬಲ್) ಪದವಿಯನ್ನು ರದ್ದುಗೊಳಿಸಿರುವರು.

ಪ್ರತಿಯೊಬ್ಬ ಹಿಂದೀಯನಿಗೆ ಅವನು ಎಲ್ಲಿಯೇ ಇರಲಿ ಇತರರಂತೆ ಸ್ಥಾನಮಾನ ದೊರೆತ ಹೊರತು ತಮಗೆ ಸಮಾಧಾನವಿಲ್ಲೆಂದೂ ದಕ್ಷಿಣ ಆಫ್ರಿಕೆಯಲ್ಲಿಯ ವರ್ಣದ್ವೇಷ ಕಾಯದೆ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರಸಂಘದಲ್ಲಿ ತರಲಾಗುವದೆಂದೂ ಡಾ ಖರೆಯವರು ಅಮೃತಲಾಲ ಸೇಟರು ಏರ್ಪಡಿಸಿದ ಸತ್ಕಾರ ಸಮಾರಂಭದಲ್ಲಿ ಹೇಳಿದರು.

ಮಹಾತ್ಮಾ ಗಾಂಧಿಯವರ ಸ್ವಾತಂತ್ರ್ಯಪ್ರೇರಕ ವಿಚಾರ ಹಾಗು ದಿವಂಗತ ಶಿವರಾಮ ಮಹಾದೇವ ಪರಾಂಜಪೆಯವರ ಕಾಳಾಂತೀಲ ನಿವಡಕ ನಿಬಂಧ ಈ ಎರಡು ಮರಾಠಿ ಪುಸ್ತಕಗಳ ಮೇಲಿನ ಜಪ್ತಿ ಹುಕುಮನ್ನು ಸರಕಾರದವರು ಹಿಂತೆಗೆದುಕೊಂಡಿರುವರು.

ಅನಿರ್ಬಂಧ ಅಧಿಕಾರ ಹಾಗು ಮೇಲ್ವಿಚಾರಣೆ ಇಲ್ಲದಿರುವದೇ ಲಂಚಗುಳಿತನಕ್ಕೆ ಮೂಲವಾಗಿದೆ. ಅಧಿಕಾರಿಗಳಲ್ಲಿ ಉಚ್ಛೃಂಖಲವೃತ್ತಿ ಹಾಗು ಲಂಚಗುಳಿತನ ಬಹಳ ಬೆಳೆದಿರುವದು. ಸಾರ್ವಜನಿಕರು ಅವುಗಳ ನಿರ್ಮೂಲನದಲ್ಲಿ ಸಹಾಯ ಮಾಡಬೇಕು ಎಂದು ಗೃಹಮಂತ್ರಿಗಳಾದ ಮುರಾರಜಿಯವರು ತಿಳಿಸಿರುವರು.

ಮುಂಬಯಿಯಿಂದ ಈಗ ಅ. ಭಾ. ಆಕಾಶವಾಣಿಯಲ್ಲಿ ಬೀರಲಾಗುವ ಗ್ರಾಮಾಂತರ ಕಾರ್ಯಕ್ರಮಗಳನ್ನು ಆಮೂಲಾಗ್ರ ಬದಲು ಮಾಡಲು ಸರಕಾರದವರು ವಿಚಾರ ನಡೆಸಿದ್ದಾರೆ.

ರಜಿಸ್ಟರ್ಡ. ವ್ಯಾಪಾರಿಗಳು ಸಪ್ಟೆಂಬರ ೩೦ ರ ನಂತರ ಮಾರಾಟ ಕರಕ್ಕೆ ಹೊಣೆಯಾಗುವರೆಂದು ಸರಕಾರದ ಪ್ರಕಟನೆ ಹೊರಟಿದೆ.

ಮುಂಬಯಿ ಸೀದಾ ಕಚೇರಿ ಸಾರ್ವಜನಿಕ ಸಂಬಂಧ ಅಧಿಕಾರಿಗಳಾಗಿದ್ದ ಶ್ರೀ ಜಿ. ಜಿ. ಗೋಖಲೆಯವರು ಸುದ್ದಿ ಖಾತೆಯ ತಾತ್ಪೂರ್ತಿಕ ಡಾಯರೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಹೆಚ್ಚು ಪ್ರವಾಸಿಕರನ್ನು ತುಂಬುವ ಮೋಟಾರಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರದವರು ಆಜ್ಞೆ ಹೊರಡಿಸಿದ್ದಾರೆ.

ಸರಕಾರದವರು ತಮ್ಮ ನೌಕರರ ತುಟ್ಟಿಭತ್ತೆಯನ್ನು ಎಪ್ರಿಲದಿಂದ ಮತ್ತೆ ೪ ರೂ. ಹೆಚ್ಚು ಮಾಡಿದ್ದಾರೆ.

ಸಾಂಗಲಿ ವಿಲಿಂಗಡನ್ ಕಾಲೇಜದ ಹಿಂದಿನ ಪ್ರಿನ್ಸಿಪಾಲರಾದ ಜಿ ಸಿ ಭಾಟೆಯವರು ತಾ. ೨೬ನೇ ದಿನ ಪುಣೆಯಲ್ಲಿ ನಿಧನಹೊಂದಿದರು.

ಮದ್ರಾಸ

ಬಂಗಾಲ ಸರಕಾರದವರು ಹಿಂದುಸ್ತಾನ ಸರಕಾರದ ವಿನಂತಿ ಮೇರೆಗೆ ಮದ್ರಾಸಕ್ಕೆ ೪೦೦೦ ಟನ್ ಅಕ್ಕಿ ಕೊಡಮಾಡಿದ್ದಾರೆ.

ಕರ್ನಲ ಸಹಗಲರನ್ನು ತಾವು ಲಗ್ನಮಾಡಿಕೊಳ್ಳುವ ಸುದ್ದಿ ನಿಜವಿರುವದಿಲ್ಲೆಂದು ಕ್ಯಾ. ಲಕ್ಷ್ಮಿಯವರು ಹೇಳಿದ್ದಾರೆ.

ತಮಿಳನಾಡಿನ ೫॥ ಸಾವಿರ ಶಾನುಭೋಗರು ಈಗಿನ ಮುಮ್ಮಡಿ ಪಗಾರ ತುಟ್ಟಿ ಭತ್ತೆ ಬೋನಸ ಮೊದಲಾದದ್ದು ಬೇಡಿ ಮುಷ್ಕರ ಪ್ರಾರಂಭಿಸಿದ್ದಾರೆ.

ಹೊಸ ಗವ್ಹರ್ನರರಾದ ಮೇಜರ ಜನರಲ್ ಆರ್ಚಿಬಾಲ್ಡ ನಾಯ ಅವರು ತಾ. ೪ ಕ್ಕೆ ಅಧಿಕಾರ ವಹಿಸಿದರು.

ಶ್ರೀ ಟಿ. ಪ್ರಕಾಶಮರ ಮಂತ್ರಿಮಂಡಳದ ಪ್ರತಿಜ್ಞಾವಿಧಿ ತಾ. ೩೦ ನೇ ದಿನ ಜರುಗಿತು ಮಂತ್ರಿಗಳಿಗೆ ಕೆಳಗಿನಂತೆ ಖಾತೆಗಳನ್ನು ಹಂಚಲಾಗಿವೆ. ೧ ಪ್ರಕಾಶಂ–ಆಹಾರ, ಗೃಹಖಾತೆ, ಹಣಕಾಸು,ಪಬ್ಲಿಕ ಸರ್ವಿಸ ೨ ಗಿರಿ– ಕೂಲಿಕಾರ, ಸಹಕಾರ, ವಿದ್ಯುಚ್ಛಕ್ತಿ ಯೋಜನೆ, ಅರಣ್ಯ. ೩ ಭಕ್ತವತ್ಸಲಂ– ನೀರಾವರಿ, ಲೋಕೋಪಯೋಗಿ ೪ ಅವಿನಾಶಲಿಂಗಂ– ಶಿಕ್ಷಣ ೫ ಕೆ ಭಾಷ್ಯಂ ನ್ಯಾಯ ಹಾಗು ಜೇಲು ೬ ಕುಮಾರಸ್ವಾಮಿ ರಾಜಾ– ಬೆಳವಣಿಗೆ, ದನಕರ, ಮೀನಗಾರಿಕೆ ೭ ಡ್ಯಾನಿಯಲ ಥಾಮಸ– ಸ್ಥಾನಿಕ ಸ್ವರಾಜ್ಯ ೮ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿ– ಸಾರ್ವಜನಿಕ ಆರೋಗ್ಯ ೯ ಕೆ ಆರ್ ಕಾರಂತ– ಭೂಕಂದಾಯ ೧೦ ಕೆ ಕೋಟರೆಡ್ಡಿ– ದೇವಾಲಯ ಪ್ರವೇಶ, ವಿಶೇಷ ಕಂದಾಯ ೧೧ ವ್ಹಿ ಕೂರ್ಮಯ್ಯ– ಸುದ್ದಿ ಖಾತೆ

ಮಛಲಿ ಪಟ್ಟಣ ನಗರ ಸಭೆಯವರು ಆಂಧ್ರ ವಿಶ್ವವಿದ್ಯಾಲಯಕ್ಕೆ ೩೦೦೦ ರೂ. ಮಂಜೂರ ಮಾಡಿದ್ದಾರೆ.

ಗಜ್ಜರಿಯನ್ನು ಇಲಾಖೆ ಹೊರಗೆ ಕಳಿಸಲು ಸರಕಾರವು ಪ್ರತಿಬಂಧ ಮಾಡಿದೆ.

ನ್ಯಾಯಾಧೀಶ ಬಾಯರ್ಸರ ವಿಚಾರಣೆ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಪ್ರಾರಂಭವಾಗಿರುವದು. ಫೆಬ್ರುವರಿ ೨೫ ಕ್ಕೆ ಮದ್ರಾಸದಲ್ಲಿ ಗಲಭೆ ನಡೆದಾಗ ೧೮ ವರ್ಷದ ಓರ್ವ ಹುಡುಗನನ್ನು ಗುಂಡು ಹಾಕಿ ಕೊಂದ ಆರೋಪ ಅವರ ಮೇಲಿದೆ.

ದಿಲ್ಲಿ--ಪಂಜಾಬ

ವೃತ್ತಪತ್ರಗಳಿಗೆ ಹೆಚ್ಚಿನ ಕಾಗದ ದೊರೆಕಿಸಲು ದೇವದಾಸ ಗಾಂಧಿ ಹಾಗು ರಾಮನಾಥ ಗೋಯಂಕಾ ಅವರು ಕಾನಡಾಕ್ಕೆ ಪ್ರಯಾಣ ಮಾಡಿದರು.

ಬ್ರಿಹ್ಮೀ ಫ್ಯಾಸಿಸ್ಟ ವಿರೋಧಿ ಸಂಘದ ಧುರೀಣರಾದ ಅಂಗಸೇನರು ತಾ ೨೮ ನೇ ದಿನ ಮಹಾತ್ಮರ ಭೆಟ್ಟಿ ತೆಗೆದುಕೊಂಡು ಮಾತುಕತೆ ನಡೆಸಿದರು.

ಖರ್ಲಿಕೋಟೆ ರಾಜರು ಮಹಾತ್ಮಾ ಗಾಂಧಿ, ಸರದಾರ ವಲ್ಲಭಭಾಯಿ, ಬಾಬು ರಾಜೇಂದ್ರ ಪ್ರಸಾದ ಮೊದಲಾದವರ ಭೆಟ್ಟಿ ತೆಗೆದುಕೊಂಡು, ಜಮೀನದಾರರು ಭಯಪಡುವ ಕಾರಣವಿಲ್ಲೆಂದೂ ಪ್ರಗತಿಪರರೊಡನೆ ಕೂಡಿ ನಡೆಯಬೇಕೆಂದೂ ತಿಳಿಸಿದರು.

ಪಂಜಾಬ ಮೇಲ ಅನಾಹುತ ಖಟ್ಲೆಯಲ್ಲಿ ಗಲ್ಲಿ ಹಾಗು ಮರಣಾವಧಿ ಶಿಕ್ಷೆಗೆ ಗುರಿಯಾದ ಮಹಿತಸಿಂಗ ಕಹಾರ ಹಾಗು ರಾಸಂಚಿಸಿಂಗ ಅವರು ಅಪೀಲಿನಲ್ಲಿ ಹಾಯಕೋರ್ಟಿನಿಂದ ನಿರ್ದೋಷಿಗಳಾಗಿ ಬಿಡಲ್ಪಟ್ಟಿರುವರು.

ಸಾರ್ವಜನಿಕರು ಅರ್ಪಿಸಿದ ಹಮ್ಮಿಣಿಯನ್ನು ಕಾಂಗ್ರೆಸ ಕಾರ್ಯಕರ್ತರು ಸ್ವಂತಕ್ಕಾಗಿ ವಿನಿಯೋಗಿಸದೆ ಸಾರ್ವಜನಿಕರಿಗಾಗಿ ಉಪಯೋಗಿಸಬೇಕೆಂದು ಕಾಂಗ್ರೆಸ ವರ್ಕಿಂಗ ಕಮೀಟಿಯವರು ನಿರ್ಣಯಿಸಿದ್ದಾರೆ.

ಸರ್ ಗುರುರಾವ ಬೇವೂರರು ಟಾಟಾ ಕಂಪನಿಯ ಡಾಯರೆಕ್ಟರರಾಗಿ ಹೋಗಲಿದ್ದು ತಾ ೨೩ ಕ್ಕೆ ತಮ್ಮ ಅಧಿಕಾರ ಅವರು ಒಪ್ಪಿಸಿದರು.

ಅಫಗಾನ ಸರಕಾರದವರು ಹಿಂದುಸ್ತಾನಕ್ಕೆ ಸಹಾಯಮಾಡಲು ೫೫೦ ಟನ್ ಗೋದಿ ಉಚಿತ ಕೊಟ್ಟಿದ್ದಾರೆ.

ಮಧ್ಯಪ್ರಾಂತ

ನಾಗಪುರ ಕಾಂಗ್ರೆಸ ಕಮೀಟಿ ಪಂಚಮಂಡಳದವರು ನಾಗಪುರ ಭಂಗಿ ಜನರಿಗೆ ೧೫ ರೂ. ತುಟ್ಟಿ ಭತ್ತೆ ಕೊಡತಕ್ಕದ್ದಾಗಿ ನಿರ್ಣಯ ಕೊಟ್ಟಿದ್ದಾರೆ.

ಕಾಂಗ್ರೆಸ ಮಂತ್ರಿಮಂಡಳವು ತಾ. ೨೭ ಕ್ಕೆ ಅಧಿಕಾರ ಸ್ವೀಕರಿಸಿತು. ಪಂ. ರವಿಶಂಕರ ಶುಕ್ಲರು ಮುಖ್ಯ ಮಂತ್ರಿಗಳಾಗಿದ್ದು, ಡಿ ಪಿ ಮಿಶ್ರ, ಡಿ ಕೆ ಮೆಹತಾ, ಎಸ್ ಕೆ ಗೋಖಲೆ, ಆರ್ ಕೆ ಪಾಟೀಲ ಅವರು ಉಳಿದ ಮಂತ್ರಿಗಳಿರುವರು. ಅಧಿಕಾರ ವಹಿಸಿದ ಕೂಡಲೆ ಮಂತ್ರಿಮಂಡಳದವರು ೧೦೦ ರಾಜಕೀಯ ಕೈದಿಗಳ ಬಿಡುಗಡೆ ಹುಕುಮು ವಿಧಿಸಿದರು.

ವರ್ಧಾದಲ್ಲಿ ಜುಲೈಯಲ್ಲಿ ಕಾಂಗ್ರೆಸ ಶಿಕ್ಷಣ ಮಂತ್ರಿಗಳ ಪರಿಷತ್ತು ಕೂಡಿಸಲು ಪ್ರಿನ್ಸಿಪಾಲ ಅಗರವಾಲರು ಯೋಚಿಸಿದ್ದಾರೆ.

ಬಂಗಾಲ

ಪುರೋಗಾಮಿ ಪಕ್ಷದ ಕೆಲಸಗಾರರು ಪ್ರೊ. ಜ್ಯೋತಿಷಚಂದ್ರ ಘೋಷರ ಅಧ್ಯಕ್ಷತೆಯಲ್ಲಿ ಸಭೆಸೇರಿ ಹಿಂದೀ ರಾಷ್ಟ್ರೀಯ ಸಭೆಯಲ್ಲಿ ಸುಭಾಷರ ತತ್ವದಂತೆ ಕ್ರಾಂತಿಯುಂಟು ಮಾಡಲು ನಿರ್ಧರಿಸಿದರು. ಮತ್ತು ಹಿಂದುಸ್ತಾನವನ್ನು ಒತ್ತಾಯದಿಂದ ವಿಭಜಿಸಿದ್ದಾದರೆ ಅದನ್ನು ವಿರೋಧಿಸುವದಾಗಿ ನಿಶ್ಚಯಿಸಿದರು.

ಪ್ರಾಂತದಲ್ಲಿಯ ೬೩ ಸೆಕ್ಯೂರಿಟಿ ಕೈದಿಗಳ ಬಿಡುಗಡೆ ಹುಕುಮು ಹೊರಟಿದೆ.

ಬಿಹಾರ--ಓಡಿಸಾ

ಓಡಿಸಾದಲ್ಲಿಯ ರಾಜಕೀಯ ಕೈದಿಗಳೆಲ್ಲ ಕಾಂಗ್ರೆಸ ಸರಕಾರದಿಂದ ಈಗ ಬಿಡಲ್ಪಟ್ಟಿರುವರು. ಅಗಸ್ಟ ಗಲಭೆ ಬಗ್ಗೆ ಜನ್ಮಾವಧಿ ಶಿಕ್ಷೆಗೊಳಗಾದ ೩೨ ಜನರೂ ಬಿಡುಗಡೆ ಹೊಂದಿದವರಲ್ಲಿ ಇರುವರು.

ಸಿ ಆಯ ಡಿ ಜನರನ್ನು ಇನ್ನು ಲಂಚಗುಳಿತನ ಪತ್ತೆ ಹಚ್ಚುವ ಹಾಗು ಸಾರ್ವಜನಿಕರ ಸಂಕಷ್ಟಗಳನ್ನು ವರದಿ ಮಾಡುವ ಕೆಲಸಕ್ಕೆ ಹಚ್ಚಲಾಗುವದೆಂದು ಓಡಿಸಾ ಮುಖ್ಯ ಪ್ರಧಾನರಾದ ಶ್ರೀ ಹರೆಕೃಷ್ಣ ಮೆಹತಾಬರು ಪ್ರಸಿದ್ಧಿಸಿದ್ದಾರೆ.

ಬಿಹಾರದಲ್ಲಿಯ ಮತ್ತೆ ೧೫೦ ರಾಜಕೀಯ ಕೈದಿಗಳ ಬಿಡುಗಡೆಯಾಗಿದೆ.

ಯುಕ್ತಪ್ರಾಂತ

ದೀರ್ಘಾವಧಿ ಶಿಕ್ಷೆಗೊಳಗಾಗಿದ್ದ ರಾಜಕೀಯ ಕೈದಿಗಳ ಬಿಡುಗಡೆ ಬಗ್ಗೆ ಗವ್ಹರ್ನರ ಹಾಗು ಮಂತ್ರಿಗಳಲ್ಲಿ ಮತಭೇದವುಂಟಾಗಿ ಬಿಕ್ಕಟ್ಟಿನ ಸಂಭವ ತೋರಿ ಬಂದಿದೆ. ಮಂತ್ರಿಗಳು ಬಿಡುಗಡೆಗಾಗಿ ವಿಧಿಸಿದ ಆಜ್ಞೆಯನ್ನು ಗವ್ಹರ್ನರರು ತಡೆಹಿಡಿದಿರುವರು.

ವಿಧಿಮಂಡಲ ಸದಸ್ಯರಾದ (ಕಾಂಗ್ರೆಸ) ಲಕ್ಷ್ಮಿನಾರಾಯಣರು ರಾಜನಿಷ್ಠೆಯ ಪ್ರಮಾಣ ತೆಗೆದುಕೊಳ್ಳುವದು ಅಗಸ್ಟ ಗೊತ್ತುವಳಿಗೆ ವಿರುದ್ಧವಾಗಿದೆಂದು ಅಭಿಪ್ರಾಯಪಟ್ಟು ಪ್ರಮಾಣ ತೆಗೆದುಕೊಳ್ಳಲು ನಿರಾಕರಿಸಿ ಸಭೆಗೆ ಹಾಜರಾಗಿರುವದಿಲ್ಲ.

ಶಾಸನಸಭೆಯ ಆಯವ್ಯಯ ಅಧಿವೇಶನವು ಮೇ ತಿಂಗಳದಲ್ಲಿ ನೈನಿತಾಲದಲ್ಲಿ ಜರಗುವದ ಬಾಬೂ ಪುರುಷೋತ್ತಮದಾಸ ತಂಡನರು ಮೊನ್ನಿನ ಅಲ್ಪಾವಧಿ ಸಭೆಯಲ್ಲಿ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಎರಡನೆ ಸಿಮ್ಲಾ ಪರಿಷತ್ತು

(೪ ನೇ ಪುಟದಿಂದ ಮುಂದರಿದುದು)

ಸ್ತಾನದ ಹಿತದ ದೃಷ್ಟಿಯಿಂದ ಅತ್ಯಂತ ಅವಶ್ಯವಾಗಿದೆಂದೂ ಅವರು ಅಭಿಪ್ರಾಯಪಟ್ಟಿರುವರು. ಜಾತೀಯ ಸಮಸ್ಯೆಯನ್ನು ಬಿಡಿಸಬೇಕಾದರೆ ಕೇಂದ್ರದಲ್ಲಿ ೪೫ ಮುಸಲ್ಮಾನ ಮತ್ತು ೪೫ ಹಿಂದು ಮತ್ತು ಅಲ್ಪಸಂಖ್ಯಾಕರಿಂದ ಕೂಡಿದ ನಡುಗಾಲ ಸರಕಾರ ಸ್ಥಾಪಿಸಬೇಕು. ಸ್ವಯಂನಿ[illegible]ಯಾಧಿಕಾರವುಳ್ಳ ಸ್ವಾಯತ್ತ ಪ್ರಾಂತಗಳ ಒಂದೇ ಮಹಾಮಂಡಳವಿರಬೇಕು ೧೦ ಕೋಟಿ ಮುಸ್ಲಿಂರ ಮೇಲೆ ಪ್ರಭುತ್ವ ನಡೆಸುವ ಮಹಾಮಂಡಳವನ್ನಾಗಲಿ ನಡುಗಾಲ ಸರಕಾರವನ್ನಾಗಲಿ ಮುಸಲ್ಮಾನರು ಒಪ್ಪಲಾರರು. ಪ್ರೌಢಮತಾಧಿಕಾರದಿಂದ ಆರಿಸಲ್ಪಟ್ಟ ಸಮಪ್ರಾತಿನಿಧ್ಯವುಳ್ಳ ಘಟನಾಸಭೆ[illegible]ರಚಿತವಾಗಬೇಕು. ಎಂದು ಮುಂತಾದ ಮನವಿಯನ್ನು ರಾಷ್ಟ್ರೀಯ ಮುಸಲ್ಮಾನರು ಬ್ರಿಟಿಶ ಮಂತ್ರಿಗಳಿಗೆ ಒಪ್ಪಿಸಿರುವರೆಂದು ತಿಳಿಯುತ್ತದೆ. ಸಂಸ್ಥಾನಿಕರು ಈ ಯೋಜನೆಗೆ ಒಪ್ಪಿರುವರು. ಸಂಸ್ಥಾನೀ ಪ್ರಜೆಗಳು ತಮ್ಮನ್ನು ಅಲಕ್ಷಿಸಬೇಡಿರೆಂದು ಕೇಳಿಕೊಂಡಿರುವರು.

ಮುಂದೇನು?

ಇಂತಹ ಪರಿಸ್ಥಿತಿಯಲ್ಲಿ ಸಿಮ್ಲಾ ಪರಿಷತ್ತು ಕಾರ್ಯವನ್ನು ಪ್ರಾರಂಭ ಮಾಡಿದೆ. ಈ ಪರಿಷತ್ತು ಸುಮಾರು ಎರಡು ವಾರ ನಡೆಯಬಹುದೆಂದು ಇತರರು ತಿಳಿದಿದ್ದಾರೆ. ಮುಸ್ಲಿಂ ಲೀಗಿನವರು ಒಂದು ತಿಂಗಳ ವರೆಗೆ ಅದು ಎಳೆಯಬಹುದೆಂದು ಹೇಳುತ್ತಿರುವರು. ಈ ಪರಿಷತ್ತು ಯಶಸ್ವಿಯಾಗಬೇಕಾದರೆ ಮಂತ್ರಿತ್ರಯರು ಒಳ್ಳೆ ಧೈರ್ಯದಿಂದ [illegible]ಂದಡಿಯಿಡಬೇಕಾಗುವದು. ಬಹುಸಂಖ್ಯಾಕ ಹಿಂದೀಯರ ಮತವನ್ನಲಕ್ಷಿಸಿ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಯ ನೆವ ಮುಂದೆ ಮಾಡಿ ಮುಸ್ಲಿಂ ಲೀಗನ್ನು ರಂಜಿಸುವ ಧೋರಣ ವಹಿಸಿದರೆ ಸಿಮ್ಲಾ ಪರಿಷತ್ತು ಯಶಸ್ವಿಯಾಗಲಾರದು. ಈ ಪರಿಷತ್ತನ್ನು ಯಶಸ್ವೀಮಾಡಬೇಕಾದರೆ ಮಂತ್ರಿತ್ರಯರಲ್ಲಿ ನೈತಿಕ ಧೈರ್ಯಬೇಕು. ದುರಾಗ್ರಹಿಗಳನ್ನು ಸಂತೈಸುವದು ಯಾರಿಂದಲೂ ಸಾಧ್ಯವಿಲ್ಲೆಂಬದನ್ನು ಅವರು ಮನಗಾಣಬೇಕು. ಆಟ್ಲಿಯವರು ಹೇಳಿದಂತೆ ಬಹುಸಂಖ್ಯಾಕರ ಪ್ರಗತಿಗೆ ಅಡ್ಡಗಾಲು ಹೊಡೆಯುವ ಹಕ್ಕು ಅಲ್ಪಸಂಖ್ಯಾಕರಿಗಿಲ್ಲ, ಎಂಬ ಮಾತನ್ನು ಮಂತ್ರಿತ್ರಯರು ಮರೆಯತಕ್ಕದ್ದಲ್ಲ. ಈ ರೀತಿ ಧೈರ್ಯದಿಂದ ಮುಂದಡಿಯಿಟ್ಟರೆ ಮಾತ್ರ ಪರಿಷತ್ತು ಯಶಸ್ವಿಯಾಗುವದು ಇಲ್ಲದಿದ್ದರೆ ಕ್ರಿಪ್ಸ ಸಂಧಾನ, ಸಿಮ್ಲಾ ೧ ನೇ ಪರಿಷತ್ತುಗಳಂತೆ ಇದೂ ಅಯಶಸ್ವಿಯಾಗಿ [illegible]ತ್ರಿತ್ರಯರು ಕೇವಲ ಕಾಲಹರಣ ಮಾಡಿದಂತಾಗುವದು.

ಬೆಂಗಳೂರಲ್ಲಿ ಆಹಾರ ಜತನ ಸಪ್ತಾಹ

ಶಾಲಾ ಮಕ್ಕಳಿಗೆ ಬುತ್ತಿ ಪೂರೈಕೆ

ಆಹಾರ ಧಾನ್ಯಗಳನ್ನು ದುಂದುಗಾರಿಕೆಯಿಂದ ವಿನಿಯೋಗಿಸದಂತೆ ಸಾರ್ವಜನಿಕರಿಗೆ ಶಿಕ್ಷಣಕೊಡಲು ಬೆಂಗಳೂರುಸಿವ್ಹಿಲ್ ಹಾಗು ಮಿಲಿಟರಿ ಸ್ಟೇಶನದಲ್ಲಿ ಮೇ ೨೦ ರಿಂದ ಆಹಾರ ಜತನ ಸಪ್ತಾಹವು ಆಚರಿಸಲ್ಪಡುವದೆಂದು ಬೆಂಗಳೂರ ಕಲೆಕ್ಟರರಾದ [illegible] ಪಿ. ಎಂ. ಜಯರಾಜರು ಆಹಾರ ಜತನ ಸಂಸ್ಥೆಯ ಸಭೆಯಲ್ಲಿ ಹೇಳಿದರು. ಸೋಯಾಬಿನ, ಬಟಾಟಿ, ಹಾಲಿನಪುಡಿ, ಮೀನ ಮೊದಲಾದವುಗಳನ್ನು ಪೂರೈಸಲು ಹಿಂದುಸ್ತಾನ ಸರಕಾರಕ್ಕೆ ಕೇಳಲಾಗಿದೆಂದೂ ವಿವಿಧೋದ್ದೇಶ [illegible]ಟ (ಬಹುದಿನದ ಉಪವಾಸದಿಂದ ಸಾದಾ ಆಹಾರ ಜೀರ್ಣಿಸಲು ಸಹ ಶಕ್ತರಾಗದವರಿಗೆ ಕೊಡಲಾಗುವ ಪಾಚಕ ಆಹಾರ) ದೊರಕಿಸಲು ಪ್ರಯತ್ನ ನಡೆದಿದೆಂದೂ ಅವರು ತಿಳಿಸಿದರು.

೫೦,೦೦೦ ಶಾಲಾ ಬಾಲಬಾಲಿಕೆಯರಿಗೆ ಮೊಸರನ್ನ ಪೂರೈಸುವದು ನಿಶ್ಚಿತವಾಗಿ ಖಾನಾವಳಿಗಳಲ್ಲಿಯ ಊಟಗಳ ಬೆಲೆ ನಿಯಂತ್ರಣ ಬಗ್ಗೆ ಉಪಸಮಿತಿ ನಿಯಮಿಸಲ್ಪಟ್ಟಿತು. ಸಂಸ್ಥೆಯವರು ಬರಗಾಲ ಆಸ್ಪತ್ರಿ, ಅನ್ನಛತ್ರ ಮೊದಲಾದವುಗಳನ್ನು ಕುರಿತು ಯೋಗ್ಯ ವಿಚಾರ ನಡೆಸಿದ್ದಾರೆ.

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ೪೨ ನೇ ಅಧಿವೇಶನವು ಕೊಲ್ಹಾಪುರದಲ್ಲಿ ಸೇಟ ರತನಚಂದರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಮಹಾರಾಣಿ ತಾರಾಬಾಯಿ ಸಾಹೇಬರು ಸಭೆಯ ಉದ್ಘಾಟನ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅಹಿಂಸೆಯ ಮಹತ್ವ ಹಾಗು ಜೈನ ವಾಙ್ಮಯ ಪ್ರಸಾರದ ಅವಶ್ಯಕತೆ ತಿಳಿಸಿ ಹೇಳಿದರು.

ಆಡಳಿತೆ ಹದ್ದಿನ ಹೊರಗಿದ್ದ ಹೈದರಾಬಾದ ಸ್ಟಾನಲೆ ಗರ್ಲ್ಸ ಹಾಯಸ್ಕೂಲಿಗೆ ಪರಮಿಟ ಕೊಟ್ಟು ಶೀದಾ ನಿಯಮ ಉಲ್ಲಂಘಿಸಿದ್ದಕ್ಕೆ ಸಿಕಂದರಾಬಾದ ಆಹಾರ ಪೂರೈಕೆಯ ಹಿಂದಿನ ಡಾಯರೆಕ್ಟರರಾದ ಸಿ. ಸಿ. ಪಾಲ ಅವರಿಗೆ ೩೦೦೦ ರೂ. ದಂಡವಾಗಿರುವದು.

ಹೈದರಾಬಾದ ನಗರಸಭೆಯನ್ನು ಸರಕಾರದವರು ಆಡಳಿತೆ ಹಾಗು ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲೆಂದು ೩ ವರ್ಷ ರದ್ದು ಮಾಡಿದ್ದಾರೆ.

ದಾವಣಗೆರೆ ಬರಗಾಲ ಸಂಸ್ಥೆಯವರೂ ಕ್ಷಾಮನಿವಾರಣ ಸಮಿತಿಯವರೂ ಪರಿಹಾರ ಕಾರ್ಯಕ್ಕಾಗಿ ೧೦ ಸಾವಿರ ರೂ. ಕೂಡಿಸಿದ್ದಾರೆ.

AC 65 K

ಸ್ವಸಹಾಯವು ಅಗತ್ಯವಾಗಿದೆ

ಆಹಾರದ ಸಲುವಾಗಿ ನೀವು ಏನು ಮಾಡಬಹುದು

ಬರಗಾಲದಿಂದ ಭಾರತ ರಾಷ್ಟ್ರವೊಂದೇ ಭಯಗೊಂಡಿಲ್ಲ. ಸಾಮಾನ್ಯವಾಗಿ ಜಗತ್ತಿನ ತುಂಬ ಆಹಾರದ ಕೊರತೆಯಾಗಿದೆ. ಬ್ರಿಟನದಲ್ಲಿ ಶೀದಾ ಪ್ರಮಾಣವನ್ನು ಕಡಿಮೆ ಮಾಡಲಾಗಿದೆ. ಯುದ್ಧದಿಂದ ಹಾಳಾಗಿರುವ ಏಶಿಯಾ ಮತ್ತು ಯುರೋಪದೊಳಗಿನ ಭಾಗಗಳಲ್ಲಿ ಕೋಟಿ ಗಟ್ಲೆ ಜನರು ಹಸಿವೆ ಮತ್ತು ನಿರಾಹಾರಗಳಿಂದ ಬಳಲುತ್ತಿದ್ದಾರೆ. ಸಂಯುಕ್ತ ರಾಷ್ಟ್ರಗಳು ಅವರಿಗೆಲ್ಲ ಆಹಾರವನ್ನು ದೊರಕಿಸಿಕೊಡಬೇಕಾಗಿದೆ. ಹೊರಗಿನಿಂದ ಸಹಾಯವು ದೊರೆಯಬಹುದು. ಆದರೆ ಅದು ಜುಲುಮೆಗೆ ಒಳಗಾಗುವುದು. ನಮ್ಮಷ್ಟಕ್ಕೆ ನಾವೇ ಕೈಲಾದಷ್ಟು ಪ್ರಯತ್ನವನ್ನು ಮಾಡಬೇಕಾಗಿದೆ.

ನೀವು ಪ್ರಯತ್ನ ಮಾಡುವ ಮಾರ್ಗವು ಇಲ್ಲಿದೆ

ಆಹಾರದ ಕೊರತೆಯನ್ನು (ಎಲ್ಲರೂ) ನ್ಯಾಯವಾದ ರೀತಿಯಲ್ಲಿ ಹಂಚಿಕೊಳ್ಳಿರಿ—ಈ ರೀತಿಯಿಂದ ಮಾತ್ರ (ಹಸಿದ) ಜೀವಿಗಳನ್ನು ಬದುಕಿಸಬಹುದು.

ಶೀದಾ ಪದ್ಧತಿಯೊಂದೇ ಆಹಾರವನ್ನು ನ್ಯಾಯವಾದ ಮಾರ್ಗದಲ್ಲಿ ಹಂಚುವ ಯೋಜನೆಯಾಗಿದೆ. ಶೀದಾ ಪದ್ಧತಿಯ ನಿಯಮಗಳನ್ನು ಅನುಸರಿಸಿರಿ. ಮೋಸ ಮಾಡಲು ಪ್ರಯತ್ನಿಸಬೇಡಿರಿ—ಅದರಿಂದ ಯಾರ ಪ್ರಾಣಕ್ಕಾದರೂ ಹಾನಿಯಾಗಬಹುದು.

ಶೀದಾದಲ್ಲಿಯ ಕಡಿತಕ್ಕೆ ಒಪ್ಪಿಗೆಯನ್ನು ಕೊಡಿರಿ—ಅದು ನಿರ್ವಾಹವಿಲ್ಲದ ಯೋಜನೆ. ಪರಿಸ್ಥಿತಿಯು ಸುಧಾರಿಸಿದ ಕೂಡಲೆ ಅದನ್ನು ಮತ್ತೆ ತುಂಬಿಕೊಳ್ಳಲಾಗುವುದು.

(ಆಹಾರವನ್ನು) ಸಂಗ್ರಹಿಸಬೇಡಿರಿ. ಅದು ಅಪರಾಧದ ಮತ್ತು ಪರಸ್ಪರ ಸ್ನೇಹಭಾವ ವಿರೋಧಿಸುವ ಕೆಲಸವಾಗಿದೆ. ಅದರಿಂದ ಜೀವಿಗಳು ನಾಶಹೊಂದಬಹುದು.

ನೀವು ಕಾಳಿನ ವ್ಯಾಪಾರಿಗಳಾಗಿದ್ದರೆ ಲಾಭಬಡಕರಾಗಬೇಡಿರಿ—ಘೋರ ದಂಡನೆಯನ್ನು ಜಾರಿಯಲ್ಲಿ ತರಲಾಗುವುದೆಂಬುದನ್ನು ನೆನಪಿನಲ್ಲಿಡಿರಿ.

ಹಾಳಾಗುವುದನ್ನು ಉಳಿಸಿರಿ—ಸತ್ಕಾರ ಸಮಾರಂಭಗಳಲ್ಲಿ ಹೆಚ್ಚು ವೆಚ್ಚ ಮಾಡಬೇಡಿರಿ—ಸ್ವಲ್ಪೇ ನಮೂನೆಯ ಅಡಿಗೆಯನ್ನು ಸಿದ್ಧಪಡಿಸಿರಿ—ಉಳಿಸಿದ ಆಹಾರವು ಬೆಳೆಸಿದ ಆಹಾರಕ್ಕೆ ಸರಿಯಾಗಿದೆ.

ನಿಮಗೆ ನಿರ್ವಹಿಸಲು ಸಾಧ್ಯವಿದ್ದರೆ, ಕಾಯಿಪಲ್ಲೆ, ಹಣ್ಣು, ಮೀನು, ಮಾಂಸ, ತತ್ತಿ ಮತ್ತು ಹಾಲಿನ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸಿರಿ. ಬಡವರಿಗೆ ಅತ್ಯವಶ್ಯವಾಗಿರುವ ಗೋದಿ-ಅಕ್ಕಿಯನ್ನು ಅವರಿಗೆ ಬಿಟ್ಟುಕೊಡಿರಿ.

ನಿಮಗೆ ಭೂಮಿ ಮತ್ತು ನೀರಿನ ಅನುಕೂಲತೆ ಇದ್ದರೆ ಕಾಯಿಪಲ್ಲೆ ಮತ್ತು ಆಹಾರ ಧಾನ್ಯಗಳನ್ನು ಬೆಳೆಯಿರಿ, ಪ್ರತಿಯೊಂದು ಅಣುವಿನಿಂದ ಸಹಾಯವಾಗುವುದು.

ನಿಷ್ಕಾರಣವಾದ ಭಯವನ್ನು ಮೊದಲು ತಪ್ಪಿಸಿರಿ - ನೀವು ನಂಬಿಗೆಯನ್ನು ಕಳೆದುಕೊಂಡರೆ ಕಳ್ಳ ಪೇಟೆಗಾರನು ಶ್ರೇಷ್ಠನಾಗುವನು.

ಆಹಾರದ ಕೊರತೆಯನ್ನು ಹೋಗಲಾಡಿಸಿರಿ

ಒಮ್ಮನಸ್ಸಿನಿಂದ ದುಡಿಯಿರಿ   ಎಲ್ಲರೂ ಪಾಲುಗಾರರಾಗಿರಿ

ಹಿಂದುಸ್ಥಾನ ಸರಕಾರದ ಆಹಾರಖಾತೆ, ಹೊಸದಿಲ್ಲಿ, ಇವರ ಪ್ರಕಟನೆ

ಬೆಂಗಳೂರು---ಮೈಸೂರಲ್ಲಿ

ಇದೇ ೬ ನೇ ತಾರೀಕು ಸೋಮವಾರ ರಾತ್ರಿ ೯-೪೫ ರಿಂದ ೧೦ ಗಂಟೆಯ ವರೆಗೆ ಮೈಸೂರು ರೇಡಿಯೋ ಕೇಂದ್ರದಿಂದ ರಾಣೇಬೆನ್ನೂರಿನ ಶ್ರೀ ಷಡಕ್ಷರಿಮಠ ಸದಾಶಿವಯ್ಯನವರ ವಚನ ಗಾಯನ ನಡೆಯುವದು.

ತುಂಗಾ ನದಿಗೆ ಅಣೆಕಟ್ಟು ಹಾಕಿ ೨೧ ಸಾವಿರ ಎಕರೆ ಭೂಮಿ ಪ್ರದೇಶಕ್ಕೆ ನೀರುಣಿಸಬೇಕೆಂದು ತುಂಗಾ ಅಣೆಕಟ್ಟು ಸಮಿತಿಯವರು ತಮ್ಮ ಕೊನೆಯ ವರದಿಯನ್ನು ಮೈಸೂರು ಸರಕಾರಕ್ಕೆ ಕಳಿಸಿರುವರು. ಈ ಯೋಜನೆಗೆ ೭೦ ಲಕ್ಷ ರೂಪಾಯಿಗಳು ಹತ್ತುವವು. ಕೂಡಲೆ ಈ ಯೋಜನೆಯನ್ನು ಕಾರ್ಯರೂಪದಲ್ಲಿ ತರಬೇಕೆಂದು ಇದನ್ನು ಸ್ವಲ್ಪ ಕಡಮೆ ಮಾಡಲಾಗಿದೆ. ಹೊನ್ನಾಳಿ ಮತ್ತು ಶಿವಮೊಗ್ಗೆ ತಾಲೂಕಿನಲ್ಲಿ ಭತ್ತವೇ ಮುಖ್ಯ ಬೆಳೆಯಾಗಿದ್ದು ಈ ನೀರಾವರಿಯಿಂದ ಆ ಭೂಮಿಗಳಿಗೆ ಬಹಳ ಅನುಕೂಲ. ಬೇಸಿಗೆಯಲ್ಲಿಯೂ ಈ ನೀರು ಸಿಕ್ಕುವದರಿಂದ ಶಿವಮೊಗ್ಗೆಯಲ್ಲಿ ಸಕ್ಕರೆ ಕಾರಖಾನೆ ತೆರೆಯಬೇಕೆಂದು ಗೊತ್ತಾಗಿದೆ.

ಬೆಂಗಳೂರು ನಗರದಲ್ಲಿ ವೀರಶೈವ ಸಮಾಜ ಸೇವಾ ಸಂಘದ ನೇತೃತ್ವದಲ್ಲಿ ಶ್ರೀ ಬಸವೇಶ್ವರ ಜಯಂತೀ ಮಹೋತ್ಸವವು ಗಾಂಧೀ ನಗರದ ಶೇಷಾದ್ರಿ ರಸ್ತೆಯಲ್ಲಿರುವ ಶ್ರೀ ಜಗದ್ಗುರು ಮುರುಘರಾಜೇಂದ್ರ ವೀರಶೈವ ವಿದ್ಯಾರ್ಥಿ ನಿಲಯದ ಸಭಾ ಮಂದಿರದಲ್ಲಿ ೨ ರಿಂದ ೭ ನೇ ತಾರೀಖಿನ ವರೆಗೆ ನಡೆಯಿತು. ಬೇರೆ ಬೇರೆ ಮಹನೀಯರ ವ್ಯಾಖ್ಯಾನಗಳು ಬಸವಣ್ಣನವರ ವಿಷಯಕ್ಕೆ ಏರ್ಪಡಿಸಲ್ಪಟ್ಟಿದ್ದವು.

೧೬೫೦೦ ಟನ್ ಗೋದಿ ಮತ್ತು ೩೫೦೦ ಟನ್ ಗೋದಿ ಹಿಟ್ಟಿನಿಂದ ತುಂಬಿದ ಮೂರು ಹಡಗಗಳು ಬೇಗನೆ ಮದ್ರಾಸಕ್ಕೆ ಬರಲಿವೆ. ಇದರಲ್ಲಿ ೧೧೦೦೦ ಟನ್ ಗೋದಿ ಮತ್ತು ೩೦೦೦ ಟನ್ ಹಿಟ್ಟು ಮದ್ರಾಸದಿದ್ದು ಉಳಿದುದನ್ನು ಮೈಸೂರಿಗೆ ಕೊಡಲಿರುವರು.

ಆಂಗ್ಲೋ ಅಮೇರಿಕನ್ನರ ಸಂಯುಕ್ತ ಆಹಾರ ಮಂಡಳವು ಭಾರತಕ್ಕೆ ಕೊಡಲಿರುವ ಧಾನ್ಯದಲ್ಲಿ ಭಾರತ ಸರಕಾರವು ೩೨೦೦ ಟನ್ ಗೋದಿಯನ್ನು ೧೦೦೦೦ ಟನ್ ಗೋವಿನ ಜೋಳವನ್ನೂ ಮೈಸೂರು ಸಂಸ್ಥಾನಕ್ಕೆ ಕೊಡಲಿರುವರೆಂದು ತಿಳಿಯುತ್ತದೆ. ಈಗ ಮೈಸೂರು ಸಂಸ್ಥಾನದ ಜನರಿಗೆ ೧॥ ತಿಂಗಳ ಸಾಲುವಷ್ಟು ಮಾತ್ರ ಧಾನ್ಯಸಂಗ್ರಹವಿದೆಂದು ಮೈಸೂರು ಸರಕಾರದ ಪಾಕ್ಷಿಕ ಪತ್ರಿಕೆಯಿಂದ ಕಂಡು ಬರುತ್ತದೆ.

ಮೈಸೂರು ಸರಕಾರದ ಹಣಕಾಸಿನ ಸಮಿತಿಯವರು ಯುದ್ಧೋತ್ತರ ೬೪ ಯೋಜನೆಗಳಿಗೆ ಒಪ್ಪಿಗೆಯಿತ್ತಿದ್ದು ಅವುಗಳಿಗಾಗಿ ೯೮೪೧೪ ಲಕ್ಷ ರೂಪಾಯಿ ಅನಾವೃತ್ತ ವೆಚ್ಚ ಮತ್ತು ೨೯೫.೧೨ ಲಕ್ಷ ರೂಪಾಯಿ ಆವೃತ್ತ ವೆಚ್ಚ ತಗಲುವದು. ಯಾವಾವ ಯೋಜನೆಗಳನ್ನು ಮೊದಲು ಪ್ರಾರಂಭಿಸಬೇಕೆಂಬುದನ್ನು ವಿಚಾರಿಸಲು ಸರಕಾರದ ಹಣಕಾಸಿನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನಿಯಮಿಸಲಾಯಿತು.

ಬೆಂಗಳೂರು ಜವಳಿ ವರ್ತಕರ ಸಭೆ ಸೇರಿ ಶ್ರೀ ಜಿನಭಾಯಿ ದೇವೀದಾಸರನ್ನು ಮತ್ತೆ ಅಧ್ಯಕ್ಷರನ್ನಾಗಿಯೂ ವೈ. ಎಸ್. ಗೋಪಾಲಕೃಷ್ಣ ಶೆಟ್ಟರನ್ನು ಉಪಾಧ್ಯಕ್ಷರನ್ನಾಗಿಯೂ ಅಬ್ದುಲ್ಲಾ ನೂರಮಹಮ್ಮದರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು. ಟಿ. ಎಸ್. ವೆಂಕಟರಾಮಯ್ಯನವರು ಜತೆ ಕಾರ್ಯದರ್ಶಿಗಳು ದೇವೀಚಂದ ಮಿಸ್ತ್ರಿಯುಲ್‌ರು ಕೋಶಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಇದೇತಾನೆ ಬಿಡುಗಡೆ ಹೊಂದಿದ ಮೈಸೂರ ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರಿಗೆ ಬೆಂಗಳೂರು ಕಾಂಗ್ರೆಸ್ಸಿಗರು ಹಾರ್ದಿಕ ಸ್ವಾಗತವಿತ್ತರು

ಇದೇ ತಿಂಗಳ ಎರಡನೇ ವಾರದಲ್ಲಿ ಅಖಿಲ ಕರ್ನಾಟಕ ಮಕ್ಕಳ ಕೂಟದ ಪರವಾಗಿ ಬೆಂಗಳೂರಿನಲ್ಲಿ ಮಕ್ಕಳ ಸಮ್ಮೇಲನದ ೯ ನೇ ಅಧಿವೇಶನ ನಡೆಯಲಿರುವದು. ಅದಕ್ಕೆ ರಾಯಚೂರಿನ ಬಾಲಕರ ವಿಭಾಗದ ಕಾರ್ಯದರ್ಶಿ ಕುಮಾರ ವಿಠ್ಠಲರಾಯರು ಅಧ್ಯಕ್ಷ ಕುಮಾರ ಎಸ್. ಗುರುರಾಜನೆಂಬ ಬಾಲಕನು ಸ್ವಾಗತಾಧ್ಯಕ್ಷನಾಗಿ ಆರಿಸಲ್ಪಟ್ಟರು ಪರು.



ಮುಂಬಯಿ ಶೇರ ಪೇಟೆ

ಮುಂಬಯಿಯಲ್ಲಿ ಪಾಲುಗಳ ಬೆಲೆ ಈ ವಾರ ಪುನಃ ಏರಿಕೆಯ ಧೋರಣ ತೋರಿಸಿದವು. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ಮತ್ತೊಮ್ಮೆ ೩೦೦೦ ರೂಪಾಯಿಯ ಗಡಿಯನ್ನು ದಾಟ ಮೇಲೆ ಹೋದವು. ತಾ. ೧ ಕ್ಕೆ ಅವು ೩೦೦೦-೦-೦ ರೂಪಾಯಿಯಲ್ಲಿ ಮಾರುತ್ತಿದ್ದವು. ಜವಳಿ ಗಿರಣಿ ಪಾಲುಗಳಾದರೂ ಬಿಗಿಯಾಗಿಯೆ ಇವೆ. ಡಾಯಿಂಗ ಪಾಲುಗಳು ಕಳೆದ ಗುರುವಾರ ೨೪೨೦-೦-೦ ರಲ್ಲಿದ್ದುದು ತಾ. ೧ ಕ್ಕೆ ರೂ. ೨೯೫೧-೪-೦ ಕ್ಕೂ ಕೋಹಿನೂರು ರೂ. ೯೩೦-೦-೦ ರಿಂದ ೯೫೦-೦-೦ ಕ್ಕೂ ಸ್ವದೇಶಿ ೭೮೩-೦-೦ ರಿಂದ ೮೧೬-೮-೦ ಕ್ಕೂ ಏರಿದರೆ ಸೆಂಚೂರಿ ೧೦೨೦-೦-೦ ರಲ್ಲಿ ಯಥಾ ಸ್ಥಿತಿ ಇದೆ. ಸೆಂಟ್ರಲ ಇಂಡಿಯಾ ೪೮೩-೦-೦ ರಿಂದ ೪೯೩-೦-೦ ಕ್ಕೇರಿದೆ. ಬೇಲಾಪುರ ಸಕ್ಕರೆ ಪಾಲು ೨೯೪-೦-೦ ರಿಂದ ೩೦೪-೮-೦ ಕ್ಕೂ ಅಸೋಸಿಯೇಟೆಡ ಸಿಮೆಂಟ್ಸ ೨೫೩-೪-೦ ರಿಂದ ೨೫೪-೦-೦ ಕ್ಕೂ ಏರಿವೆ. ಬ್ಯಾಂಕುಗಳಲ್ಲಿ ಸೆಂಟ್ರಲ ಬ್ಯಾಂಕು ರೂ. ೧೨೫-೮-೦ ರಿಂದ ೧೨೯-೪-೦ ಕ್ಕೂ ಇಂಪೀರಿಯಲ್ ಎಫ್ ಸಿ ೨೬೧೫-೦-೦ ರಿಂದ ೨೭೦೦-೦-೦ ಕ್ಕೂ ರಿಝರ್ವ ಬ್ಯಾಂಕ್ ೧೬೩-೮-೦ ರಿಂದ ೧೬೫-೦-೦ ಕ್ಕೂ ಏರಿವೆ.

ಜಿ. ಪಿ. ನೋಟುಗಳು ೧೦೨-೧೩-೦ ರಲ್ಲಿಯೂ ೩॥ ದರದ (೧೯೪೭-೫೦) ಸಾಲಪತ್ರ ರೂಪಾಯಿ ೧೦೩-೭-೦ ರಲ್ಲಿಯೂ ಯಥಾಸ್ಥಿತಿ.

ಚಿನ್ನ ಬೆಳ್ಳಿ

ಪೇಟೆಯಲ್ಲಿ ಚಿನ್ನದ ಕೊರತೆಯ ಕಾರಣದಿಂದ ಚಿನ್ನದ ಸ್ಥಿತಿ ಬಿಗಿಯಾಗಿದೆ. ಈ ಬಾರಿ ಅದು ೧೦೦ ರೂಪಾಯಿಯ ಮಿತಿಯನ್ನು ದಾಟ ಹೋಯಿತು. ಮಂಗಳವಾರ-ಬುಧವಾರ ಅದು ರೂ. ೧೦೦-೪-೦ ಯಲ್ಲಿ ಮಾರಿತು. ವಾಯಿದಾ ಚಿನ್ನ ರೂ. ೯೭-೮-೦ ತಯಾರಿ ಬೆಳ್ಳಿ ರೂ. ೧೬೫-೪-೦ ವಾಯಿದಾ ರೂ. ೧೬೪-೦-೦ ಸಾವರೀನ ರೂ. ೬೫-೮.

ಅರಳೆ ಪೇಟೆ

ಆಹಾರ ಕೊರತೆಯ ಕಾರಣದಿಂದ ಜಗತ್ತಿನಲ್ಲೆಲ್ಲ ಹತ್ತಿ ಬೆಳೆಯುವ ಕ್ಷೇತ್ರವನ್ನು ಕಡಿಮೆ ಮಾಡಿದ ಮೂಲಕ ತೇಜಿ ವ್ಯಾಪಾರಿಗಳು ಈ ಬಾರಿ ಅರಳೆಯ ಧಾರಣೆ ಏರಿಸಲು ಧೈರ್ಯಗೊಟ್ಟಿದ್ದಾರೆ. ಕಳೆದ ಗುರುವಾರ ಮುಂಬಯಿ ಪೇಟೆಯಲ್ಲಿ ೪೬೮-೧೨-೦ ರ ವರೆಗೆ ಇಳಿದಿದ್ದ ಮೇ ವಾಯಿದೆ ಅರಳೆ ಒಮ್ಮೆಲೆ ರೂ. ೪೭೫-೪-೦ ಕ್ಕೆ ಏರಿಬಿಟ್ಟಿತು ಪುನಃ ಅದು ೪೭೨-೮-೦ ಕ್ಕಿಳಿದರೂ ಮುಂದೆ ತೇಜಿ ಸಿಂಡಿಕೇಟಿನ ಬೆಂಬಲದಿಂದ ರೂ ೪೭೮-೪-೦ ಕ್ಕೇರಿತು. ಜುಲೈ ವಾಯಿದೆಗೂ ಮೇ ವಾಯಿದೆಗೂ ವಿಶೇಷ ಅಂತರವುಳಿದಿಲ್ಲ. ಜುಲೈ ರೂ. ೪೭೮-೮-೦ ರಲ್ಲಿಯೂ ಸೆಪ್ಟೆಂಬರ ರೂ ೪೮೨-೧೨-೦ ರಲ್ಲಿಯೂ ಇವೆ.

ಎಣ್ಣೆಕಾಳು

ಶೇಂಗಾ	ರೂ.	೧೧೦—೦—೦
ಅಗಸಿ	,,	೨೫—೦—೦
ಅಗಸಿಎಣ್ಣೆ		೧೩—೧೨—೦

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ	ರೂ.	೧೪—೧೬
ಅರಿಸಿಣ ಹೇರು	,,	೭೮—೮೩
ಮೆಣಸಿನಕಾಯಿ ಹೇರು	,,	೧೬೦—೧೮೫
ಶೇಂಗಾ (ಖಂಡಿ)	,,	೯೨—೯೩
ತಂಬಾಕು ಪಂಢರಪುರಿ		೨೦೦—೩೦೦
ತಂಬಾಕು ಅಕೋಳ (ಹೇರು)		೨೫೦—೪೦೦


ಶಿವಮೊಗ್ಗೆ

ದೇಶಾವರ ಅಡಿಕೆ ಸಂ. ೧ (ಮಣ)	ರೂ.	೨೨—೨೫
,, ,, ೨	,,	೨೦—೨೩
ಚೆಟ್ಟ	,,	೧೨—೧೩॥
ವಂಥಿ	,,	೧೪—೧೪॥
ರಾಜಾ ಅಲ್ವ	,,	೨೧—೨೪
ಮೆಣಸು	,,	೧೪—೧೫

ಪೇಟೆಯಲ್ಲಿ ಸರಕಿಗೆ ಬೇಡಿಕೆ ಬಹಳಿದೆ.

ಹುಬ್ಬಳ್ಳಿ ಪೇಟೆ

ಜಯವಂತ	೩೧೧—೩೨೫
ಅಪಲಂಡ	೨೮೦—೩೦೦
ಹೊಸ ಜೀನ ಆಳ್ಳಿ	೨೨೦—೨೪೫
ಹಳೆ ,,	೧೯೦—೨೧೧
ಡಬಲ ರೋಲರ (ಹೊಸದು)	೨೧೦—೨೨೫
ಹಳೆಯದು	೧೭೫—೧೯೦



ಕರ್ನಾಟಕ ಶಾಖೆ---ಕೊಪ್ಪಿಕರರೋಡ ಹುಬ್ಬಳ್ಳಿ

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಹಿಂದಿನ ಸದಸ್ಯರಾದ ಶ್ರೀ ಕೆ. ಸುಂದರನ್‌ರು ಜಿಲ್ಲಾ ಆಹಾರ ಸಮಿತಿಗೆ ರಾಜೀನಾಮೆ ಕೊಟ್ಟಿರುವರು. ಶೆಡ್ಯೂಲ್‌ಕ್ಲಾಸ ಫೆಡರೇಶನ್ನಿನ ಪರವಾಗಿ ತಮ್ಮನ್ನು ನೇಮಿಸಿದ್ದು ತಾವು ಆ ಫೆಡರೇಶನ್ನಿನ ಸದಸ್ಯನಾಗಿರದೆ ಕಾಂಗ್ರೆಸ್ಸಿಗರಾದುದರಿಂದ ರಾಜೀನಾಮೆ ಕೊಡುವದಾಗಿ ತಿಳಿಸಿರುವರಂತೆ. ಇವರು ಈ ಮೊದಲು ಕಾಂಗ್ರೆಸ್ಸಿನ ಆಜ್ಞೆ ಮೇರೆಗೆ ಜಿಲ್ಲಾ ಬೋರ್ಡಿನ ಸ್ಥಳಕ್ಕೆ ರಾಜೀನಾಮೆ ಕೊಟ್ಟಿದ್ದರು.

ಪುತ್ತೂರು ತಾಲೂಕು ಲ್ಯಾಲ ಗ್ರಾಮದ ಅತ್ಸರಂಡ ಎಂಬಲ್ಲಿ ಇದೇ ೨೭ ನೇ ತಾರೀಕು ಬೆಳಿಗ್ಗೆ ಅಂಬೋಜಿ ಸೋಜ ಎಂಬವರ ಮೇಲೆ ಗದ್ದೆಯಲ್ಲಿ ಕೆಲಸ ಮಾಡುವಾಗ ಹುಲಿಯೊಂದು ಹಾರಿಬಿದ್ದಾಗ ಅವರ ಮಗ ಜೋನಿ ಸೋಜರ ಅದನ್ನು ಹೊಡೆದು ಕೊಂಡನು. ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದ್ದು ಅಂಬೋಜಿ ಸೋಜರಿಗೆ ವಿಶೇಷ ಗಾಯಗಳಾಗಿವೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಸಭೆ ಸೇರಿ ಜಿಲ್ಲೆಯಲ್ಲಿಯ ೨೭ ಹಳ್ಳಿಗಳ ೧೨ ಕೇಂದ್ರಗಳಲ್ಲಿ ಹೊಸದಾಗಿ ಪುಕ್ಕಟೆ ಒತ್ತಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವದಾಗಿ ನಿರ್ಧರಿಸಲಾಯಿತು.

ಕುಂಬಳೆಯ ಮುಸ್ಲಿಂ ಕೇಂದ್ರ ಉಪಾಧ್ಯಾಯರು ೨೮ ನೇ ತಾರೀಕು ಕಾಸರಗೋಡ ತಾಲೂಕು ಬೋರ್ಡ ಉಪಾಧ್ಯಾಯರ ಯೂನಿಯನ ತೀರ್ಮಾನ ಪ್ರಕಾರ ಸಂಬಳ ದಿನಾಚರಣೆ ಕೊಂಡಾಡಿದರು. ಪ್ರಾಥಮಿಕ ಶಾಲೋಪಾಧ್ಯಾಯರಿಗೆ ಸಂಬಳವನ್ನು ೫೦ ರೂಪಾಯಿಯಾಗಿ ಹೆಚ್ಚಿಸಬೇಕೆಂದು ಸರಕಾರದವರಿಗೆ ಕೇಳಿಕೊಂಡ ಗೊತ್ತುವಳಿಗೆ ಮಾನ್ಯತೆ ಕೊಡಲಾಯಿತು. ಯುನಿಯನ್ನಿನ ತೀರ್ಮಾನಿನ ಪ್ರಕಾರ ಒಬ್ಬೊಬ್ಬ ಉಪಾಧ್ಯಾಯನೂ ಹಸಿವುಳ್ಳ ಉಪಾಧ್ಯಾಯ ಎಂಬ ಪಟ್ಟಿಯನ್ನು ಧರಿಸಿದ್ದರು. ಅಧ್ಯಕ್ಷ ಇಬ್ರಾಹಿಂ ಕುಟ್ಟಿ ಸಾಹೇಬರು ಸಮಾರೋಪ ಮಾಡಿದ ಬಳಿಕ ಸಭೆ ಕೊನೆಗೊಂಡಿತು.

ಉಡುಪಿಯಲ್ಲಿ ಇದೇ ತಿಂಗಳ ಮಧ್ಯದಲ್ಲಿ ಮಕ್ಕಳ ಕೂಟದ ಪ್ರಥಮ ಸಮ್ಮೇಲನ ಜರಗುವದು ಆಗ ಭಾಷಣ ಲೇಖನ ವಾಚನ ಸ್ಪರ್ಧೆಗಳು ನಡೆಯುವವು ಆದ್ದರಿಂದ ಎಲ್ಲ ಹಾಯಸ್ಕೂಲು ಮತ್ತು ಹಾಯರ ಎಲಿಮೆಂಟರಿ ಸ್ಕೂಲಗಳು ಸಮ್ಮೇಳನದಲ್ಲಿ ಭಾಗವಹಿಸಿ ಸಮ್ಮೇಳನ ಯಶಸ್ವಿಗೊಳಿಸಬೇಕೆಂದು ಮಕ್ಕಳ ಕೂಟದ ಅಧ್ಯಕ್ಷರು ತಿಳಿಸುತ್ತಾರೆ.

ಮುಲ್ಕಿಯಲ್ಲಿ ಶ್ರೀ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಹಾಯಸ್ಕೂಲಿನ ಪಟಾಂಗಣದಲ್ಲಿ ಸಭೆಸೇರಿ ಅಯೋಧ್ಯೆಯ ವಿದ್ವನ್ಮಂಡಲಿಯವರಿಂದ ಪಂಡಿತ ಎಚ್ ಸದಾಶಿವರಾಯರಿಗೆ ಆಯುರ್ವೇದ ಭೂಷಣ ಎಂಬ ಬಿರುದು ದೊರೆತುದಕ್ಕೆ ಮತ್ತು ವಿದ್ವಾನ್ ಗೋವಿಂದರಾಯರಿಗೆ ಸಾಹಿತ್ಯಭೂಷಣವೆಂಬ ಪದವಿ ದೊರೆತುದಕ್ಕೆ ಅವರನ್ನು ಅಭಿನಂದಿಸಲಾಯಿತು.

ಚಿಕ್ಕ ಕತೆ

ತೊಲಗಿ

(ಶ್ರೀಕೃಷ್ಣ ಪಾಟೀಲ ಕಲಾಮಂಟಪ ಬೆಳಗಾವಿ)

೧೯೪೨ ರಲ್ಲಿ ಹಿಂದುಸ್ತಾನದ ಎಂಟೂ ಮೂಲೆಗಳ ಬಾಯಿ-ಮೂಗುಗಳನ್ನು ಮುಚ್ಚಿ, ನಿರ್ದ್ವಂದ್ವವಾಗಿ, ನಿರ್ಜೀವವಾಗಿ ಮಾಡಬೇಕೆಂದು ಸರಕಾರವು ತಳೆದ ಸರ್ವನಾಶಕ ಧೋರಣದ ಮದ್ದು-ಗುಂಡುಗಳ ಸಂಪನ್ನ ಶಕ್ತಿಗೆ ಎದುರಾಗಿ ತೊಲಗಿಯ ಒಂದು ಗೇಣಗಲಿನ ಎದೆಯ ಶಂಕರನು ನಿಂತಿರುವನು. ವಿರಾಟ-ಪ್ರಚಂಡ-ಮಹಾ ಶಕ್ತಿಯ ಎದುರಿಗೆ ಶಂಕರನು ಒಂದು ಹುಲ್ಲುಕಡ್ಡಿ. ಆ ಹುಲ್ಲುಕಡ್ಡಿಯ ಆತ್ಮಶಕ್ತಿಯು ಆ ಬೃಹತ್ ಶಕ್ತಿಯನ್ನು ಎದೆಯೊಡ್ಡಿ ಬರಮಾಡಿಕೊಳ್ಳಲಿದೆ! ಆಶ್ಚರ್ಯಕರವಾದ ಸಂಗತಿಯು! ವಾಸ್ತವವಾದಿಗಳ ದೃಷ್ಟಿಗೆ ಒಂದು ನಗೆಯಾಟ!

ತೊಲಗಿಯು ಒಂದು ಚಿಕ್ಕ ಹಳ್ಳಿ. '೪೨ ರ ಘೋಷಣೆಯನ್ನು ಜನಜಂಗುಳಿಗೆ ಬೀರಹೊರಟ ಮೆರವಣಿಗೆಯು ಇನ್ನೂ ಚಿಕ್ಕದು. ಹದಿನಾಲ್ಕು ವರುಷದ ಮೊಗಮೀಸೆ ಬಾರದ ಶಂಕರನು ಮತ್ತೂ ಚಿಕ್ಕವನು. ಅವನು ಅರೆದು ಅರಗಿಸಿಕೊಂಡ ಪ್ರಪಂಚಾನುಭವವು ಇನ್ನೂ ಹೆಚ್ಚಾಗಿ ಚಿಕ್ಕದು. ಈ ಚಿಕ್ಕ-ಚಿಕ್ಕ ಸಂಗತಿಗಳಿಂದ ಹೊರಟ ಸಿದ್ಧ-ಸತ್ಯವನ್ನು ಯಾವ ಕೋಲಿನಿಂದ ಅಳೆಯಬೇಕೆಂಬ ಮಾತು ಮಾತ್ರ ಚಿಕ್ಕದಲ್ಲ!

ಪೋಲೀಸರು ಸಭೆಯನ್ನು ತಡೆದರು. ಚದರಿ ಹೋಗಲು ಅಪ್ಪಣೆಯನ್ನಿತ್ತರು. "ಚದುರದಿದ್ದರೆ ನೋಡಿ" ಎಂದು ಬಂದೂಕುಗಳನ್ನು ತೋರಿಸಿದರು. ಹುಸಿಗುಂಡುಗಳನ್ನು ಹವೆಯಲ್ಲಿ ಹಾರಿಸಿದರು.

ಶಂಕರನು ಹಿಂದೆ ಸಹ ನೋಡಬಯಸಲಿಲ್ಲ. ಎದುರು ನಿಂತ ಪೋಲೀಸರ ಪಡೆಯೂ ಅವನಿಗೆ ಕಾಣಲಿಲ್ಲ. ಕಾಲುಗಳು ಮುಂದಕ್ಕೆ ಎಳೆಯಹತ್ತಿದವು. ಮನಸು ತನ್ನ ಧ್ಯೇಯದ ಕುದುರೆಯನ್ನು ಮುಂದೆ ದೂಡುತ್ತಿದ್ದಿತು, ಕರ್ತವ್ಯ ಮುಂದೆ ಸಾಗು ಎಂದು ಎಳೆಯುತ್ತಿದ್ದಿತು. ಭಾರತ ಸ್ವಾತಂತ್ರ್ಯ ಜ್ಯೋತಿಯು ತಿಳಿಬೆಳಕುಗೊಂಡು ಗಾಳಿಗುಂಟ ಬಂದು-ನಡೆ ಮುಂದೆ-ಎಂದು ನುಡಿಯುತ್ತಿದ್ದಿತು. ಸಾಕು! ಸಾಕು! ಶಂಕರನ ಉತ್ಸಾಹವು ನೂರ್ಮಡಿ ಕುದಿಗೊಂಡು ಉಬ್ಬೇಳಲು ಇಷ್ಟು ಮಾತು ಸಾಕಾದವು. "ಜಯ ಹಿಂದ ಮಾತೆ!" ಎಂದು ಶಂಕರನು ಮುಂದೆ ಮುಂದೆ ಕಾಲಿಟ್ಟನು. ವಿರಾಟ ಶಕ್ತಿಯ ಸಾವಿರಾರು ಗುಂಡುಗಳು ಹಿಂದೆ ಹಿಂದೆ ಎಂದು ಗುಡುಗಿ ಹಾರಿದವು. ಶಂಕರನು ರಕ್ತಕಾರಿ ಭೂಗತನಾದನು. ಕೆಲವರು ಕೈಕಾಲುಗಳನ್ನು ಒಡ್ಡಿ ರಕ್ತ ಸುರಿಸಿದರು. ಕೆಲವರು ತಲೆಯ ರಕ್ತವನ್ನು ಹನಿಸಿದರು. ಕೆಲವರು ಹೊರಗೂ ಉಗುಳದೆ, ಒಳಗೂ ನುಂಗದೆ ಗಂಟಲಲ್ಲಿ ಗುಂಡುಗಳನ್ನು ಸಿಕ್ಕಿಸಿಕೊಂಡು ನೀಲಕಂಠ-ರಕ್ತಕಂಠರಾಗಿ ಉರುಳಾಡಿದರು. ಗೆಲವಿನ ಹೆಮ್ಮೆಯ ಧ್ವಜವನ್ನೆತ್ತಿ ಪೋಲೀಸ ಪಡೆಯು ಶಿಬಿರಕ್ಕೆ ಸಾಗಿತು.

ಕಷ್ಟ ಜೀವನದ ಅನುಕೂಲ ಫಲವೆಂದು ತಿಳಿದ ಶಂಕರನನ್ನು ಕಳೆದುಕೊಂಡು ತಂದೆ ಬಸವರಾಜನು ಗೋಳಾಡಿದನು; ಮರುಗಿದನು. ಕಣ್ಣೀರಿನ ಕಾಲುವೆಯನ್ನು ಹರಿಸಿದನು. -ಕೊಟ್ಟು ಕಸಿದುಕೊಂಡೆಯಾ ಶಿವನೇ!— ಎಂದು ಮೊರೆಯಿಟ್ಟನು.

ತಾಯಿ ನೀಲವ್ವನು ಪಟ್ಟ ದುಃಖ ಹೇಳಲಾರದು. ಹೊಟ್ಟೆಗೆ ಬಂದಂದಿನಿಂದ ಬೆಂಕಿಯ ಗುಂಡನ್ನು ತಿಂದು ಸಾಯುವ ವರೆಗಿನ ಹದಿನಾರು ವರುಷದ ಬಾಲಲೀಲೆಗಳನ್ನು ನೆನೆನೆನೆಸಿ ಹಂಬಲಿಸಿದಳು. ಹೊಸೆದಾಡಿದಳು. ಕಣ್ಣು ಉದುರಿಸಿದ ಹನಿಗಳಿಗೆ ಅಳತೆಯಿಲ್ಲ.

ಮಗನು ಸತ್ತನೆಂದು ತಂದೆ-ತಾಯಂದಿರು ಅಳುವದು ವಿಚಿತ್ರವಲ್ಲ!

ಮರು ದಿನ ಊರ ಪ್ರಮುಖರು ಬಂದು ಅವರನ್ನು ಅನೇಕ ಬಗೆಯಾಗಿ ಸಂತಯಿಸಿದರು. ಉಪದೇಶಿಸಿದರು. ಸರಕಾರವನ್ನು ಶಪಿಸಿದರು. ತಾಳಿದರು. ಎಲ್ಲರ ಮಾತುಗಳಿಗೆ-ದೇವರ ಚಿತ್ತ-ವೆಂಬುದೇ ಬಸವರಾಜನ ಮತ್ತು ನೀಲವ್ವನ ಉತ್ತರಗಳಾಗಿದ್ದವು.

ಕಾಂಗ್ರೆಸವನ್ನು ಬಗ್ಗುಬಡಿದೆನು. ಈಗ ಅದರ ಅಸ್ತಿತ್ವವೇ ಇಲ್ಲ ಎಂದು ಹಿಂದಿನ ವಾಯಿಸರಾಯರು ಆಡಿದ ಮಾತನ್ನು ಸಾರ್ಥಕಗೊಳಿಸಲು ಪೋಲೀಸರು ಗುಂಡಿನಿಂದ ಹೊತ್ತಿಸಿ ಸುಟ್ಟ ಹುತಾತ್ಮರ ಬಿಸಿ ಬೂದಿಯು ಸಾಕ್ಷ್ಯವಾಗಿ ನಿಂತಿತು. ಆದರೆ ಭಾರತ ಸ್ವಾತಂತ್ರ್ಯ ಜ್ಯೋತಿಯ ಬಿರುಗಾಳಿಯು ಅದನ್ನು ಬಹಳ ದಿವಸ ಉಳಿಯಗೊಡಲಿಲ್ಲ.

ಈಗ ೪೨ ರ ಸ್ಥಳದಲ್ಲಿ ೪೫ ಬಂದು ನಿಂತಿದೆ. ೪೬ ಭರದಿಂದ ಪ್ರಗತಿಶೀಲವಾಗಿ ಮುನ್ನಡೆಯನ್ನಿಟ್ಟಿದೆ. ಮೊದಲಿನ ಬೆದರಿಕೆಯಿಲ್ಲ. ಗದ್ದರಿಕೆಯಿಲ್ಲ. ಬೇಕಾದ ಹಾಗೆ ಸಭೆಯನ್ನು ಕೂಡಿಸಬಹುದು. ವ್ಯಾಖ್ಯಾನ ಕೊಡಬಹುದು. ಜನರನ್ನು ಹುರಿದುಂಬಿಸಬಹುದು. ಮನೆಯಲ್ಲಿ ಕುಳಿತ ಹೇಡಿಗಳನ್ನು ಕೈಹಿಡಿದು ಎಳೆದು ಹೊರಗೆ ತರಬಹುದು. ಅಹಿಂಸೆಯಿಂದ ಏನೇ ಮಾಡಬಹುದು. ಲಂಡನಕ್ಕೂ ಕೇಳಿಸುವಂತೆ—ಬ್ರಿಟಿಶರೇ ಹೊರಟು ಹೋಗಿರಿ—ಎಂದು ಏಕಕಂಠದಿಂದ ಕೂಗಬಹುದು. ಹೆದರಿಕೆ ಇಲ್ಲ. ಬೆದರಿಕೆ ಇಲ್ಲ.

ಸೆರೆಮನೆಯಿಂದ ಬಿಡುಗಡೆಯನ್ನು ಹೊಂದಿ ದೇಶಭಕ್ತ ಮಲ್ಲನಗೌಡರು ಊರಿಗೆ ಬಂದರು. ಊರ ಹಿರಿಯರು ಸನ್ಮಾನದಿಂದ ಬರಮಾಡಿಕೊಂಡರು. ಸಂಜೆಗೆ ಒಂದು ಸಭೆಯನ್ನು ಕರೆದರು. ಜನರು ಕಿಕ್ಕಿರಿದು ನೆರೆದರು.

ದೇಶಭಕ್ತರು '೪೨ ರಿಂದ ಇಂದಿನ ವರೆಗಿನ ದೇಶವತ್ಸಲ ಸಾಹಸಿ ತರುಣ-ತರುಣಿಯರ ಕತೆಯನ್ನು ಸಾದ್ಯಂತವಾಗಿ ವಿವರಿಸಿದರು. ಪ್ರಜರು ದೇಶಕ್ಕಾಗಿ ಮಾಡಿದ ತ್ಯಾಗ ಬುದ್ಧಿಯನ್ನು, ಶೌರ್ಯ ಸಾಹಸದ ಸಂಗತಿಗಳನ್ನು ಹೃದಯ ಕರಗುವಂತೆ ವರ್ಣಿಸಿದರು. ಶಂಕರನು ಹುತಾತ್ಮನಾಗಿ ನಾಲಗೆಯ ಮೇಲೆ ಕುಣಿದಾಡಿ, ಸಭಿಕರ ಕಣ್ಣುಗಳನ್ನು ನೀರಲ್ಲಿ ತೇಲಾಡಿಸಿ ಹೃದಯದ ಭಾರವನ್ನು ಹಗುರು ಮಾಡಿದನು. ಎಲ್ಲರ ಬಾಯಲ್ಲಿಯು-ಧನ್ಯ ಶಂಕರ!—ಎಂಬ ಉದ್ಗಾರ ಹೊರಟಿತು.

ಬಸವರಾಜನು ಸಭೆಗೆ ಬಂದಿರಲಿಲ್ಲ. ಯಾವುದೋ ಕೆಲಸದ ನಿಮಿತ್ತ ಮನೆಯಲ್ಲಿದ್ದನು. ಆ ತಂದೆಗೆ ಭೆಟ್ಟಿಯಾಗಬೇಕೆಂದು ಮಲ್ಲನಗೌಡರು ನಿರ್ಧರಿಸಿದ್ದರು. ಸಭೆಯು ಮುಗಿದ ಮೇಲೆ ಹೊರಟರು.

ದಾರಿಗುಂಟ ಕಾಲುಗಳು ತಡಬಡಿಸಹತ್ತಿದವು. ನಾಲಗೆಯು ಒಣಗಿ ಒಣಗಿ ಬರಹತ್ತಿತು. ಬುದ್ಧಿಯು ಏನೇನೋ ಹೇಳಿ ಅಡೆ-ತಡೆಯನ್ನುಂಟುಮಾಡಹತ್ತಿತು. ಮಾತುಗಳು ಗಂಟಲನ್ನು ಕಟ್ಟಿ ಕುತ್ತಿಗೆಯ ಶಿರಗಳನ್ನು ಕಟ್ಟಿ ಬಿಗಿಹಿಡಿದವು. ಮುದುಕರಾಗಬಂದ ತಾಯಿ-ತಂದೆಗಳನ್ನು ಯಾವ ಮಾತಿನಿಂದ ಸಮಾಧಾನಪಡಿಸಬೇಕು? ನನ್ನ ಒಣ ಮಾತುಗಳು ಅವರ ಇಳಿವಯಸ್ಸಿನ ಕೈದೀವಟಿಗೆಯನ್ನು ತಂದು ಕೊಡಬಲ್ಲವೇ? ಆ ತಾಯಿ ಎಷ್ಟು ಮರುಗುವಳೋ? ಎಂಥ ಶಾಪ ಕೊಡುವಳೋ ? ಆ ಸಾಧ್ವಿಯ ಕಣ್ಣಿಂದ ಎಂಥ ಕಿಡಿಗಳು ತೂರಿ ಬರುವವೋ? ತನ್ನನ್ನೆಲ್ಲಿ ತಟ್ಟಮುಟ್ಟ ಸುಡುವವೋ! ಇದು ಹೀಗೇಕಾಯಿತು? ಇಂಥ ನೂರಾರು, ಸಾವಿರಾರು ವಿಚಾರಗಳ ತಲಕು-ಮಲಕಿನಿಂದ ಗೌಡರ ಬುದ್ಧಿಯು ಮಹಾಪೂರಕ್ಕೆ ಸಿಕ್ಕ ಬೆಂಡಿನಂತೆ ಹೊಯಿದಾಡಹತ್ತಿತು.

ಕಡೆಗೆ ಮನೆಯನ್ನು ಮುಟ್ಟಿದರು.

ಬಾಗಿಲು ತೆರೆದಿದೆ. ಪಡಸಾಲೆಯಲ್ಲಿ ಯಾರೂ ಇರಲಿಲ್ಲ. ಕಟ್ಟೆಯನ್ನು ಏರಿದರು. ಶಂಕರನು ೧೬ ವರುಷ ಆಟವಾಡಿದ ಕ್ರೀಡಾಂಗಣವು ಕಣ್ಣನ್ನು ಬಡಿದುಕೊಂಡು ಕಂಡಿತು. ಶಂಕರನಿಲ್ಲದ ಮನೆಯು ಶೂನ್ಯಶೂನ್ಯವಾಗಿ ತೋರಿಬಂದಿತು. ತಿಳಿಯದೆ ಕಣ್ಣಿಂದ ಎರಡು ಹನಿಗಳು ಉದುರಿದವು. ಶಂಕರ! ಎಂದು ಕೂಗುವರು. ಪ್ರಜ್ಞೆ ಹಿಡಿದು ಹಿಂದೆ ಎಳೆಯಿತು. ತಿರುಗಿ ಹೋಗಬೇಕೇ? ಮಾತಾಡಿಸಲು ಬಂದಿರುವೆ. ಉಕ್ಕಿಬರುವ ಅಂತಃಕರಣವನ್ನು ಕೆಲ ಹೊತ್ತು ಬಿಗಿಹಿಡಿದರು. ಮತ್ತೆರಡು ಹೆಜ್ಜೆ ಮುಂದೆ ಹೋದರು ಬಾಗಿಲಿಗೆ ಬಂದರು. ಶಂಕರನು ಕಟ್ಟಿ ನಿಲ್ಲಿಸಿದ ಧ್ವಜ! ನಮಿಸಿದರು. "ಬ... ಬಸವರಾಜ!" ಎಂದು ತೊದಲಿಸುತ್ತ ಕೂಗಿದರು. ಒಳಗಿನಿಂದ ಯಾಕೆಂದು ಕೇಳಿದಂತಾಯಿತು. "ಬಸವರಾಜ ನಾನು!" ಎಂದು ಕಷ್ಟದಿಂದ ನುಡಿದರು.

ಬಸವರಾಜನು ಹೊರಗೆ ಬಂದನು. ಮಲ್ಲನಗೌಡರ ಹೃದಯ ಹರಿದುಕೊಂಡು ಬಾಯಿಗೆ ಬಂದಂತಾಯಿತು.

—ಓ! ಮಲ್ಲನಗೌಡರು. ಎಂದು ಓಡುತ್ತ ಬಂದು ಕಾಲಿಗೆ ಎರಗಿದನು.

ಮಲ್ಲನಗೌಡರು ಬಸವನನ್ನು ಬಿಗಿಯಾಗಿ ಅಪ್ಪಿಕೊಂಡರು.

—ಬಸವರಾಜ, ನಿನ್ನನ್ನು ಕಾಣಲು ಬಂದಿರುವೆ. ಮಲ್ಲನಗೌಡರು ಕಣ್ಣೊರಸಿಕೊಂಡರು.

—ನಿಮ್ಮ ಸಭೆ ಇದ್ದುದನ್ನು ಕೇಳಿದ್ದೆ. ಬರಲಿಲ್ಲ ಕ್ಷಮಿಸಿರಿ.

—ಇರಲಿ, ಈಗ ನಾನು ನಿನ್ನನ್ನು ಕಾಣಲು ಬಂದಿರುವೆ.

—ನಾನು ಸಹ ಕಾಣಬೇಕೆಂದಿದ್ದೆ. ಬಸವನು ಅಂದನು.

—ಬಸವ....ಗೌಡರಿಗೆ ಮಾತು ಆರಂಭಿಸಲು ತಿಳಿಯಲಿಲ್ಲ.

—ಏನು ಗೌಡರೇ!....ಸೆರೆಮನೆಯಿಂದ ಸುಖವಾಗಿ ಬಂದಿರಾ?

—ಎಲ್ಲವು ಸುಖವು ಬಸವ. ಆದರೆ ಒಂದೇ ಮಾತು ನನಗೆ ಸಂಕಟವನ್ನು ಕೊಟ್ಟಿತು.

—ಸೆರೆಮನೆಯು ಮನೆಯಂತೆ ಆದೀತೇ! ನೀವು ಅನೇಕ ಸಲ ಸೆರೆಮನೆಗೆ ಹೋದವರಿರುವಿರಿ. ನೂರು ಸಂಕಟಗಳನ್ನು ಉಣ್ಣುವ ಧೈರ್ಯ ನಿಮ್ಮಲ್ಲಿದೆ ಗೌಡರೇ....

— ಈ ಸಲ ಸಂಕಟವಾಯಿತು.

—ಸರಕಾರವು ನಿಮಗೆ ಬಹಳ ಸಂಕಟವನ್ನು ಕೊಟ್ಟಿರಬೇಕು.

—ಇಲ್ಲ ಬಸವ....

—ನಿಮ್ಮ ಸಂಕಟಕ್ಕೆ ನನ್ನನ್ನೇಕೆ ಕರೆಯಲಿಲ್ಲ?

—ಬಸವ........

—ಇಲ್ಲ ಗೌಡರೆ! ನಿಮಗೆ ಪ್ರಸಂಗ ಬಿದ್ದರೆ ಕರೆಯೆಂದು ಹೇಳಿರಲಿಲ್ಲವೇ?

—ಬಸವ, ಆ ಸಂಕಟಕ್ಕೆ ನಾನೇ ಕಾರಣನೆನ್ನುವೆನು.

—ಈಗ ಸಹ ಅದೇ ಮಾತನ್ನು ಹೇಳುವೆನು ಗೌಡರೇ! ನಿಮ್ಮ ಸಂಕಟ ನಿವಾರಣೆಗೆ ನನ್ನ ಸಹಾಯವನ್ನು ತೆಗೆದುಕೊಳ್ಳಿರಿ. ನನ್ನ ಧೈರ್ಯ ಪರೀಕ್ಷಿಸಿ ಜನರಿಗೆ ತಿಳಿಸಿರಿ.

—ಬಸವ....ನಿನ್ನ ಮಗನು ಅಂದಿನ "ಗೋಳೀಬಾರಿ"ನಲ್ಲಿ ಸತ್ತನು.........ಆ ಮೆರವಣಿಗೆಯ....

—ನನ್ನ ಮಗನು ಸತ್ತನು! ಬಸವನು ಮಾತಿನಲ್ಲಿ ಆಶ್ಚರ್ಯ ಪಡುವಂತೆ ಮಾತಾಡಿದನು.

—ಶಂಕರನು ಅಂದು ಸತ್ತನು....ಅದಕ್ಕೆ ಗೌಡರ ಕಣ್ಣಲ್ಲಿ ನೀರ ಹನಿಗಳು ಕಂಡವು.

—ಹೀಗೇಕೆ ಮಾತಾಡುವಿರಿ? ಬಸವನು ನಿರ್ವಿಕಾರ ಬುದ್ಧಿಯಿಂದ ಪ್ರಶ್ನಿಸಿದನು.

—ಬಸವ, ಮಗನು ಸತ್ತನೆಂದು ದುಃಖ ಪಡಬೇಡ. ಅವನೊಬ್ಬ ವೀರ....ಹುತಾತ್ಮ....ಊರವರೆಲ್ಲರು ಕೂಡಿ ಅವನ ಸ್ಮಾರಕವನ್ನು ಮಾಡುವರು.

—ನಿಲ್ಲಿರಿ........

—ನಾವು ಹಾಗೆ ನಿಶ್ಚಯಿಸಿರುವೆವು.

—ನಿಲ್ಲಿರಿ. ಶಂಕರನು ಸತ್ತಿಲ್ಲ. ಸುಳ್ಳು ಹೇಳಬೇಡಿರಿ. ಎಂದು ನುಡಿದು ಒಳಗೆ ಹೋದನು.

ಎರಡು ನಿಮಿಷದಲ್ಲಿ ತನ್ನ ಎಳೆಗೂಸನ್ನು ಎತ್ತಿಕೊಂಡು ಬಂದು—ಗೌಡರೇ ಶಂಕರನು ಸತ್ತಿಲ್ಲ. ಹದಿನಾರು ವರುಷದ ಶಂಕರನು ಮರಳಿ ಕೂಸಾಗಿ ಬಂದಿರುವನು. ಇವನೇ ಆ ಬಾಲ ಶಂಕರ ಎಂದು ಗೌಡರ ಕೈಯಲ್ಲಿ ಕೊಟ್ಟನು.

ಮಲ್ಲನಗೌಡರು ದಿಗ್ಭ್ರಾಂತರಾದರು. ನೀರು ತುಂಬಿದ ಕಣ್ಣಿಗೆ ಮಗುವು ಕಾಣಲಿಲ್ಲ.

—ಇವನೇ ಆ ಬಾಲಶಂಕರ, ನೋಡಿರಿ. ಇವನೇ ಆ ನಿಮ್ಮ ವೀರ ಶಂಕರ. ಎಂಬ ಬಸವನ ಮಾತು ಕಿವಿಯಲ್ಲಿ ಝೇಂಕರಿಸುತ್ತಿದ್ದವು.

ಮಲ್ಲನಗೌಡರು ಮಗುವನ್ನು ಎತ್ತಿಕೊಂಡು ಪಡಸಾಲೆಯ ತುಂಬ ತಿರುಗಾಡಹತ್ತಿದರು.

—ಧನ್ಯ ಶಂಕರ. ಧನ್ಯ ಶಂಕರ. ಧನ್ಯ ಬಸವ. ನೀವೇ ಧನ್ಯರು ಎಂದು ಮಂತ್ರಿಸುತ್ತ ಮೂಲೆಯಿಂದ ಮೂಲೆಗೆ ಶತಪಥ ಹಾಕಹತ್ತಿದರು.

ಬಾಗಿಲಲ್ಲಿ ನಿಂತ ತಂದೆತಾಯಂದಿರು ಜಲಪೂರಿತನಯನದಿಂದ ನೋಡುತ್ತಿದ್ದರು.

ಮಲ್ಲನಗೌಡರ—ಧನ್ಯ ಶಂಕರ ಎಂಬ ಮಾತು ಇನ್ನೂ ಮುಗಿದಿರಲಿಲ್ಲ.

ಕರ್ನಾಟದ ಅಂದು ಮತ್ತು ಇಂದು

—೨ ನೇ ಪುಟದಿಂದ ಮುಂದರಿದುದು

ಮರ್ಯಾದೆಯೊಡನೆ ನಮ್ಮ ಮರ್ಯಾದೆಗೂ ಕೇಡು ಇದೆಯೆಂಬ ಅರಿವು ನಮ್ಮವರಲ್ಲಿ ಬೇಗನೆ ತಲೆದೋರಲೆಂದೂ ಅದರ ಪ್ರತಿಕಾರ ಬುದ್ಧಿ ತಲೆದೋರಲೆಂದೂ ದೇವರಲ್ಲಿ ಪ್ರಾರ್ಥನೆ.

ಆಧಾರ ಗ್ರಂಥಗಳು

೧ ಶ್ರೀಮದಯ್ಯಾವಳೆಯ (ಐಹೊಳೆ) ಐನೂರ್ವರ ಸ್ವಾಮಿಗಳ್ ಮುಖ್ಯವಾಗಿ ಕನ್ನಡ ನಾಲ್ಸಾಯಿರಕಂ [ವೇ] ತೆಗೊಣಂ ಮಾಳಿಗೆಯ ಮನೆ ಕಂದಗತಿಯ ಸ್ಥಳದಲು ಶ್ರೀಮನ್ಮಹಾಪ್ರಭು ಜಕ್ಕರಸನ ಮಗ ಸೋಮರಸನ್ ಕ್ರಿ. ಶ ೧೨೧೦.

The Archeological Survey of India 1928-29; p. 118.

೨. Epigraphia India vol IV, p 336.

೩. ಝುಲ್ಲೋಮಲ್ಲಶ್ಚ ರಾಜನ್ಯಾತ್ ವ್ರಾತ್ಯಾನ್ ನಿಚ್ಛಿವಿರೇವಚ । ನಟಶ್ಚ ಕರಣಶ್ಚೈವ ಖಸೊ ದ್ರವಿಡ ಏವ ಚ ॥ ೧೦, ೨೨ ಮನಸ್ಮೃತಿ.

೪. Khandesh Gazetter, p. 1, see fool note.

೫. Vedic India vol I & II, see yadu, Turvasu.

೬. i) Indian Antiguery vol. XIII p. 275

ii) ರಾ. ಬ. ಆರ್. ನರಸಿಂಹಾಚಾರ್ಯರು, ಕ. ಸಾ. ಪ್ರ. ಪತ್ರಿಕೆ ೧೯೨೪ ಅಕ್ಟೋಬರ ಸಂಚಿಕೆ.

೭. i) The Early History of the Deccan p. 15.

ii) Indian Antiguery vol. VII p. 220

'ಯದುವಂಶ ದುಗ್ಧಾಬ್ಧಿಚಂದ್ರಃ'; 'ಸಾತ್ಯಕೀ ವರ್ಗಭಾಜಃ'; 'ಯದುವಂಶ ಕುಮುದೇಂದುಃ' ಮುಂ.

೮. Mythic Society Silver Jubilee number.

೯. Vedic Index II p. 273;

ಋಕ್ X ೬೨, ೧೦;

೧೦. i) Races of India P. 25;

ii) N. K. Dutt : Journal of the Department of Latters, Calcutta University vol XVII 1928 Part II.

ದಾಸಾಃ ಯದುತುರ್ವಶಶ್ಚ । ಋಕ್ ೧೦, ೬೨, ೧೦.

೧೧. Wilson Philological Lectures 1867; p 46, 47; 81, 87; 108.

೧೨ Risby : People of India p 33-34

Barnot : Antiguities of India 9-10.

Aryanisation of India Prof N. K. Dutt. P 87

Jean Prazyluski : Mythic Society Silver Jubiee Number p. 87.

೧೩. The Carmichael Lectures 1918. P 27

೧೪. ಕರ್ನಾಟಕದ ವೀರ ಕ್ಷತ್ರಿಯರು.

೧೫. Early History of India p. 429

೧೬. ಮನು ೨.೨೩; ಪಾತಂಜಲಿ ೨, ೪. ೧೦ Vedic Index I 337.


೧೭. i) The History of Deccan p. 7; 15.

ii) ಮಹಾರಾಷ್ಟ್ರ ಸಂಸ್ಕೃತೀಚಾ ಇತಿಹಾಸ ಪೃ. ೬೯.

೧೮. ಕವಿರಾಜ ಮಾರ್ಗ.

೧೯. ಪಾಂಗಾರಕರರ ಉಪನ್ಯಾಸ. ಮರಾಠಿ ಭಾಷೆಚೆ ಸ್ವರೂಪ' ಪೃ. ೯.

೨೦. ಕ. ಸಾ ಪತ್ರಿಕೆ 'ಅರ್ಕಾಟ ಸಂಸ್ಥಾನದ ಕೃಷಿ ಮತ್ತು 'ಪೆನುಗೊಂಡೆ ಕರ್ನಾಟಕ. ವಿಜಾಪೂರ ಮಹಾರಾಷ್ಟ್ರ! IX ಪು. ೧೩೩, ೧೩೭.



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಮೇ ೬ ರಿಂದ ೧೨ ರ ವರೆಗೆ

ಮೇಷ

ಪ್ರಕೃತಿ ಸಾಧಾರಣ, ಪ್ರಾಪಂಚಿಕ ಸುಖ ಬಹಳ ಆದರೆ ಕೆಲ ವಿಷಯುಗಳಲ್ಲಿ ಹೆಂಡತಿಗೆ ಮಾನಸಿಕ ತೊಂದರೆಯಾಗುವ ಯೋಗ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಪ್ರತಿಷ್ಠೆ ಡಳಮಳಿಸುವದು ಆದರೆ ಲಾಭ ಅನುಕೂಲ ಮಕ್ಕಳಲ್ಲಿ ಕೆಲ ಉನ್ನತಿಯ ಸಂಗತಿಗಳು. ಮಿತ್ರ ಸುಖ ಅನುಕೂಲ ವಾಹದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಪ್ರವಾಸ ಪತ್ರವ್ಯವಹಾರ ಮತ್ತು ಲೇಖ ಕೆಲಸಕ್ಕಿಂತ ಭೆಟ್ಟಿ ಸ್ವಲ್ಪ ಅನುಕೂಲ ಭರಣಿಗೆ ಹೆಚ್ಚು ತೊಂದರೆ. ತಾ॥ ೬-೯ ೧೦ ಅನುಕೂಲ.

ವೃಷಭ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಕಲಹಯುಕ್ತ ಬಂಧುವರ್ಗದವರಲ್ಲಿ ವಿರೋಧ ಇಲ್ಲವೆ ಅವರಿಗೆ ಶಾರೀರ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚ ವಿಪರೀತ. ಸ್ಥಾವರದಲ್ಲಿ ಅನಪೇಕ್ಷಿತ ಕೃತ್ಯಗಳು. ಮತ್ತು ಬಹಳ ಹಾನಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಮಿತ್ರ ಸುಖ ಉತ್ತಮ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ರೋಹಿಣಿಗೆ ತೊಂದರೆಯಿಂದಲೆ ಯಶಸ್ಸು. ತಾ ೬—೮—೧೧—೧೨ ಉತ್ತಮ.

ಮಿಥುನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೆ ಸ್ತ್ರೀ ಸುಖದಲ್ಲಿ ವಿರಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಉತ್ತಮ. ಆದರೆ ಹೆಚ್ಚವೂ ಪ್ರಮಾಣ ಮೀರಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ತೊಂದರೆ ಮತ್ತು ವೆಚ್ಚ ಹೆಚ್ಚು. ಆದರೆ ಕೊನೆಗೆ ಒಳ್ಳೆ ಅನುಕೂಲತೆ. ಮಿತ್ರ ಸುಖ ಉತ್ತಮ. ದೊಡ್ಡ ಭೆಟ್ಟಿಯ ಯೋಗ. ಪ್ರವಾಸಾದಿ ಕೆಲಸ ಹಿತದ್ದು ಆರಿದ್ರಾಕ್ಕೆ ತೊಂದರೆ ಕಡಮೆ. ತಾ ೭—೮—೯ ೧೦ ಅನುಕೂಲ.

ಕರ್ಕ

ಪ್ರಕೃತಿಗೆ ಬಹಳ ಕ್ಲೇಶ. ಹೆಂಡತಿಗೂ ಹಾಗೆಯೆ ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ. ಮಹತ್ವದ ಪ್ರತಿಷ್ಠೆ ಪ್ರಾಪ್ತವಾಗುವ ಅನಪೇಕ್ಷಿತ ಯೋಗ ಮತ್ತು ದ್ರವ್ಯ ಲಾಭ ತುಂಬ ಪ್ರತಿಯೊಂದು ಕೆಲಸದಲ್ಲಿ ಉತ್ತಮ. ಸಹಾಯಕರ್ತರು ಸಿಕ್ಕುವ ಸುದೈವ. ಆದರೆ ವಾದ ವಿವಾದಗಳಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಕೆಲ ವಿಷಯುಗಳಲ್ಲಿ ನಿರರ್ಥಕ ವೆಚ್ಚ ಪ್ರವಾಸಾದಿ ಕೆಲಸ ಬಹಳ ಹಿತದ್ದು. ಪುಷ್ಯಕ್ಕೆ ತೊಂದರೆ ಕಡಮೆ. ತಾ ೭—೮—೯—೧೦ ಅನುಕೂಲ.

ಸಿಂಹ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಸಮೀಪದ ಆಪ್ತರು ಮತ್ತು ನೆರೆಯವರು ನಿಮ್ಮ ಮೇಲೆ ತಿರುಗಿ ಬೀಳುವರು. ಉದ್ಯೋಗದಲ್ಲಿ ಪ್ರಗತಿ ಕಡಮೆಯೆ. ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ. ಪ್ರತಿಯೊಂದು ಕೆಲಸದಲ್ಲಿ ವೆಚ್ಚ ಹೆಚ್ಚು. ಆದರಲ್ಲಿ ಒಳಗಿನ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳು ಬಲಿ ಹಾಕಲು ಬಹಳ ಪ್ರಯತ್ನ ಮಾಡುವರು. ಕೊನೆಗೆ ಯಶಸ್ಸಿನ ಒಲವು ನಿಮ್ಮ ಕಡೆಗೇ ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಪೂರ್ವಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೬—೧೦--೧೧—೧೨ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಹೆಂಡತಿಗೂಡ ಅತ್ಯಂತ ಮತ್ತೈಕ್ಯ. ಮನೆಯಲ್ಲಿ ಕೆಲ ಮಂಗಳ ಮತ್ತು ಧಾರ್ಮಿಕ ಕೃತ್ಯಗಳು. ಉದ್ಯೋಗದಲ್ಲಿ ಉತ್ತಮ ಪ್ರಗತಿ ದೊಡ್ಡ ಪ್ರತಿಷ್ಠೆ ತುಂಬ ಲಾಭ. ಆದರೆ ಯಾವದೆ ಸಂಗತಿ ಪೂರ್ಣವಾಗಬೇಕಾದರೆ ಜೀವ ಮೀರಿ ಶ್ರಮ ಮಾಡಬೇಕಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಪ್ರವಾಸಾದಿ ಕೆಲಸ ಹಿತದ್ದು. ಆದರೆ ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಹಸ್ತಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೭—೮—೧೧—೧೨ ಅನುಕೂಲ.

ತುಲಾ

ಪ್ರಕೃತಿ ಸಾಧಾರಣವೆ ಹೆಂಡತಿಗೂ ಅನುಕೂಲ ಅರೋಗ್ಯವೂ ಅನುಕೂಲ. ಬಹಳ ಮತಭೇದವುಂಟಾಗಿ ಪ್ರಾಪಂಚಿಕ ವಿಷಯುಗಳಲ್ಲೆಲ್ಲ ಕಿರಕೋಳ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಕಡಮೆಯೆ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಸರಕಾರಿ ಕೆಲಸದಲ್ಲಿ ಅಧಿಕಾರಿಗಳ ಪೂರ್ವ ಪರಿಚಯದಿಂದ ಒಳ್ಳೆ ಯಶಸ್ಸು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಪಕ್ಷ ಹೆಚ್ಚು ಜೋರಿನಲ್ಲಿ. ಮಿತ್ರ ಸುಖ ಉತ್ತಮ ಸತ್ಕೃತ್ಯಗಳಲ್ಲಿ ಬಹಳ ವೆಚ್ಚ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಸ್ವಾತಿಗೆ ತೊಂದರೆ ಕಡಮೆ. ತಾ. ೭, ೮, ೯, ೧೦ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ ಪ್ರಾಪಂಚಿಕ ಸುಖ ಬಹಳ ಹಿತಕರ ಆದರೆ ರತಿ ಸುಖವನ್ನು ಬಿಟ್ಟು ಉಳಿದ ಎಲ್ಲ ವಿಷಯುಗಳಲ್ಲಿ ಹೆಂಡತಿಯಿಂದ ಬಹಳ ವಿರೋಧ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಉತ್ತಮ ಮಿತ್ರ ಸುಖ ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಬಹಳ ಉತ್ತಮ. ಅನುರಾಧೆಗೆ ತೊಂದರೆ ಕಡಮೆ. ತಾ. ೭, ೮, ೧೧, ೧೨ ಅನುಕೂಲ.

ಧನು

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಬಹಳ ಅನುಕೂಲ. ಆದರೆ ಸ್ತ್ರೀ ಸುಖದಲ್ಲಿ ಉತ್ತಮ ಪ್ರಗತಿ. ಒಳ್ಳೆ ಪ್ರತಿಷ್ಠೆ ಆದರೆ ಲಾಭ ಕಡಮೆ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರು ಸ್ವಂತದ ತಪ್ಪಿನಿಂದಲೆ ಪರಾಭವ ಹೊಂದುವರು. ಪ್ರವಾಸಾದಿ ಕೆಲಸ ಹಿತದ್ದು. ಪೂರ್ವಾಷಾಢಾಕ್ಕೆ ಹೆಚ್ಚು ತೊಂದರೆ. ತಾ. ೬, ೯, ೧೦ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಕೆಡುವದು, ಹೆಂಡತಿಗೆ ಬಹಳ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಮಿತ್ರ ಸುಖ ಅನುಕೂಲ. ಸ್ಥಾವರದಲ್ಲಿ ಸ್ವಲ್ಪ ಅನುಕೂಲ ಸಂಗತಿಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಶ್ರವಣಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೭, ೮, ೧೧, ೧೨ ಅನುಕೂಲ,

ಕುಂಭ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಇತರ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಅನುಕೂಲ ಆದರೆ ಆಪ್ತರು ಮತ್ತು ಆಶ್ರಿತರಿಂದ ಕೆಲ ದೂರುಗಳು. ಆಪ್ತರಲ್ಲಿ ಒಬ್ಬರ ಉತ್ಕರ್ಷ ಆದರೆ ಎರಡನೆಯವನದು ಅಪಕರ್ಷ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಸಾಮಾನ್ಯವೆ. ಅದರಲ್ಲಿಯೂ ಧಂದೆಯವರಿಗಿಂತ ನೋಕರಿಯವರಿಗೆ ಹೆಚ್ಚು ಅನುಕೂಲ. ಮಿತ್ರರಿಂದ ಉಪಹಾಸ. ಪ್ರವಾಸಾದಿ ಕೆಲಸ ಸ್ವಲ್ಪ ಕಷ್ಟದ್ದು. ಶತತಾರಿಕೆಗೆ ತೊಂದರೆ ಕಡಮೆ. ತಾ. ೬, ೯, ೧೦ ಅನುಕೂಲ.

ಮೀನ

ಪ್ರಕೃತಿ ಅನುಕೂಲ. ಪ್ರಾಪಂಚಿಕ ಸುಖ ಜನರಲ್ಲಿ ಪ್ರತಿಷ್ಠೆ ಹೆಚ್ಚಿಸುವಂಥದು ಆದರೆ ಮಾನಸಿಕ ದೃಷ್ಟಿಯಿಂದ ಅಸಮಾಧಾನದ್ದೇ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಉತ್ತಮ ಮತ್ತು ಲಾಭವೂ ಅದಕ್ಕೆ ಸರಿಸಮಾನವೆ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಆದರೆ ಶತ್ರುಗಳು ನಿಮ್ಮನ್ನು ಒಳ್ಳೆ ಲೋಹದಲ್ಲಿ ಸಿಲುಕಿಸುವಪ್ರಯತ್ನಗಳೂ ಜೋರಿನಿಂದ ಪ್ರಾರಂಭ. ಪ್ರವಾಸಾದಿ ಕೆಲಸ ಸುಖಕರ. ಉತ್ತರಾಭಾದ್ರಪದಕ್ಕೆ ತೊಂದರೆ ಕಡಮೆ ತಾ. ೭, ೮, ೧೧, ೧೨ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋರೆಯವರಿಂದ ಮುದ್ರಿತ ಪ್ರಕಟವಾಯಿತು.

ಹಿಂದುಸ್ತಾನದ ಆಹಾರ ಪರಿಸ್ಥಿತಿಯ ಭೀಕರ ರೂಪ

(೧ ನೇ ಪುಟದಿಂದ ಮುಂದರಿದುದು)

ಮುಂದಿನ ಬೆಳೆ ಜಗತ್ತಿನಲ್ಲೆಲ್ಲ ಬಹಳ ಚನ್ನಾಗಿ ಬರುವದೆಂದೂ ಬೇಗನೇ ಕೊರತೆ ನೀಗುವದೆಂದೂ ಹೂವರರು ನಂಬಿದ್ದಾರೆ. ಆದರೆ ಸದ್ಯಕ್ಕಂತೂ ಪರಿಸ್ಥಿತಿ, ಅದೂ ದಕ್ಷಿಣ ಭಾರತದಲ್ಲಿ, ದಿನದಿನಕ್ಕೆ ಕೆಡುತಿದೆ. ಹೂವರರು ಸಂಚರಿಸಿದ ಮೈಸೂರು ಸಂಸ್ಥಾನದ ಸಂತ್ರಸ್ತ ಭಾಗಗಳಲ್ಲಿ ನಿರ್ದಿಷ್ಟ ಸೀದಾ ಪ್ರಮಾಣ ೧೨ ಔಂಸ ಇದ್ದರೂ ಅದರಲ್ಲಿ ಗೆಣಸು ಮೊದಲಾದವುಗಳನ್ನೂ ಸೇರಿಸಿ ಭರತಿ ಮಾಡಿ ಕೊಡುತಿದ್ದಾರೆ. ಕೆಲವೆಡೆ ಸಂಗ್ರಹ ಸಾಕಷ್ಟಿಲ್ಲದಿರುವ ಮೂಲಕ ಪ್ರಮಾಣಕ್ಕಿಂತ ಕಡಿಮೆ ಹಂಚುತಿದ್ದಾರೆ. ಹೊರಗಿನ ಪೂರೈಕೆಗಳ ಬಗೆಗೆ ಅಧಿಕಾರಿಗಳು ಎಷ್ಟು ನಿರಾಶರಾಗಿರುವರೆಂಬುದನ್ನು ಕೋಲಾರ ಜಿಲ್ಹಾಧಿಕಾರಿಗಳು ಕೊಟ್ಟ ವಿವರಣೆಯಿಂದ ಅರ್ಥ ಮಾಡಿಕೊಳ್ಳಬಹುದು: ಈಗ ಪೂರ್ಣ ಸೀದಾ ಕೊಟ್ಟರೆ ಈ ಜನ ಮುಂದಿನ ತಿಂಗಳು ಪೂರ್ಣ ಉಪವಾಸ ಮಾಡಬೇಕಾಗುವದು. ಆದ್ದರಿಂದ ಮುಂದೆ ಪೂರ್ಣ ಉಪವಾಸ ಮಾಡುವದಕ್ಕಿಂತ ಈಗಲೇ ಅರ್ಧೋಪವಾಸ ಮಾಡಿ ಮುಂದಿಗಾಗಿ ಉಳಿಸಿಕೊಳ್ಳುವದೇ ಜಾಣತನ! ಆಹಾರಮಂತ್ರಿ ಶ್ರೀವಾಸ್ತವರ ಹೇಳಿಕೆಯಂತೆ ಮದ್ರಾಸ್ ಪ್ರಾಂತದ ಸ್ಥಿತಿ ಮೈಸೂರಿಗಿಂತಲೂ ಒಂದು ಕೈಮೇಲೆಯೇ ಇದೆ !

ಟನ್ನಿಗೆ ೧೦ ಸಾವು !

ಅಮೇರಿಕೆಯ ಪ್ರಸಿದ್ಧ ಲೇಖಕರಾದ ಮಾರ್ಕಿಸ್ ಚಾಯಿಲ್ಡಸರು ನ್ಯೂಯಾರ್ಕ ಪೋಸ್ಟ್‌ದಲ್ಲಿ ಹಿಂದುಸ್ತಾನದ ಆಹಾರ ಪರಿಸ್ಥಿತಿಯ ಬಗ್ಗೆ ಬರೆದ ಲೇಖವೊಂದು ಹಿಂದೀಯರಿಗೂ ಜಗತ್ತಿಗೂ ಒಳಿತಾಗಿ ಎಚ್ಚರಿಕೆ ಕೊಟ್ಟಿದೆ. ಹಿಂದುಸ್ತಾನಕ್ಕೆ ಈ ವರೆಗೆ ಕಳಿಸಿದ ಧಾನ್ಯಗಳ ಅಲ್ಪತೆಯನ್ನುಲ್ಲೇಖಿಸಿ ಅವರು, ಹಿಂದೀ ಆಹಾರ ಶಿಷ್ಟಮಂಡಲದವರು ಬೇಡಿದ ೩೦ ಲಕ್ಷ ಟನ್ ಆಹಾರ ಸಾಮಗ್ರಿಯಲ್ಲಿ ಸಂಯುಕ್ತ ಆಹಾರದ ಮಂಡಲದವರು ಕತ್ತರಿ ಪ್ರಯೋಗ ಮಾಡಿದರೆ ಹಾಗೆ ಕಡಿಮೆ ಮಾಡಿದ ಪ್ರತಿ ಟನ್ನಿಗೆ ಕನಿಷ್ಠ ಹತ್ತು ಮಂದಿ ಹಿಂದೀಯರು ಸಾಯುವರೆಂದು ಹೇಳಿದ್ದಾರೆ. ಅವರು ಬೇಡಿದ ೩೦ ಲಕ್ಷ ಟನ್ನಿನಲ್ಲಿ ಮಂಡಲದವರು ಬರಿ ೧೪ ಲಕ್ಷ ಮಂಜೂರು ಮಾಡಿದ್ದಾರೆ. ಇದರ ಅರ್ಥವೆಂದರೆ ಹಿಂದುಸ್ತಾನದಲ್ಲಿ ೬೦ ಲಕ್ಷ ಜನ ಸಾಯಬೇಕಾಗುವದು. ಈ ಭಯಾನಕ ಅಂಕೆಯನ್ನು ನೋಡಿ ಸೋಮಾರಿಗಳೂ ಬೆಚ್ಚಿಬೀಳದಿರರು ಎಂದು ಅವರು ಎಚ್ಚರಿಕೆ ಕೊಟ್ಟಿದ್ದಾರೆ. ಹೊರಗಿನಿಂದ ಬರುವ ಆಹಾರವನ್ನು ನಂಬಿ ಮಿತವ್ಯಯ ಮಾಡುವದನ್ನು ನಿಲ್ಲಿಸಬೇಡಿರೆಂದು ಮಹಾತ್ಮಾ ಗಾಂಧಿಯವರು ದಿನವೂ ಜನರಿಗೆ ಉಪದೇಶಿಸುತಿದ್ದಾರೆ.

ಅಂಚೆಯಿಂದ ತರಿಸಿಕೊಳ್ಳುವ ನಮ್ಮ

ಚಂದಾದಾರರಲ್ಲಿ ವಿನಂತಿ

ಪತ್ರವ್ಯವಹಾರ ಮಾಡುವಾಗ್ಗೆ ಮನಿಆರ್ಡರ ಕಳಿಸುವಾಗ್ಗೆ ನಿಮಗೆ ಬರುತ್ತಿದ್ದ ಪತ್ರಿಕೆಯ ಮೇಲಿನ ವಿಳಾಸದಲ್ಲಿ ನಾವು ಸೇರಿಸಿದ ನಂಬರ ಬರೆಯಬೇಕು. ನಂಬರ ಇಲ್ಲದ ಪತ್ರಕ್ಕೆ ಉತ್ತರ ಸಿಗಲಾರದು.

ಅವಧಿ ಮುಗಿಯುವ ೧೫ ದಿನ ಮುಂಚೆಯೆ ನಾವು ನಮ್ಮ ಪದ್ಧತಿಯಂತೆ ವ್ಹಿ. ಪಿ. ಮಾಡುವೆವು. ಬೇಡಾದವರು ಮೊದಲೇ ನಮಗೆ ತಿಳಿಸಬೇಕು.

ತಿಂಗಳು, ಎರಡು ತಿಂಗಳು ಚಂದಾದಾರರಾಗಲಿಚ್ಛಿಸುವವರು ಮುಂಗಡ ಹಣ ಕಳಿಸಬೇಕು. ಅವರಿಗೆ ವ್ಹಿ. ಪಿ. ಯನ್ನು ಕಳಿಸಲಾಗುವದಿಲ್ಲ. ವಾರಪತ್ರಿಕೆ (ಕರ್ಮವೀರ) ಯನ್ನು ೬ ತಿಂಗಳಿಗಿಂತ ಕಡಿಮೆ ವ್ಹಿ. ಪಿ. ಮಾಡುವದಿಲ್ಲ. ಮೊದಲನ ವ್ಹಿ. ಪಿ. ಕಳಿಸಿದ ಪ್ರತಿಯನ್ನು ನಾವು ಲೆಕ್ಕಕ್ಕೆ ಹಿಡಿಯದೆ ನಿಮ್ಮಿಂದ ವ್ಹಿ. ಪಿ. ಹಣ ಬಂದು ನಮ್ಮ ಕೈಸೇರಿದ ನಂತರ ಪತ್ರಿಕೆಯನ್ನು ಕಳಿಸಲು ಪ್ರಾರಂಭಿಸಿ ಅಂದಿನಿಂದಲೆ ನಿಮ್ಮ ಅವಧಿಯನ್ನು ಗಣಿಸಲಾಗುವದು.

—ವ್ಯವಸ್ಥಾಪಕ.

ಕರ್ಮವೀರ, ಹುಬ್ಬಳ್ಳಿ.